ಕರ್ನಾಟಕ ಸರ್ಕಾರ

ಸಮಾಜ ವಿಜ್ಞಾನ

6

ಆರನೆಯ ತರಗತಿ

ಮೊದಲನೆಯ ಸೆಮಿಸ್ಟರ್

2015

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085

ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1ರಿಂದ 4ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5ರಿಂದ 10ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಪಠ್ಯಕ್ರಮ-2005ರಂತೆ ಗಣಿತವು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದನ್ನು ಬಿಟ್ಟು ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತೆ ಮಾಡಬೇಕು. ಆದು ಸಹಕಾರೀ ಕಲಿಕೆಗೂ ಪೂರಕವಾಗಿರಬೇಕು. ಬಹುತೇಕ ಮಂದಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಗಣಿತವೆಂದರೆ ಭಯ.

ಈ ಭಯವನ್ನು ಹೋಗಲಾಡಿಸಲು ವಿನೋದಗಣಿತ, ಕಥೆಗಳು, ಒಗಟುಗಳು, ಗೂಢಪ್ರಶ್ನೆಗಳು ಮುಂತಾದ ಅಂಶಗಳನ್ನು ಸೇರಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಚಟುವಟಿಕೆಯ ಮೂಲಕ ಅಥವಾ ಕುತೂಹಲ ಕೆರಳಿಸುವ ಕಥೆಗಳ ಮೂಲಕ ಪ್ರತಿಯೊಂದು ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪ್ರಾಚೀನ ಭಾರತದ ಶ್ರೇಷ್ಠ ಗಣಿತ ಶಾಸ್ತ್ರಜ್ಞರ ಕೊಡುಗೆಗಳನ್ನು ಸೂಕ್ತ ಸಂದರ್ಭಗಳಲ್ಲಿ ಕೊಡಲಾಗಿದೆ.

ನಾವಿಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವಿಸುತಿದ್ದೇವೆ. ಕಳೆದ ಅರ್ಧಶತಮಾನದಲ್ಲಿ ಮಾನವನ ಅದ್ಭುತ ಕನಸುಗಳು ನನಸಾಗಿ ಮಾನವ ತನ್ನ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದ್ದಾನೆ. ಜೀವನವನ್ನು ಸುಗಮವನ್ನಾಗಿಸಲು ಅತ್ಯಾವಶ್ಯಕವಾದ ಸಕಲ ವಸ್ತುಗಳನ್ನು ತಯಾರಿಸಿದ್ದಾನೆ. ಹಾಗೆಯೇ ಭೋಗ ವಿಲಾಸ ಜೀವನಕ್ಕೆ ಮಾರುಹೋಗಿ ಇಂದು ಮೂಲವಿಜ್ಞಾನವನ್ನೇ ಮರೆಯುವ ಹಂತಕ್ಕೆ ಮಾನವ ತಲುಪಿರುವುದು ಒಂದು ದುರಂತವೇ ಆಗಿದೆ. ಭೋಗ ಜೀವನಕ್ಕೆ ಪುಷ್ಟಿಯನ್ನು ಕೊಡುವ ತಂತ್ರಜ್ಞಾನದತ್ತ ಇಂದು ನಮ್ಮ ಒಲವಿದ್ದು ಮೂಲವಿಜ್ಞಾನದತ್ತ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಈಗಲಾದರೂ ನಮ್ಮ ಯುವಕ ಯುವತಿಯರು ವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಸಂಪ್ರದಾಯವನ್ನು ಮುಂದುವರಿಸುವರೆಂದು ಆಶಿಸಿ ಮುಂದೆ ಬರುವ ನೂತನ ವಿಜ್ಞಾನ ಪುಸ್ತಕಗಳಲ್ಲಿ ಅವರಿಗೆ ಯೋಚಿಸುವುದು, ಆಳವಾದ ಅಧ್ಯಯನ ಮಾಡುವುದು, ಪ್ರಯೋಗಗಳನ್ನು ಮಾಡುವುದು ಹಾಗೂ ಅವರಲ್ಲಿ ಸೃಜನ ಶೀಲತೆಯನ್ನು ಬೆಳೆಸುವತ್ತ ಒಲವನ್ನುಂಟುಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಕಲಿಕೆ ಚಟುವಟಿಕೆಗಳ ಸುತ್ತಲೂ ಹೆಣೆಯುವಂತೆ ಮಾಡಲು ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಗುರುವೃಂದದವರ ಸಹಕಾರವು ಅತ್ಯಾವಶ್ಯಕ.

6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದ್ದು, ಎನ್‌ಸಿಎಫ್ 2005 ಹಾಗೂ ಕೆಸಿಎಫ್ 2007 ಇವುಗಳಲ್ಲಿ ಕಂಡುಬರುವ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಂತವಾಗಿ ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹೊಂದಿಸಲಾಗಿದೆ. ಅವುಗಳೊಂದಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ರಚಿಸಲಾಗಿದೆ. ಆದರೆ ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳು ಪುಸ್ತಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪ್ರೊ. ಜಿ.ಎಸ್. ಮುಡಂಬಡಿತ್ತಾಯ

ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ನಾಗೇಂದ್ರಕುಮಾರ್

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು.

ಪರಸ್ಪರ

ಆರನೆಯ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಒಂದು ಹಿನ್ನೆಲೆ ಇದೆ. ಕರ್ನಾಟಕ ಸರ್ಕಾರದ ಒಂದು ಪ್ರಮುಖ ಅಂಗಸಂಸ್ಥೆಯಾಗಿರುವ ಕರ್ನಾಟಕ ಪಠ್ಯಪುಸ್ತಕ ಸಂಘವು ಪ್ರಕಟಿಸಿರುವ ಈ ಪುಸ್ತಕವು 2005ರಲ್ಲಿ ಜಾರಿಗೊಳಿಸಲ್ಪಟ್ಟ ರಾಷ್ಟ್ರೀಯ ಪಠ್ಯಕ್ರಮವನ್ನು ಆಧರಿಸಿ ಕರ್ನಾಟಕ ಸರ್ಕಾರದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನಡೆಸಿದ ವಿವಿಧ ಕಾರ್ಯಾಗಾರಗಳು ಮತ್ತು ತರಬೇತಿಗಳಿಂದ ಹೊರಹೊಮ್ಮಿದ ನೂತನ ಪಠ್ಯಕ್ರಮದ ಆಧಾರವಾಗಿದೆ.

ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ಆ ಪಾಠದ ಬಗೆಗೆ ಪರಿಚಯವನ್ನು ನೀಡಲಾಗಿದೆ. ಪಾಠದ ವೇಳೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾದ ಸಾಮರ್ಥ್ಯಗಳನ್ನೂ ಕೊಡಲಾಗಿದೆ. ಚರಿತ್ರೆಯ ಪಾಠಗಳಲ್ಲಿ ಸಣ್ಣ ಪ್ರಶ್ನೆ ಅಥವಾ ಸನ್ನಿವೇಶ ಅಥವಾ ಕುತೂಹಲ ಮೂಡಿಸುವ ಪರಿಚಯಾತ್ಮಕ ದೃಷ್ಟಿಯಿಂದ ಪಾಠಗಳನ್ನು ಪ್ರಾರಂಭಿಸಲಾಗಿದೆ. ಚರಿತ್ರೆಯ ಪಾಠಗಳ ನಡುವೆ ಚಿತ್ರಗಳನ್ನು ನೀಡಲಾಗಿದ್ದು, ಇವುಗಳು ಪಾಠಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿ ಆಗಿದೆ. ಭೂಪಟಗಳು ವಿದ್ಯಾರ್ಥಿಗಳ ಕುತೂಹಲವನ್ನು ಹೆಚ್ಚಿಸುವಂತೆ ಶಿಕ್ಷಕರು ಪ್ರಯತ್ನಿಸಬೇಕಾಗಿದೆ. ಇತಿಹಾಸದ ವಿಭಾಗದಲ್ಲಿನ ಪಾಠಗಳ ಪ್ರಾರಂಭದಲ್ಲಿ ನೀಡಿರುವ ರಾಜವಂಶಗಳ ಚಿಹ್ನೆಗಳನ್ನು ಶಿಕ್ಷಕರು ಪಾಠಕ್ಕೆ ಪೂರಕ ಸಾಮಾಗ್ರಿಯಾಗಿ ಬಳಸಿಕೊಳ್ಳಲು ವಿಪುಲ ಅವಕಾಶಗಳಿವೆ. ಪಾಠಗಳ ಕೊನೆಯಲ್ಲಿ ಪಾಠಕ್ಕೆ ಸಂಬಂಧಿಸಿದ ಕಾಲಗಣನೆ ನೀಡಲಾಗಿದೆ. ಶಿಕ್ಷಕರು ಇದರ ಬಗ್ಗೆ ಪ್ರಶ್ನೆಗಳನ್ನು ಕೇಳಬಾರದೆಂಬುದು ನಮ್ಮ ಆಶಯ.

ಪಾಠಗಳ ಕೊನೆಯಲ್ಲಿ ಚಟುವಟಿಕೆಗಳನ್ನು ನೀಡಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಇವುಗಳನ್ನು ಪಾಠಗಳಿಗೆ ಪೂರಕವಾಗಿರುವಂತೆ ನೀಡಲಾಗಿದೆ. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಮತ್ತು ಹೆಚ್ಚಿನ ತಿಳುವಳಿಕೆಗಾಗಿ ಚೌಕಗಳಲ್ಲಿ ಆ ಪಾಠಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗಿದೆ. ಇವುಗಳಲ್ಲಿಯೂ ವಿಷಯಗಳ ಕುರಿತಾಗಿ ಲಿಖಿತ ಅಥವಾ ಮೌಖಿಕ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶಗಳಿರುವುದಿಲ್ಲ. ಪಾಠಗಳ ಕೊನೆಯಲ್ಲಿ ನೀಡಿರುವ 'ಚರ್ಚಿಸಿ' ಎಂಬ ವಿಷಯದಡಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಸಂವಾದ ನಡೆಸಬಹುದು ಮತ್ತು ಇದನ್ನು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತಪ್ರತಿಭೆಗೆ ವೇದಿಕೆಯಾಗುವಂತೆ ಪರಿವರ್ತಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಪೌರನೀತಿಯ ಪಾಠಗಳನ್ನು ಎರಡು ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಈ ಪಾಠಗಳಲ್ಲಿನ ಚಿತ್ರಗಳನ್ನು ಪಾಠಗಳಿಗೆ ಪೂರಕವಾಗಿ ಬಳಸಿಕೊಳ್ಳುವುದು ಶಿಕ್ಷಕರ ಕರ್ತವ್ಯವಾಗಿದೆ ಮತ್ತು ಅದು ಪಠ್ಯಪುಸ್ತಕ ರಚನಾ ಸಮಿತಿಯ ಆಶಯವು ಹೌದು. ಭೂಗೋಳಶಾಸ್ತ್ರ ವಿಭಾಗದಲ್ಲಿನ ಪಾಠಗಳಲ್ಲಿ ಹೆಚ್ಚಿನ ಮಾಹಿತಿಗಳನ್ನು ಚೌಕದಲ್ಲಿ ನೀಡಲಾಗಿದೆ ಮತ್ತು ಭೂಗೋಳಶಾಸ್ತ್ರದಲ್ಲಿ ವಿಶೇಷ ಆಸಕ್ತಿಯನ್ನು ಮೂಡಿಸುವ ಸಲುವಾಗಿ ಅವಶ್ಯವಿದ್ದೆಡೆ ಭೂಪಟಗಳು ಮತ್ತು ಚಿತ್ರಗಳನ್ನು ನೀಡಲಾಗಿದೆ. ನೈಜ ಕಲಿಕಾಂಶದ ಆರಂಭ ಹಾಗೂ ಅಂತ್ಯವನ್ನು ಸೂಚಿಸಲು ಐಕಾನ್‌ಗಳನ್ನು ಬಳಸಲಾಗಿದೆ.

ಪೌರನೀತಿ ಪಾಠಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದೆಡೆ ಸೂಕ್ತ ಚಿತ್ರಗಳನ್ನು ಅಳವಡಿಸಲಾಗಿದೆ. ಮಕ್ಕಳಲ್ಲಿ ಮೌಲ್ಯವೃದ್ಧಿಯ ನಿಟ್ಟಿನಲ್ಲಿ 'ರಾಷ್ಟ್ರೀಯ ಭಾವೈಕ್ಯ' ಮತ್ತು 'ನಮ್ಮ ರಕ್ಷಣಾ ಪಡೆಗಳು' ಪಾಠಗಳನ್ನು ರಚಿಸಲಾಗಿದೆ.

ಒಂದು ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರಿಗೆ ಲಭ್ಯವಿರುವ ಅವಧಿಯ ಆಧಾರದ ಮೇರೆ ಪಾಠಗಳನ್ನು ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಪುಸ್ತಕದಲ್ಲಿ ತಪ್ಪುಗಳು ಇರದ ರೀತಿಯಲ್ಲಿ ಪರಿಶೀಲಿಸಲಾಗಿದೆ. ಹೀಗಿದ್ದರೂ ತಪ್ಪುಗಳು, ಮಾಹಿತಿ ಕೊರತೆ, ಅಥವಾ ಸಾಮಾನ್ಯ ಕೊರತೆಗಳು ಪುಸ್ತಕದಲ್ಲಿ ಕಂಡು ಬಂದಲ್ಲಿ, ವಿದ್ಯಾರ್ಥಿಗಳು, ಅವರ ಪೋಷಕರು ಶಿಕ್ಷಕರಿಗೆ ತಿಳಿಸಿದಲ್ಲಿ ಪುಸ್ತಕವನ್ನು ಮತ್ತಷ್ಟು ಉತ್ತಮಗೊಳಿಸಲು ಮತ್ತು ತನ್ಮೂಲಕ ಅದರ ಗುಣಮಟ್ಟವನ್ನು ಹೆಚ್ಚಿಸಲು ನೆರವಾದಲ್ಲಿ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ.

ಪಠ್ಯಪುಸ್ತಕದ ರಚನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಹಕರಿಸಿದ ಸಮಿತಿಯ ಸದಸ್ಯರು, ಪರಿಶೀಲಕರು, ಸಂಪಾದಕ ಮಂಡಳಿಯ ಸದಸ್ಯರು ಮತ್ತು ಕರ್ನಾಟಕ ಪಠ್ಯಪುಸ್ತಕ ಸಂಘದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಾವು ವಂದಿಸುತ್ತೇವೆ.

ಡಾ. ಎಸ್. ನರೇಂದ್ರ ಪ್ರಸಾದ್
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ

ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು : **ಡಾ. ಎಸ್. ನರೇಂದ್ರ ಪ್ರಸಾದ್,** ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜೆ.ಎಸ್.ಎಸ್. ಮಹಿಳಾ ಕಾಲೇಜು (ಸ್ವಾಯತ್ತ), ಸರಸ್ವತಿಪುರಂ, ಮೈಸೂರು.

ಸದಸ್ಯರು : **ಡಾ. ಪಿ. ಸತೀಶ್‌ಕುಮಾರ್ ಶೆಟ್ಟಿ,** ಇತಿಹಾಸ ವಿಭಾಗ, ಸಹಪ್ರಾಧ್ಯಾಪಕರು, ಬೆಸೆಂಟ್ ಸಂಜೆ ಕಾಲೇಜು, ಮಂಗಳೂರು.

ಡಾ. ಬಾಳಾಸಾಹೇಬ ಲೋಕಾಪುರ, ಭೂಗೋಳಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬಾಗಲಕೋಟೆ.

ಶ್ರೀ ಶಂಕರ ಬಸವಣ್ಣೆಪ್ಪ ಕ್ಯಾಸ್ತಿ, ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಣ್ಣಿಕೇರಿತೋಟ, ಹಿಡಕಲ್, ರಾಯಭಾಗ, ಬೆಳಗಾವಿ ಜಿಲ್ಲೆ.

ಶ್ರೀ ಹುಸೇನ ಷರೀಫ, ಸಹಶಿಕ್ಷಕರು, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮುಸ್ಟೂರು, ಜಗಳೂರು, ದಾವಣಗೆರೆ ಜಿಲ್ಲೆ.

ಚಿತ್ರ ಕಲಾವಿದರು : **ಶ್ರೀ ತಾರಾನಾಥ ಕೈರಂಗಳ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಂಚಿ ಕೊಳ್ನಾಡು, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.

ಪರಿಶೀಲಕರು : **ಶ್ರೀ ಎಂ. ರಾಘವೇಂದ್ರ ಪ್ರಭು,** ಇತಿಹಾಸ ಪ್ರಾಧ್ಯಾಪಕರು (ನಿವೃತ್ತ), ಅನಂತ ಪ್ರಸಾದ, ದಂಬೆಲ್, ಅಶೋಕನಗರ ಅಂಚೆ, ಮಂಗಳೂರು.

ಶ್ರೀ ಪಿ. ಮಲ್ಲಪ್ಪ, ಭೂಗೋಳಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ಜೆ.ಎಸ್.ಎಸ್. ಬಡಾವಣೆ, ಮೈಸೂರು.

ಸಂಪಾದಕ ಮಂಡಳಿ : **ಡಾ. ಎಂ.ವಿ. ಶ್ರೀನಿವಾಸ್,** ಇತಿಹಾಸ ಪ್ರೊಫೆಸರ್ (ನಿವೃತ್ತ), ಹೆಚ್. ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು.

ಡಾ. ಆರ್.ಎಲ್.ಎಂ. ಪಾಟೀಲ್, ರಾಜ್ಯಶಾಸ್ತ್ರ ಪ್ರೊಫೆಸರ್ (ನಿವೃತ್ತ), 1105, ಪೂರ್ಣಾಪ್ರಜ್ಞಾನಗರ, ಉತ್ತರ ಹಳ್ಳಿ, ಬೆಂಗಳೂರು.

ಡಾ. ಈಶ್ವರಪ್ಪ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಮುಖ್ಯ ಸಂಯೋಜಕರು : **ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ

: **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ಪಾಂಡುರಂಗ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು

: **ಶ್ರೀಮತಿ ಎಸ್.ಎನ್.ಲೀಲಾವತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿವಿಡಿ

ಮೊದಲನೆಯ ಸೆಮಿಸ್ಟರ್

ಪುಟ ಸಂಖ್ಯೆ

ಪಾಠ 1	ಭಾರತ ಮತ್ತು ಹೊರಪ್ರಪಂಚ

ಪಾಠದ ಪರಿಚಯ

ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಏಕೆ ಪರಿಗಣಿಸಲಾಗಿದೆ ಎಂಬ ವಿಚಾರ ನಿಮಗೆ ತಿಳಿದಿದೆಯೆ? ಇಲ್ಲಿ ಅನೇಕ ಮತಾವಲಂಬಿಗಳು ಸೌಹಾರ್ದದಿಂದ ಜೀವಿಸುತ್ತಾರೆ. ಭಾರತದಲ್ಲಿರುವ ಕೆಲವು ಮತಗಳ ವಿಚಾರ ಈಗ ತಿಳಿಯೋಣ.

ಮಧ್ಯಯುಗದಲ್ಲಿ ಯುರೋಪ್ ಮತ್ತು ಏಷ್ಯದಲ್ಲಾದ ಭಾರಿ ಸ್ಥಿತ್ಯಂತರಗಳು ಭಾರತದ ಮೇಲೆ ಪ್ರಭಾವ ಬೀರದಿರಲಿಲ್ಲ. ಮುಖ್ಯವಾಗಿ ಕ್ರೈಸ್ತ ಮತ್ತು ಇಸ್ಲಾಂಮತಗಳ ಉದಯ, ಬೆಳವಣಿಗೆ ಹಾಗೂ ಅವು ಬೀರಿರುವ ಪ್ರಭಾವಗಳನ್ನು ಭಾರತದ ಇತಿಹಾಸದ ಸಂದರ್ಭದಲ್ಲಿ ನಾವು ಗುರುತಿಸತಕ್ಕದ್ದು. ಈ ಪಾಠದಲ್ಲಿ ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಜೀವನ ಹಾಗೂ ಬೋಧನೆಗಳನ್ನು ವಿವರಿಸಲಾಗಿದೆ. ಜೊತೆಗೆ ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಮೂಡಿಬಂದ ಹಿನ್ನೆಲೆ, ಇಸ್ಲಾಮಿಕ್ ಸಾಮ್ರಾಜ್ಯದ ಸ್ಥಾಪನೆ, ಅರಬ್ಬರ ಕೊಡುಗೆ ಮತ್ತು ಜಾಗತಿಕ ಇತಿಹಾಸದ ಮೇಲೆ ಮಂಗೋಲರು ಮತ್ತು ಆಟಮನ್ ಟರ್ಕರ ಪ್ರಭಾವವನ್ನು ನಿರೂಪಿಸಲಾಗಿದೆ.

ಸಾಮರ್ಥ್ಯಗಳು

1 ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವುದು.

2 ಅರಬ್ಬರು, ಮಂಗೋಲರು ಮತ್ತು ಟರ್ಕರ ಸಾಮ್ರಾಜ್ಯಗಳ ವಿಸ್ತರಣೆಯು ಭಾರತದ ಮೇಲೆ ಬೀರಿರುವ ಪ್ರಭಾವವನ್ನು ಅರಿತುಕೊಳ್ಳುವುದು.

3 ಕ್ರೈಸ್ತ ಮತ್ತು ಮುಸಲ್ಮಾನರ ಪವಿತ್ರ ಸ್ಥಳಗಳು ಮತ್ತಿತರ ಸಂಬಂಧಿತ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

ಇತಿಹಾಸ ಎಂದರೇನು? ಇತಿಹಾಸವು ಗತಕಾಲದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುತ್ತದೆ. ಅದು ಮಾನವನ ಸಾಧನೆಗಳನ್ನು ತಿಳಿಸುತ್ತದೆ. ಆಗಿಹೋದ ಘಟನೆಯನ್ನು ಹೇಳುವಾಗ ಮೂರು ಅಂಶಗಳು ಅಲ್ಲಿ ಇದ್ದೇ ಇರುತ್ತವೆ. ಅವೆಂದರೆ – ಯಾವಾಗ ನಡೆಯಿತು? ಎಲ್ಲಿ ನಡೆಯಿತು? ಸಂಬಂಧಪಟ್ಟವರು ಯಾರು? ಈ ಪ್ರಶ್ನೆಗಳಿಗೆ ಉತ್ತರವಾಗಿ ಇತಿಹಾಸದಲ್ಲಿ ಇಸವಿಗಳು, ಸ್ಥಳಗಳು ಹಾಗೂ ವ್ಯಕ್ತಿಗಳ ಹೆಸರುಗಳು ಬರುತ್ತವೆ.

ಈ ಕೆಳಗಿನ ಘಟನೆಯಲ್ಲಿ ಬಂದಿರುವ ಇಸವಿ, ಸ್ಥಳ ಮತ್ತು ವ್ಯಕ್ತಿಯನ್ನು ಗಮನಿಸಿ: "ಕ್ರಿಸ್ತಶಕ 1674ರಲ್ಲಿ ಶಿವಾಜಿಯ ಪಟ್ಟಾಭಿಷೇಕ ರಾಯಗಡದಲ್ಲಾಯಿತು."

ಕ್ರೈಸ್ತಮತ

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಮತಗಳಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಮತಗಳನ್ನು ಹೆಸರಿಸಬಹುದು. ಅವುಗಳ ಉದಯ, ವಿಕಾಸ ಹಾಗೂ ಅವು ಬೀರಿರುವ ಪ್ರಭಾವಗಳನ್ನು ನಾವೀಗ ತಿಳಿಯೋಣ.

ಕ್ರೈಸ್ತಮತವು ಎರಡು ಸಾವಿರ ವರ್ಷಗಳಷ್ಟು ಹಿಂದಿನದು. ಅದರ ಸ್ಥಾಪಕ ಯೇಸುಕ್ರಿಸ್ತ (ಜೀಸಸ್ ಕ್ರೈಸ್ಟ್). 'ಬೈಬಲ್' ಕ್ರೈಸ್ತ ಮತೀಯರ ಪವಿತ್ರ ಗ್ರಂಥ. ಬೈಬಲ್‌ನಲ್ಲಿ ಯೇಸುಕ್ರಿಸ್ತನ ಜೀವನದ ವಿವರಗಳು ಹಾಗೂ ಉಪದೇಶಗಳಿವೆ.

'ಜೀಸಸ್' ಕನ್ನಡದಲ್ಲಿ 'ಯೇಸು', 'ಕ್ರೈಸ್ಟ್' ಪದದ ಅರ್ಥ 'ರಕ್ಷಕ'.

ಯೇಸುಕ್ರಿಸ್ತನ ಜೀವನ: ಯೇಸು ಬೆತ್ಲಹೆಂ (ಇಸ್ರೇಲ್) ಎಂಬಲ್ಲಿ ಮೇರಿ ಎಂಬಾಕೆಯ ಮಗನಾಗಿ ಜನಿಸಿದನು. ಆತನಿಗೆ ಸುಮಾರು ಮೂವತ್ತು ವರ್ಷವಾದಾಗ ಮನೆಯಿಂದ ಹೊರಟು ಬಡವರು ಮತ್ತು ದೀನರ ಸೇವೆ ಮಾಡತೊಡಗಿದನು. ಕರುಣೆಯೇ ಧರ್ಮದ ಮೂಲವೆಂದು, ಕತೆಗಳ ಮೂಲಕ ಉದಾಹರಣೆ ನೀಡಿ ಉಪದೇಶ ಮಾಡುತ್ತಿದ್ದನು.

ಯೇಸುವಿನ ಅನುಯಾಯಿಗಳು ಹೆಚ್ಚಿದಂತೆ ಅವನ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು. ಧಾರ್ಮಿಕ ಮುಂದಾಳುಗಳು ಯೇಸುವನ್ನು ವಿರೋಧಿಸಿದರು. ಯೇಸು ರಾಜದ್ರೋಹಿಯೆಂಬ ತಪ್ಪು ಹೊರಿಸಿ, ಅವನನ್ನು ಶಿಲುಬೆಗೆ ಏರಿಸಿದರು. (ಅಪರಾಧಿಗಳಿಗೆ ಆ ಕಾಲದಲ್ಲಿ ನೀಡುತ್ತಿದ್ದ ಮರಣ ದಂಡನೆಯೆಂದರೆ ಶಿಲುಬೆಗೇರಿಸುವುದು).

ಬೋಧನೆಗಳು: • ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದನು. • ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೇಕೆಂದು ಬೋಧಿಸಿದನು. "ನಿಮ್ಮ ನೆರೆಯವನನ್ನು ನಿಮ್ಮಂತೆ ಪ್ರೀತಿಸಿ", "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿ". • ಮಾನವ ಸೇವೆಯೇ ದೇವರ ಸೇವೆ ಎಂದನು.

ಯೇಸು ಕಾಲವಾದ ಅನಂತರ ಅವನ ಬೋಧನೆಗಳನ್ನು ಅವನ ಹನ್ನೆರಡು ಮಂದಿ ಪರಮ ಶಿಷ್ಯರು ಉತ್ಸಾಹದಿಂದ ಪ್ರಚಾರ ಮಾಡಿದರು. ಪರಿಣಾಮವಾಗಿ ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತ ಸಮುದಾಯಗಳು ಅಲ್ಲಲ್ಲಿ ನೆಲೆಗೊಂಡವು. ಇದೇ ವೇಳೆ ಕ್ರೈಸ್ತಮತೀಯರು ನಾನಾ ರೀತಿಯಲ್ಲಿ ಹಿಂಸೆಗೆ ಒಳಗಾದರು. ಕಾಲಗತಿಯಲ್ಲಿ ರೋಮನ್ ಸಾಮ್ರಾಜ್ಯವು ಕ್ರೈಸ್ತಮತಕ್ಕೆ ಮಾನ್ಯತೆ ನೀಡಿತು.

ನಂತರ ಇಟಲಿಯ ರೋಮ್ ನಗರವು ಕ್ರೈಸ್ತರ ಮುಖ್ಯ ಕೇಂದ್ರವಾಗಿ ಬೆಳೆಯಿತು. ಅಲ್ಲಿನ ಪೋಪ್ ಕ್ರೈಸ್ತರ ಪರಮಗುರುಗಳಾದರು. ಯುರೋಪ್ ಮತ್ತು ಜಗತ್ತಿನ ಇತರ ಭಾಗಗಳಿಗೆ ಕ್ರೈಸ್ತಮತ ಪ್ರಚಾರಕರು ತೆರಳಿ ಅಲ್ಲಿ ಕ್ರೈಸ್ತಮತವನ್ನು ಹರಡಿದರು. ಕಾಲಕ್ರಮೇಣ ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಬೆಳೆಯಿತು. ಅದರೊಂದಿಗೆ ಪೋಪ್‌ಗುರುಗಳ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಹೆಚ್ಚಾಗತೊಡಗಿತು.

ಚಟುವಟಿಕೆ: ಶಾಂತಿದೂತ ಏಸುಕ್ರಿಸ್ತರನ್ನು ಶಿಲುಬೆಗೆ ಏರಿಸಿದುದು ಒಂದು ಪಾಪ ಕೃತ್ಯ. ಮಿತ್ರರೊಂದಿಗೆ ಚರ್ಚಿಸಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

ಇಸ್ಲಾಂಮತ

ಮಹಮ್ಮದ್ ಪೈಗಂಬರರು ಇಸ್ಲಾಂಮತದ ಸ್ಥಾಪಕರು. ಅವರು ಅರಬ್ ದೇಶದ ಮೆಕ್ಕ ನಗರದಲ್ಲಿ ಜನಿಸಿದರು.

ಪೈಗಂಬರ ಎಂದರೆ ದೇವರ ಸಂದೇಶವನ್ನು ಸಾರುವವರು; ಪ್ರವಾದಿ.

ಇಸ್ಲಾಂಪೂರ್ವದ ಅರಬ್‌ದೇಶದಲ್ಲಿ ಅನೇಕ ಚಿಕ್ಕಪುಟ್ಟ ಪಂಗಡಗಳಿದ್ದವು. ಅವುಗಳಲ್ಲಿ ಒಗ್ಗಟ್ಟಿರಲಿಲ್ಲ. ಮೆಕ್ಕದಲ್ಲಿದ್ದ ಕಾಬಾ ಮಂದಿರವು ದೊಡ್ಡ ಯಾತ್ರಾಕ್ಷೇತ್ರವಾಗಿತ್ತು. ಅಲ್ಲಿ ವಿಗ್ರಹಾರಾಧನೆ ರೂಢಿಯಲ್ಲಿತ್ತು.


ಪ್ರವಾದಿ ಮಹಮ್ಮದರ ಜೀವನ: ಮಹಮ್ಮದರ ತಂದೆ ಅಬ್ದುಲ್ಲಾ, ತಾಯಿ ಅಮೀನಾ. ಅವರು ಹುಟ್ಟುವುದಕ್ಕೆ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದರು. ಪ್ರಾರಂಭದಲ್ಲಿ ಅವರು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ನೆರವಾಗತೊಡಗಿದರು. ಮುಂದೆ, ಖದೀಜಾ ಎಂಬ ಧನಿಕ ವಿಧವೆಯೊಬ್ಬಳು ಇವರನ್ನು ತನ್ನ ವ್ಯಾಪಾರದ ಪ್ರತಿನಿಧಿಯಾಗಿ ನೇಮಿಸಿಕೊಂಡಳು. ಮುಂದೆ ಮಹಮ್ಮದರ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ಅವರನ್ನು ಮದುವೆಯಾದಳು.

ತಮ್ಮ 40ನೆಯ ವಯಸ್ಸಿನಿಂದ ಮಹಮ್ಮದರು ಪ್ರಾರ್ಥನೆ ಮತ್ತು ಧ್ಯಾನಗಳಲ್ಲಿ ಮಗ್ನರಾಗಿರುತ್ತಿದ್ದರು. ಕಾಲಸರಿದಂತೆ ದೇವರ ಸಂದೇಶಗಳನ್ನು ಸಾರಲು ಆರಂಭಿಸಿದರು. ಅಂತಹ ದಿವ್ಯ ಸಂದೇಶಗಳನ್ನು ಒಳಗೊಂಡ ಗ್ರಂಥವೇ ಇಸ್ಲಾಮಿನ ಮೂಲಗ್ರಂಥ – **ಕುರಾನ್**. ಇದು ಅರೇಬಿಕ್ ಭಾಷೆಯಲ್ಲಿದೆ.

'ಇಸ್ಲಾಂ' ಪದದ ಅರ್ಥ 'ಶರಣಾಗತಿ'. 'ಮುಸ್ಲಿಮ್' ಎಂದರೆ 'ದೇವರಿಗೆ ಶರಣಾದವರು'.

ಕಾಲಕ್ರಮೇಣ ಪ್ರವಾದಿಯವರ ಅನುಯಾಯಿಗಳ ಸಂಖ್ಯೆ ಹೆಚ್ಚಿತು. ಆ ಕಾಲದ ಧಾರ್ಮಿಕ ಆಚಾರ ವಿಚಾರಗಳನ್ನು ಅವರು ಟೀಕಿಸಿದ್ದುದರಿಂದ ಅವರ ವಿರೋಧಿಗಳ ಸಂಖ್ಯೆ ಸಹ ಬೆಳೆಯಿತು. ಹೀಗಾಗಿ ಅವರು ಮೆಕ್ಕದಿಂದ ಮದೀನಾ ನಗರಕ್ಕೆ ಹೋಗಬೇಕಾಯಿತು. ಪ್ರವಾದಿಯವರು ಮೆಕ್ಕದಿಂದ ಮದೀನಕ್ಕೆ ಹೋದ ವರ್ಷದಿಂದಲೇ ಮುಸಲ್ಮಾನರ 'ಹಿಜರಿ' (ಹೆಜಿರ) ಶಕೆ ಆರಂಭವಾದದ್ದು.

ಮದೀನಾದಲ್ಲಿ ಜನರು ಮಹಮ್ಮದರನ್ನು ಸ್ವಾಗತಿಸಿದರು. ಮುಂದೆ ಅವರು ಮೆಕ್ಕವನ್ನು ಗೆದ್ದುಕೊಂಡರು. ತನ್ನ ಶತ್ರುಗಳಿಗೆಲ್ಲ ಕ್ಷಮೆ ನೀಡಿದರು. ಅಲ್ಲಿದ್ದ ವಿಗ್ರಹಗಳನ್ನು ತೆಗೆಯಿಸಿದರು. ಅಲ್ಪಕಾಲದಲ್ಲೇ ಇಡೀ ಅರಬ್ ದೇಶದಲ್ಲಿ ಇಸ್ಲಾಂಮತ ಹರಡಿತು.



ಚಿತ್ರ 1.1 – ಕಾಬಾ – ಮುಸಲ್ಮಾನರ ಪವಿತ್ರ ಕ್ಷೇತ್ರ, ಮೆಕ್ಕ

ಇಸ್ಲಾಮಿನ ಬೋಧನೆಗಳು

- ಅಲ್ಲಾನ ಹೊರತು ಬೇರೆ ದೇವರಿಲ್ಲ; ಮಹಮ್ಮದ್ ಅವರು ದೇವರ ಪ್ರವಾದಿ. ದೇವರನ್ನು ಯಾವ ಮೂರ್ತಿಯ ರೂಪದಲ್ಲೂ ಪೂಜಿಸಬಾರದು.
- ಪ್ರತಿಯೊಬ್ಬ ಮುಸಲ್ಮಾನನೂ ದೇವರ ಸೇವಕನಾಗಬೇಕು. ಪ್ರಾಮಾಣಿಕನಾಗಿರಬೇಕು. ಎಲ್ಲಾ ಮಾನವರೂ ಸಮಾನರು.

ವ್ಯಾಪಾರಿಗಳು ಮೋಸ ಮಾಡಬಾರದು. ಬಡ್ಡಿ ವ್ಯವಹಾರ ಮಾಡಬಾರದು. ಶಿಶುಹತ್ಯೆ, ಹಂದಿ ಮಾಂಸ ತಿನ್ನುವುದು, ಮತ್ತು ಮದ್ಯಪಾನ ಸಲ್ಲದು

- ಪ್ರತಿಯೊಬ್ಬ ಮುಸಲ್ಮಾನನೂ ದಿನಕ್ಕೆ ಐದು ಬಾರಿ ಕಾಬಾದ ದಿಕ್ಕಿಗೆ ಮುಖ ಮಾಡಿ ಪ್ರಾರ್ಥನೆ (ನಮಾಜ್) ಮಾಡಬೇಕು. ರಮ್‌ಜಾನ್ ತಿಂಗಳಲ್ಲಿ ಹಗಲು ಉಪವಾಸ ಮಾಡಬೇಕು. ಶ್ರೀಮಂತರು ಬಡವರಿಗೆ ಕಡ್ಡಾಯವಾಗಿ ದಾನ (ಜಕಾತ್) ನೀಡಬೇಕು. ಸಾಧ್ಯವಾದಲ್ಲಿ ಜೀವಮಾನದಲ್ಲಿ ಒಂದು ಸಲವಾದರೂ 'ಹಾಜ್' (ಮೆಕ್ಕ) ಯಾತ್ರೆ ಮಾಡಬೇಕು.

ಚಟುವಟಿಕೆ: ಕ್ರಿಶ್ಚಿಯನ್ ಹಾಗೂ ಇಸ್ಲಾಂ ಮತಗಳು ಏನು ಬೋಧಿಸುತ್ತವೆ? ಅವುಗಳಲ್ಲಿನ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

ಇಸ್ಲಾಮಿಕ್ ಸಾಮ್ರಾಜ್ಯ: ಮಹಮ್ಮದರ ಉತ್ತರಾಧಿಕಾರಿಗಳನ್ನು ಕಲೀಫ ಎನ್ನುವರು. ಕಾಲಕ್ರಮದಲ್ಲಿ ಕಲೀಫರು ಯುದ್ಧಗಳನ್ನು ಹೂಡಿ, ವಿಜಯಗಳಿಸುತ್ತ ವಿಶಾಲವಾದ ಇಸ್ಲಾಮಿಕ್ ಸಾಮ್ರಾಜ್ಯವನ್ನು ಕಟ್ಟಿದರು. ಸಾಮ್ರಾಜ್ಯ ವಿಸ್ತರಣೆಗೊಂಡಂತೆ ಇಸ್ಲಾಮ್ ಮತಾನುಯಾಯಿಗಳ ಸಂಖ್ಯೆ ಹೆಚ್ಚಿತು. ಅರಬ್ಬರು ಭಾರತದ ಮೇಲೂ ಆಕ್ರಮಣ ಮಾಡಿದರು. ಅವರು ಸಿಂಧ್ ಪ್ರಾಂತವನ್ನು ವಶಪಡಿಸಿಕೊಂಡರಲ್ಲದೆ ಅಲ್ಲಿ ಇಸ್ಲಾಂಮತವನ್ನು ಹರಡಿದರು.

ಮುಂದೆ ಟರ್ಕರು ಅರಬ್ ಸಾಮ್ರಾಜ್ಯದ ಉತ್ತರಾಧಿಕಾರಿಗಳಾದರು. ಅವರು ಅಫ್‌ಘಾನಿಸ್ತಾನದ ಮೂಲಕ ಭಾರತವನ್ನು ಪ್ರವೇಶಿಸಿ ಹಲವಾರು ದಂಡಯಾತ್ರೆಗಳನ್ನು ನಡೆಸಿದರು. ಇವುಗಳ ಪರಿಣಾಮವಾಗಿ ಭಾರತದಲ್ಲಿ ದಿಲ್ಲಿಯ ಸುಲ್ತಾನರ ಆಳ್ವಿಕೆ ನೆಲೆಯೂರಿತ್ತಲ್ಲದೆ ಇಸ್ಲಾಂಮತ ಹರಡಿತು.

ಅರಬ್ಬರ ಕೊಡುಗೆ

- ಅರಬ್ಬರು ಗ್ರೀಕ್, ರೋಮನ್ ಮತ್ತು ಭಾರತೀಯ ಜ್ಞಾನವಿಜ್ಞಾನಗಳನ್ನು ಅರಗಿಸಿಕೊಂಡು ತಮ್ಮ ನಾಗರಿಕತೆಯನ್ನು ಶ್ರೀಮಂತಗೊಳಿಸಿದರು. ಬಾಗ್ದಾದ್ ಅವರ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು.
- ಅರಬ್ಬರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.

'ಅರೇಬಿಯನ್ ನೈಟ್ಸ್', ಉಮ್ಮರ್ ಖಯ್ಯಾಮನ 'ರುಬಿಯಾತ' ಮತ್ತು ಫಿರ್ದೂಸಿಯ 'ಷಾನಾಮ' ಇವು ಪರ್ಷಿಯನ್ ಭಾಷೆಯ ಶ್ರೇಷ್ಠ ಕೃತಿಗಳು.

ಚಟುವಟಿಕೆ: ಅರಬ್ಬರು ಭಾರತೀಯ ಗಣಿತವನ್ನು ಪ್ರಪಂಚದ ಮೂಲೆ ಮೂಲೆಗೂ ಹರಡಿದರು. ಈ ವಿಚಾರ ಚರ್ಚಿಸಿ ಒಂದು ಲಘು ಪ್ರಬಂಧ ಬರೆಯಿರಿ.

- ಅರಬ್ಬರು ಬೀಜಗಣಿತ, ರಸಾಯನಶಾಸ್ತ್ರ ಮತ್ತು ಖಗೋಳಶಾಸ್ತ್ರಗಳಿಗೆ ಮಹತ್ವದ ಕೊಡುಗೆಯನ್ನಿತ್ತರು. ಭಾರತೀಯರಿಂದ ಶೂನ್ಯವೂ (ಝೀರೊ) ಸೇರಿದಂತೆ ಅಂಕೆಗಳ ಬಳಕೆ ಅರಿತುಕೊಂಡರು. ಅವುಗಳನ್ನು ಪಾಶ್ಚಾತ್ಯ ದೇಶಗಳಿಗೂ ಮುಟ್ಟಿಸಿದರು.
- ಅರಬ್ಬರು ಭವ್ಯವಾದ ಅರಮನೆ, ಮಸೀದಿ, ಗ್ರಂಥಾಲಯ ಮತ್ತು ಆಸ್ಪತ್ರೆಗಳನ್ನು ನಿರ್ಮಾಣ ಮಾಡಿದರು. ಮೆಕ್ಕ, ಮದೀನಾ, ಬಾಗ್ದಾದ್, ಜರೂಸಲಮ್ ಮುಂತಾದ ಕಡೆ ಅವರ ಭವ್ಯ ಮಸೀದಿಗಳಿವೆ. 'ಯುನಾನಿ' ಎಂಬ ವೈದ್ಯಪದ್ಧತಿ ಅರಬ್ಬರ ಕೊಡುಗೆಯಾಗಿದೆ.

ಮತೀಯ ಯುದ್ಧಗಳು

ಯೆಹೂದಿಗಳು, ಕ್ರೈಸ್ತರು ಮತ್ತು ಮುಸಲ್ಮಾನರಿಗೆ ಪ್ಯಾಲೆಸ್ತೈನ್ ಹಾಗೂ ಅದರ ರಾಜಧಾನಿ ಜರೂಸಲಮ್ ಪವಿತ್ರ ಭೂಮಿಯಾಗಿತ್ತು. ಇದನ್ನು ವಶಪಡಿಸಿಕೊಳ್ಳುವುದಕ್ಕಾಗಿ ಕ್ರೈಸ್ತರು ಮತ್ತು ಮುಸಲ್ಮಾನರು ಒಂಬತ್ತು ಬಾರಿ ಯುದ್ಧಗೈದರು. ಈ ಯುದ್ಧಗಳನ್ನು ಇತಿಹಾಸದಲ್ಲಿ ಮತೀಯ ಯುದ್ಧಗಳು (ಕ್ರೂಸೇಡ್ಸ್) ಎನ್ನುತ್ತಾರೆ.



ಚಿತ್ರ 1.2 – ಜರೂಸಲಮ್

ಯುದ್ಧಗಳ ಕಾರಣ: ಪ್ಯಾಲೆಸ್ತೈನ್ ಆಟಮನ್ ಟರ್ಕರ ವಶದಲ್ಲಿದ್ದರೂ ಕ್ರೈಸ್ತರು ಬಹುಕಾಲದಿಂದ ಅಲ್ಲಿಗೆ ಯಾತ್ರೆಗಾಗಿ ಹೋಗಿಬರುತ್ತಿದ್ದರು. ಟರ್ಕರು ಜರೂಸಲಮ್ ಯಾತ್ರಿಗಳ ಮೇಲೆ ನಿಷೇಧ ಹೇರಿದ್ದು ಮತೀಯ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

ಮೊದಲನೆಯ ಮತೀಯ ಯುದ್ಧದಲ್ಲಿ ಸುಮಾರು 40,000 ಕ್ರೈಸ್ತರು ಯುರೋಪಿನ ವಿವಿಧ ದೇಶಗಳಿಂದ ಕಾಲ್ನಡಿಗೆಯಲ್ಲಿಯೇ ಜರೂಸಲಮಿನತ್ತ ಮುನ್ನುಗ್ಗಿ ಅದನ್ನು ವಶಪಡಿಸಿಕೊಂಡರು. ಆದರೆ ಮುಂದಿನ ಯಾವ ಯುದ್ಧದಲ್ಲಿಯೂ ಕ್ರೈಸ್ತರು ಹೇಳಿಕೊಳ್ಳುವಂಥ ಜಯ ಸಾಧಿಸಲಿಲ್ಲ.

ದುರಂತಮಯವಾಗಿದ್ದ ನಾಲ್ಕನೆಯ ಕ್ರೂಸೇಡ್‌ನಲ್ಲಿ ಯುರೋಪಿನ ಸುಮಾರು 50,000 ಮಕ್ಕಳು ಭಾಗವಹಿಸಿದರು. ಆದರೆ ಕೆಲವು ಮಕ್ಕಳು ದಾರಿಯಲ್ಲಿಯೇ ಬಳಲಿಕೆಯಿಂದ ಅಸುನೀಗಿದರು. ಅನೇಕ ಮಕ್ಕಳನ್ನು ಶತ್ರುಗಳು ಬಂಧಿಸಿ ಗುಲಾಮರನ್ನಾಗಿ ಮಾಡಿದರು.

ಯುದ್ಧದ ಪರಿಣಾಮಗಳು: ಒಟ್ಟಿನಲ್ಲಿ ಪವಿತ್ರ ಭೂಮಿಯನ್ನು ವಶಪಡಿಸಿಕೊಳ್ಳುವುದರಲ್ಲಿ ಕ್ರೈಸ್ತರು ವಿಫಲರಾದರು. ಯುರೋಪ್ ಮತ್ತು ಏಷ್ಯದೊಳಗಿನ ಸಂಪರ್ಕ ಹಾಗೂ ವ್ಯಾಪಾರ ಸಂಬಂಧಗಳು ವೃದ್ಧಿಗೊಂಡವು.



ಚಿತ್ರ 1.3 – ಮತೀಯ ಯುದ್ಧದ ಚಿತ್ರ

ಮಂಗೋಲರು

ಮಂಗೋಲಿಯ ಮಧ್ಯ ಏಷ್ಯದ ಸಮೃದ್ಧ ಹುಲ್ಲುಮೈದಾನಗಳ ನಾಡು. ಇಲ್ಲಿನ ಅಲೆಮಾರಿ ಜನರೇ ಮಂಗೋಲರು. ಪಶುಪಾಲನೆ ಅವರ ಮುಖ್ಯ ವೃತ್ತಿ.

ಚಂಗಿಸ್ ಖಾನ್: ಮಂಗೋಲರನ್ನು ಚಂಗಿಸ್ ಖಾನ್ ಒಂದುಗೂಡಿಸಿ ಏಷ್ಯದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಿದನು (ಭೂಪಟ ನೋಡಿ). ಆದರೆ ಈತನು ಮಾಡಿರುವ ಅಮಾನುಷ ಕೃತ್ಯಗಳು ಇತಿಹಾಸವನ್ನು ಓದುವವರ ಮೈ ನಡುಗಿಸುವಂತಹವು.


ಕುಬ್ಲಾಯ್ ಖಾನ್: ಕುಬ್ಲಾಯ್ ಖಾನ್ ಚಂಗಿಸ್ ಖಾನನ ಮೊಮ್ಮಗ. ಚೀನಾ ದೇಶದ ಚಕ್ರವರ್ತಿಯಾಗಿ ಕುಬ್ಲಾಯ್ ಖಾನ್ ಮೆರೆದನು. ಉತ್ತಮ ಆಡಳಿತಗಾರ; ದಯಾಳು ಸಮ್ರಾಟ. ಇವನು ಅನೇಕ ಜನಪರ ಕಾಮಗಾರಿಗಳನ್ನು ಕೈಗೊಂಡನು. ಕ್ಷಾಮಗಳು ತಲೆದೋರಿದಾಗ ಹಸಿದವರಿಗೆ ಅನ್ನದಾನ ಮಾಡಿದನು. ಕಲೆ ಮತ್ತು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು.



ಚಿತ್ರ 1.4 – ಚಂಗಿಸ್ ಖಾನ್



ಚಿತ್ರ 1.5 – ಕುಬ್ಲಾಯ್ ಖಾನ್



ಚೀನಾ ದೇಶದ ಧರ್ಮ–ಸಂಸ್ಕೃತಿಗಳು ಕುಬ್ಲಾಯ್ ಖಾನನ ಮೇಲೆ ಪ್ರಭಾವ ಬೀರಿದವು. ಈತನು ಬೌದ್ಧಮತಕ್ಕೆ ಪರಿವರ್ತನೆಗೊಂಡನು.

ಉತ್ತಮರ ಸಂಪರ್ಕದಿಂದ ಪರಿವರ್ತನೆ ಸಾಧ್ಯ ಎಂಬುದಕ್ಕೆ ಕುಬ್ಲಾಯ್ ಖಾನ್ ಒಳ್ಳೆಯ ನಿದರ್ಶನ.

ತೈಮೂರ್: ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನನ ಸಾಮ್ರಾಜ್ಯವನ್ನು ತೈಮೂರ್ ಮತ್ತೊಮ್ಮೆ ಕಟ್ಟಿದನು. ತೈಮೂರ್ ಅತಿ ಕ್ರೂರಿ. ಪರ್ಷಿಯ, ಇರಾಕ್, ಸಿರಿಯ, ಅಫ್‌ಘಾನಿಸ್ತಾನ ಹಾಗೂ ರಷ್ಯದ ಅನೇಕ ಭಾಗಗಳನ್ನು ಆಕ್ರಮಣ ಮಾಡಿ, ವಿಶಾಲ ಸಾಮ್ರಾಜ್ಯವನ್ನು ಕಟ್ಟಿದ. ಭಾರತವನ್ನು ಆಕ್ರಮಣ ಮಾಡಿ ಮೊಗಲ್ (ಮಂಗೋಲ್) ರಾಜ್ಯವನ್ನು ಸ್ಥಾಪಿಸಿದ ಬಾಬರ್ ಇದೇ ಸಂತತಿಯವನು.

ಆಟಮನ್ ಟರ್ಕರು

ಅಲೆಮಾರಿ ಜನಾಂಗಕ್ಕೆ ಸೇರಿದ ಟರ್ಕರ ಮೂಲಸ್ಥಾನ ಮಧ್ಯ ಏಷ್ಯದ ತುರ್ಕಿಸ್ತಾನ (ಈಗಿನ ತುರ್ಕ್‌ಮೆನಿಸ್ತಾನ). ಇವರು ಇಸ್ಲಾಂಮತಾನುಯಾಯಿಗಳಾದರು. ಕುಬ್ಲಾಯ್ ಖಾನನ ಸಾಮ್ರಾಜ್ಯ ಅವನತಿ ಕಂಡ ಬಳಿಕ, ಟರ್ಕರು ಸುತ್ತಮುತ್ತಲಿನ ವಿಶಾಲವಾದ ಪ್ರದೇಶಗಳನ್ನು ಆಕ್ರಮಿಸಿಕೊಂಡರು. 'ಆಟಮನ್' ಎಂಬ ಮಿಲಿಟರಿ ರಾಜ್ಯವನ್ನು ಕಟ್ಟಿದರು. ಭಾರತದ ಮೇಲೆ ಆಕ್ರಮಣ ನಡೆಸಿ, ಸಂಪತ್ತನ್ನು ಲೂಟಿ ಮಾಡಿ, ಸಾಕಷ್ಟು ಸಾವು ನೋವುಗಳಿಗೆ ಕಾರಣರಾದರು. ✤


ಇತಿಹಾಸದಲ್ಲಿ ಕಾಲಗಣನೆ (ಕ್ರಿ.ಶ.)

ಕಾಲಗಣನೆಯನ್ನು ಮಹತ್ವಪೂರ್ಣವಾದ ದಿನದಿಂದ ಆರಂಭಿಸಲಾಗುತ್ತದೆ. ಅಂಥ ಕಾಲಗಣನೆಯನ್ನು ಶಕ(ಶಕೆ) ಎನ್ನುತ್ತೇವೆ. ಕ್ರಿಸ್ತಶಕವು ಯೇಸುಕ್ರಿಸ್ತನು ಬದುಕಿದ ಕಾಲಾವಧಿಯ ನಿರ್ದಿಷ್ಟ ವರ್ಷದಿಂದ ಪ್ರಾರಂಭವಾಗುತ್ತದೆ. ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ಸ್ಥಾಪನೆಯಾಯಿತು ಎಂದರೆ ಅದು ಸ್ಥಾಪನೆಯಾಗಿ ಪ್ರಭುವಿನ ವರ್ಷದಿಂದ 1336 ವರ್ಷಗಳು ಕಳೆದಿವೆ ಎಂದು ಅರ್ಥ. ಕ್ರಿಸ್ತಪೂರ್ವ (ಬಿ.ಸಿ.) 220 ಎಂದರೆ 'ನಮ್ಮ ಪ್ರಭುವಿನ ವರ್ಷ'ಕ್ಕೆ ಮುನ್ನ 220 ವರ್ಷಗಳ ಹಿಂದೆ ಎಂದು ಅರ್ಥ.

• ಕಾಲಗಣನೆಯನ್ನು ಇನ್ನಿತರ ಶಕೆಗಳಲ್ಲಿಯೂ ಮಾಡುತ್ತಾರೆ. ಶಾಲಿವಾಹನ, ಗುಪ್ತ, ವಿಕ್ರಮ, ಹಿಜರಿ ಇನ್ನೂ ಮುಂತಾದ ಶಕೆಗಳಿವೆ. ಸಾಮಾನ್ಯವಾಗಿ ಇತಿಹಾಸ ನಿರೂಪಣೆಯಲ್ಲಿ ಕ್ರಿಸ್ತಶಕ ರೂಢಿಯಲ್ಲಿದೆ.

• ಒಂದು ಶತಮಾನವೆಂದರೆ ನೂರು ವರ್ಷಗಳು. ನಾವು ಕ್ರಿಸ್ತಶಕ 21ನೇ ಶತಮಾನದವರು (2001ರಿಂದ 2100).

ಚಟುವಟಿಕೆ: ಕಾಲಗಣನೆಯ ವಿಚಾರದಲ್ಲಿ ಶಕೆಗಳ ಹೆಚ್ಚಿನ ವಿವರಗಳನ್ನು ಅಂತರ್‌ಜಾಲದಿಂದ ಸಂಗ್ರಹಿಸಿ ಪಟ್ಟಿ ಮಾಡಿ.



• ಇಸವಿಗಳು ಮಾನವನ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಘಟನೆಗಳು ನಡೆದ ಕಾಲಕ್ರಮವನ್ನು ತಿಳಿಸುವುದೇ ಇಸವಿಗಳನ್ನು ಸೂಚಿಸುವ ಉದ್ದೇಶವಾಗಿದೆ. ಇಸವಿಗಳನ್ನು ಕಂಠಪಾಠ ಮಾಡುವುದಕ್ಕಾಗಿ ಮಾತ್ರವೇ ಹೇಳಲಾಗಿಲ್ಲ.

ಕಾಲಗಣನೆ (ಕ್ರಿ.ಶ.)

ಮತೀಯ ಯುದ್ಧಗಳು	–	12–13ನೇ ಶತಮಾನ
ಮಕ್ಕಳ ಕ್ರೂಸೇಡ್	–	1212
ಪ್ರವಾದಿ ಮಹಮ್ಮದ್	–	ಸುಮಾರು 569–632
ಹಿಜರಿ ಶಕ	–	622ರಿಂದ ಪ್ರಾರಂಭ
ಚಂಗಿಸ್ ಖಾನ್	–	1162–1227
ಕುಬ್ಲಾಯ್ ಖಾನ್	–	1280–1294
ತೈಮೂರ್	–	1369–1405

ನಿಮಗೆ ತಿಳಿದಿರಲಿ

ಬೆತ್ಲಹೆಂ – ಜರೂಸಲಮಿನ ಸಮೀಪದ ಒಂದು ಚಿಕ್ಕ ಪಟ್ಟಣ. ಇದು ಇಂದಿನ ಇಸ್ರೇಲ್‌ನ ಜೂಡಿಯ ಎಂಬ ಪ್ರದೇಶದಲ್ಲಿದೆ. ಯೇಸು ಯೆಹೂದಿ (ಹೀಬ್ರೂ) ಸಂತತಿಯವ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಯೇಸುಕ್ರಿಸ್ತ ಎಲ್ಲಿ ಜನಿಸಿದನು? ಅವನ ತಾಯಿ ಯಾರು?

2 ಕ್ರೈಸ್ತಮತದ ಮೂಲಗ್ರಂಥ ಯಾವುದು?

3 ಯೇಸುಕ್ರಿಸ್ತನ ಮುಖ್ಯ ಬೋಧನೆಗಳು ಯಾವುವು?

4 ಪೋಪ್‌ಗುರುಗಳು ಎಂದರೆ ಯಾರು?

5 ಮತೀಯ ಯುದ್ಧಗಳಿಗೆ ಮುಖ್ಯ ಕಾರಣ ಯಾವುದು?

6 ಮಹಮ್ಮದ್ ಪೈಗಂಬರ ಎಲ್ಲಿ ಜನಿಸಿದರು? ಇಸ್ಲಾಮಿನ ಮೂಲಗ್ರಂಥ ಯಾವುದು?

7 ಪ್ರವಾದಿ ಮಹಮ್ಮದರ ಮುಖ್ಯ ಬೋಧನೆಗಳು ಯಾವುವು?

8 ಅರಬ್ಬರ ಯಾವುದಾದರೂ ಎರಡು ಕೊಡುಗೆಗಳನ್ನು ಹೇಳಿ.

9 ಕುಬ್ಲಾಯ್ ಖಾನ್ ಯಾರು?

10 ಆಟಮನ್ ಟರ್ಕರ ಬಗ್ಗೆ ಟಿಪ್ಪಣಿ ಬರೆಯಿರಿ.

ಚಟುವಟಿಕೆಗಳು

1 ಬೈಬಲಿನ ದೃಷ್ಟಾಂತ ಕಥೆಗಳನ್ನು ಓದಿ.

2 ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನು ಓದಿ.

3 ಕುರಾನ್ ಪಠಣವನ್ನು ಆಲಿಸಿ.

4 ಪ್ರವಾದಿ ಮಹಮ್ಮದರ ಜೀವನ ಚರಿತ್ರೆಯನ್ನು ಓದಿ.

5 ಭೂಪಟದಲ್ಲಿ ಕ್ರೈಸ್ತ ಮತ್ತು ಇಸ್ಲಾಂಮತಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಿ.

☆ ☆ ☆

ಪಾಠ 2	ಭಾರತದ ಇತಿಹಾಸದಲ್ಲಿ ರಜಪೂತರು

ಪಾಠದ ಪರಿಚಯ

ಕ್ರಿ.ಶ. 650ರಿಂದ 1200ರ ಕಾಲಾವಧಿಯಲ್ಲಿ ರಜಪೂತ ವಂಶಗಳು ಭಾರತದ ಇತಿಹಾಸದಲ್ಲಿ ಬಹುಮುಖ್ಯ ಪಾತ್ರ ವಹಿಸಿದವು. ಈ ಪಾಠದಲ್ಲಿ ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಅವುಗಳ ಕೊಡುಗೆ; ಕೆಲವು ಪ್ರಸಿದ್ಧ ವಂಶಗಳಾದ ಗುರ್ಜರ ಪ್ರತಿಹಾರ, ಪಾಲ, ಚೌಹಾಣ ಮತ್ತು ಗುಹಿಲರ ಸಾಧನೆ; ಮತ್ತು ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ನಿರೂಪಿಸಲಾಗಿದೆ.

ಸಾಮರ್ಥ್ಯಗಳು

1 ರಜಪೂತರ ವಂಶಗಳು ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಪ್ರಶಂಸಿಸುವುದು.

2 ಕೆಲವು ರಜಪೂತ ವಂಶಗಳ ಮುಖ್ಯ ಸಾಧನೆಗಳನ್ನು ತಿಳಿದುಕೊಳ್ಳುವುದು.

3 ರಜಪೂತರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

ರಜಪೂತರು ಯಾರು? ರಜಪೂತರು ಸಾಹಸ, ಪರಾಕ್ರಮಗಳಿಗೆ ಹೆಸರಾದವರು. ಅವರು ತಮ್ಮನ್ನು ಕ್ಷತ್ರಿಯರು, ತಮ್ಮದು ಸೂರ್ಯವಂಶ ಮತ್ತು ಚಂದ್ರವಂಶ ಎಂದು ಗುರುತಿಸಿಕೊಳ್ಳುತ್ತಾರೆ. ರಜಪೂತ ವಂಶಗಳು ಉತ್ತರ ಭಾರತದಲ್ಲಿ ಸುಮಾರು 500 ವರ್ಷಗಳ ಕಾಲ ಆಳ್ವಿಕೆ ನಡೆಸಿದವು. ಅದೊಂದು ಭವ್ಯವಾದ ಕಾಲವಾಗಿತ್ತು. ಆಕ್ರಮಣಕಾರರಾಗಿ ಭಾರತಕ್ಕೆ ಬಂದಿದ್ದ ಅರಬ್ಬರು, ಟರ್ಕರು, ಅಫ್‌ಘನರು ಮತ್ತು ಮೊಗಲರನ್ನು ಎದುರಿಸಿ, ಅವರೊಡನೆ ದಿಟ್ಟತನದಿಂದ ಹೋರಾಡಿದವರು ಇವರೇ.

ರಜಪೂತರ ಗುಣಧರ್ಮಗಳು

ಭಾರತದ ಇತಿಹಾಸದಲ್ಲಿ ರಜಪೂತರಿಗೆ ವಿಶಿಷ್ಟ ಸ್ಥಾನವಿದೆ. ಗೋವುಗಳು, ಅನಾಥರು, ದುರ್ಬಲರು ಮತ್ತು ಸ್ತ್ರೀಯರ ರಕ್ಷಣೆ ಮಾಡುವುದು ತಮ್ಮ ಧರ್ಮವೆಂದು ಅವರು ಭಾವಿಸಿದ್ದರು. ಶರಣಾಗತರಾದವರನ್ನು ರಕ್ಷಿಸುತ್ತಿದ್ದರು. ತಮ್ಮ ಪೂರ್ವಜರ ಪರಾಕ್ರಮಗಳ ಬಗ್ಗೆ ಕಥನಗಳನ್ನು ಹಾಡಿ ಸ್ಫೂರ್ತಿ ಪಡೆದುಕೊಳ್ಳುತ್ತಿದ್ದರು.

ರಜಪೂತ ಸ್ತ್ರೀಯರು ಅತೀ ಧೈರ್ಯಶಾಲಿಗಳಾಗಿದ್ದರು. ಸ್ತ್ರೀಯರು ತಮ್ಮ ಪತಿಯನ್ನು ಯುದ್ಧದಲ್ಲಿ ಕಳೆದುಕೊಂಡಾಗ, ಅವಮಾನಿತರಾಗಿ ಬಾಳುವುದಕ್ಕಿಂತ ಮರಣವೇ ಲೇಸೆಂದು ಭಾವಿಸಿ ಸಾಮೂಹಿಕ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು. ಈ ರೂಢಿಯನ್ನು 'ಜೋಹಾರ್' ಎನ್ನುವರು.

ವಾಸ್ತುಶಿಲ್ಪ

ರಜಪೂತ ಕಾಲದ ವಾಸ್ತುಶಿಲ್ಪ, ಸಾಹಿತ್ಯ ಮತ್ತು ಕಲೆಗಳು ಶ್ರೀಮಂತವಾಗಿವೆ. ಅವರ ಕಲಾತ್ಮಕ ದೇವಾಲಯಗಳು, ಸುಂದರ ಅರಮನೆಗಳು ಮತ್ತು ಬಲಿಷ್ಠ ಕೋಟೆಗಳನ್ನು ನಾವು ಇಂದಿಗೂ ಹೆಮ್ಮೆಯಿಂದ ಕಾಣಬಹುದು. ಅಂತಹ ಕೆಲವು ವಾಸ್ತುಕೃತಿಗಳು ಇಲ್ಲಿವೆ.

ಖಜುರಾಹೊ (ಮಧ್ಯ ಪ್ರದೇಶ): ಖಜುರಾಹೊ ಎಂಬಲ್ಲಿನ ವಿಶ್ವವಿಖ್ಯಾತ ಕಂಡರಾಯ ಮಹಾದೇವ ಮಂದಿರ. ಇಲ್ಲಿ 85 ಮಂದಿರಗಳಿದ್ದುವು. ಅವುಗಳಲ್ಲಿ ಈಗ 22 ಉಳಿದಿವೆ.




ಚಿತ್ರ 2.1 – ಕಂಡರಾಯ ಮಹಾದೇವ ಮಂದಿರ, ಖಜುರಾಹೊ

ದಿಲ್‌ವಾರಾ (ರಾಜಸ್ಥಾನ): ಅಬು ಪರ್ವತದ ಮೇಲಿನ ದಿಲ್‌ವಾರಾ ಎಂಬಲ್ಲಿನ ಅಮೃತ ಶಿಲಾಮಂದಿರ. ಇಲ್ಲಿನ ಸೂಕ್ಷ್ಮ ಕೆತ್ತನೆಯ ಮೋಹಕ ಕೃತಿಗಳು ಜಗತ್ಪ್ರಸಿದ್ಧವಾಗಿವೆ.




ಚಿತ್ರ 2.2 – ದಿಲ್‌ವಾರಾ ಮಂದಿರ, ಅಬು ಪರ್ವತ

ಕೋನಾರ್ಕ್ (ಒಡಿಶ): ಕೋನಾರ್ಕ್ ಎಂಬಲ್ಲಿನ ಅಪೂರ್ವ ಸೂರ್ಯ ದೇವಸ್ಥಾನ. ಸೂರ್ಯದೇವನ ರಥದಂತೆ ಇರುವ ಇದು ಭಾರತದ ಭವ್ಯ ಹಾಗೂ ಬೃಹತ್ ದೇವಾಲಯಗಳಲ್ಲಿ ಒಂದಾಗಿದೆ. ರಥದ 24 ಗಾಲಿಗಳನ್ನು ಸುಂದರವಾಗಿ ಕೊರೆಯಲಾಗಿದೆ.



ಚಿತ್ರ 2.3 – ಸೂರ್ಯ ಮಂದಿರ, ಕೋನಾರ್ಕ್.

ಭುಬನೇಶ್ವರ (ಒಡಿಶ): ಭುಬನೇಶ್ವರ ಎಂಬಲ್ಲಿನ ಲಿಂಗರಾಜ ದೇವಾಲಯ. ಒಂದು ಸಾವಿರ ವರ್ಷಗಳಷ್ಟು ಹಳೆಯದು. ಇದರ ಶಿಖರವು 180 ಅಡಿ ಎತ್ತರವಿದೆ.




ಚಿತ್ರ 2.4 – ಲಿಂಗರಾಜ ದೇವಾಲಯ, ಭುಬನೇಶ್ವರ



ಚಿತ್ರ 2.5 – ಗ್ವಾಲಿಯರ್ ಕೋಟೆ

ಗ್ವಾಲಿಯರ್ (ಮಧ್ಯ ಪ್ರದೇಶ): ಬೃಹದಾಕಾರದ ಗ್ವಾಲಿಯರ್ ಕೋಟೆಯನ್ನು 'ಭಾರತದ ಕೋಟೆಗಳ ಕೊರಳ ಹಾರದ ಮುತ್ತು' ಎಂದು ಕರೆದಿದ್ದಾರೆ. ಇಲ್ಲಿ ರಾಜಾ ಮಾನಸಿಂಗನು ತನ್ನ ನೆಚ್ಚಿನ ರಾಣಿ ಮೃಗನಯನೆಗಾಗಿ ಕಟ್ಟಿಸಿದ ಎರಡಂತಸ್ತಿನ ಅರಮನೆಯಿದೆ. ಹೊರಭಾಗದ ಬಂಡೆಗೋಡೆಗಳಲ್ಲಿ ಕೊರೆಯಲಾದ ಹಲವಾರು ಮೂರ್ತಿಗಳಲ್ಲಿ ಜೈನಮತದ ಪ್ರಥಮ ತೀರ್ಥಂಕರ ಋಷಭ (ಆದಿನಾಥ) ಮೂರ್ತಿ ಭಾರಿ ಎತ್ತರವಾಗಿದೆ.

ಜೈಪುರ (ರಾಜಸ್ಥಾನ): ಜೈಪುರವನ್ನು 'ಗುಲಾಬಿ ನಗರ' ಎನ್ನುವರು. ಏಕೆಂದರೆ ಇಲ್ಲಿನ ಕಟ್ಟಡಗಳ ಬಣ್ಣ ಗುಲಾಬಿ. ಜೈಪುರ ಪ್ರಪಂಚದ ಸುಂದರ ನಗರಗಳಲ್ಲೊಂದು ಎಂಬ ಹೊಗಳಿಕೆಗೆ ಪಾತ್ರವಾಗಿದೆ. ಐದು ಅಂತಸ್ತುಗಳುಳ್ಳ ಹವಾಮಹಲ್ ಜೈಪುರದ ಒಂದು ಆಕರ್ಷಕ ಕಟ್ಟಡ.




ಚಿತ್ರ 2.6 – ಹವಾಮಹಲ್, ಜೈಪುರ

ಉದಯಪುರ (ರಾಜಸ್ಥಾನ): ಭಾರತದ ರಮಣೀಯ ನಗರವಾದ ಉದಯಪುರದಲ್ಲಿನ ಅರಮನೆ ರಾಜಸ್ಥಾನದಲ್ಲೇ ದೊಡ್ಡದು.




ಚಿತ್ರ 2.7 – ಅರಮನೆ, ಉದಯಪುರ

ಚಿಕಣಿ ಚಿತ್ರಗಳು: ರಜಪೂತರು ಭಿತ್ತಿ ಮತ್ತು ಚಿಕಣಿ ವರ್ಣಚಿತ್ರಗಳನ್ನು ಪ್ರೋತ್ಸಾಹಿಸಿದರು. (ಚಿಕಣಿ ಚಿತ್ರವೆಂದರೆ ನಾಜೂಕಾಗಿ ಚಿತ್ರಿಸಿದ ಕಿರುಚಿತ್ರ). ದೇವಾಲಯ, ಅರಮನೆ, ಗೋಡೆಗಳು ಹಾಗೂ ಪುಸ್ತಕಗಳಲ್ಲಿ ಅಲಂಕಾರ ಚಿತ್ರಗಳನ್ನು ಕಲಾವಿದರು ರಚಿಸಿದರು.



ಚಿತ್ರ 2.8 – ರಜಪೂತ ಚಿಕಣಿ ಚಿತ್ರ

ಸಾಹಿತ್ಯ: ರಜಪೂತರ ಕಾಲದಲ್ಲಿ ಸಂಸ್ಕೃತ ಸಾಹಿತ್ಯ ಹುಲುಸಾಗಿ ಬೆಳೆಯಿತು. ಗುಜರಾತಿ, ಹಿಂದಿ, ರಾಜಸ್ಥಾನಿ ಭಾಷೆಗಳು ಅಭಿವೃದ್ಧಿ ಹೊಂದಿದವು. ಚಾಂದ್ ಬರ್ದಾಯಿಯ 'ಪೃಥ್ವೀರಾಜ ರಾಸೊ' ಈ ಕಾಲದ ಪ್ರಸಿದ್ಧ ಹಿಂದಿ ಕೃತಿ. ರಜಪೂತ ದೊರೆಗಳಲ್ಲಿ ಅನೇಕ ಮಂದಿ ಸ್ವತಃ ವಿದ್ವಾಂಸರಾಗಿದ್ದರು. ಕವಿಗಳಿಗೆ ಆಶ್ರಯ ನೀಡಿದರು. 'ಗೀತಗೋವಿಂದ' ಬರೆದ ಜಯದೇವ ಕವಿ ಸೇನರ ಆಸ್ಥಾನದಲ್ಲಿದ್ದನು. ನಲಂದಾ, ಕಾಶಿ, ವಿಕ್ರಮಶೀಲ, ಉಜ್ಜಯಿನಿ ಮುಂತಾದ ಪ್ರಾಚೀನ ವಿದ್ಯಾಕೇಂದ್ರಗಳಿಗೆ ರಜಪೂತರು ಬೆಂಬಲ ನೀಡಿದರು.



ಚಟುವಟಿಕೆ: ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳ ವಿಚಾರ ಹೆಚ್ಚಿನ ಮಾಹಿತಿಗಳನ್ನು ಅಂತರ್‌ಜಾಲದಿಂದ ಸಂಗ್ರಹಿಸಿ ಒಂದು ವರದಿ ಸಿದ್ಧಪಡಿಸಿ.

ರಜಪೂತ ಮನೆತನಗಳು

ಭಾರತದ ಇತಿಹಾಸದಲ್ಲಿ ಅನೇಕ ರಜಪೂತ ಮನೆತನಗಳು ಪ್ರಮುಖ ಪಾತ್ರ ವಹಿಸಿದವು. ಅವುಗಳ ಪೈಕಿ ಗುರ್ಜರ ಪ್ರತಿಹಾರರು, ಪಾಲರು, ಚೌಹಾಣರು ಮತ್ತು ಗುಹಿಲರು ಇವರ ಸಾಧನೆಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಗುರ್ಜರ ಪ್ರತಿಹಾರರು: ಗುರ್ಜರ ಪ್ರತಿಹಾರ ದೊರೆಗಳು ಮಧ್ಯ ಪ್ರದೇಶದ ಆವಂತಿಯಿಂದ (ಉಜ್ಜಯಿನಿ) ಆಳ್ವಿಕೆ ನಡೆಸುತ್ತಿದ್ದರು. **ನಾಗಭಟನು** ಈ ವಂಶದ ಪ್ರಸಿದ್ಧ ರಾಜ. ಅರಬ್ಬರ ದಂಡಯಾತ್ರೆಯಿಂದ ಭಾರತವನ್ನು ರಕ್ಷಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತನು ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಇದೇ ವಂಶದ **ಭೋಜನು** ಓರ್ವ ಶ್ರೇಷ್ಠ ದೊರೆ ಹಾಗೂ ಸಾಹಿತಿಯಾಗಿದ್ದನು. ಆ ಕಾಲದ ಭಾರತದ ಪ್ರತಿಷ್ಠಿತ ನಗರವಾದ ಕನೌಜವನ್ನು ಈತನು ವಶಪಡಿಸಿಕೊಂಡನು. ಬಂಗಾಲದ ಪಾಲರನ್ನೂ ಇವನು ಸೋಲಿಸಿದನು. ಇವನ ರಾಜ್ಯವನ್ನು ಸಂದರ್ಶಿಸಿದ ಅರಬ್ ಪ್ರವಾಸಿ ಸುಲೇಮಾನ್, **"**ಈತನು ಘನವಂತ ದೊರೆ, ಅರಬ್ಬರ ಶತ್ರು, ಒಳ್ಳೆಯ ಅಶ್ವದಳ ಉಳ್ಳವನು**"**, ಎಂದಿದ್ದಾನೆ.

• **ಪಾಲರು:** ಪಾಲರು ಸುಮಾರು ನಾಲ್ಕು ಶತಮಾನಗಳ ಕಾಲ ಆಳಿದರು. ಧರ್ಮಪಾಲನು ಪಾಲ ವಂಶದ ಶ್ರೇಷ್ಠ ದೊರೆ. ಇವನ ಕಾಲದಲ್ಲಿ ಪಾಲ ರಾಜ್ಯವು ಉತ್ತರ ಭಾರತದ ಗಣ್ಯ ರಾಜ್ಯಗಳಲ್ಲಿ ಒಂದಾಗಿತ್ತು. ಪ್ರಸಿದ್ಧ ನಗರ ಕನೌಜವನ್ನು ಗೆದ್ದುದು ಈತನ ವಿಶೇಷ ಸಾಧನೆಯಾಗಿದೆ. ಕರ್ನಾಟಕ ಮೂಲದ ವಿಜಯಸೇನನೆಂಬ ದೊರೆ ಪಾಲರ ಆಡಳಿತವನ್ನು ಕೊನೆಗಾಣಿಸಿ ಸೇನವಂಶದ ಆಳ್ವಿಕೆಯನ್ನು ಆರಂಭಿಸಿದ.

ಪಾಲರು ಬೌದ್ಧಮತದ ಅನುಯಾಯಿಗಳು. ಹಿಂದೂ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ವಿದ್ಯಾಪ್ರಸಾರ ಕಾರ್ಯದಲ್ಲಿ ವಿಶೇಷ ಆಸಕ್ತಿ ತೋರಿಸಿದರು. ಉದ್ದಂಡಪುರ, ವಿಕ್ರಮಶೀಲ ವಿಶ್ವವಿದ್ಯಾಲಯಗಳು ಇವರ ಕಾಲದಲ್ಲಿ ಸ್ಥಾಪಿತವಾದವು.

• **ಚೌಹಾಣರು:** ಚೌಹಾಣರಲ್ಲಿ ಮೂರನೇ ಪೃಥ್ವೀರಾಜನು ಪ್ರಸಿದ್ಧ ಅರಸು. ದಿಲ್ಲಿ ಅವನ ರಾಜಧಾನಿ.

ಪೃಥ್ವೀರಾಜ ಚೌಹಾಣನು ಕನೌಜದ ರಾಜ ಜಯಚಂದ್ರನ ಮಗಳು ಸಂಯುಕ್ತೆಯನ್ನು ವರಿಸಿದ ಸ್ವಾರಸ್ಯಕರ ಘಟನೆ ಅನೇಕ ಗ್ರಂಥಗಳಲ್ಲಿ ವಿವರಿಸಲಾಗಿದೆ. ಸಂಯುಕ್ತೆ ಬಲು ಚೆಲುವೆ. ಜಯಚಂದ್ರ ಮತ್ತು ಅವನ ಬಂಧು ಪೃಥ್ವೀರಾಜನ ನಡುವೆ ವೈರಭಾವವಿತ್ತು. ಮಗಳ ಸ್ವಯಂವರಕ್ಕೆ ಜಯಚಂದ್ರ ಪೃಥ್ವೀರಾಜನನ್ನು ಆಹ್ವಾನಿಸಿರಲಿಲ್ಲ. ಆತನನ್ನು ಅವಮಾನಗೊಳಿಸಬೇಕೆಂದು ಆತನ ಪ್ರತಿಮೆಯನ್ನು ಮಾಡಿಸಿ ಕಾವಲುಗಾರನಂತೆ ಬಾಗಿಲಿನಲ್ಲಿ ಇರಿಸಿದ.

ಪೃಥ್ವೀರಾಜನಲ್ಲಿ ಅನುರಕ್ತಳಾಗಿದ್ದ ಸಂಯುಕ್ತೆ ಅಲ್ಲಿ ಸೇರಿದ್ದ ರಾಜಪುತ್ರರನ್ನು ಬಿಟ್ಟು, ಪೃಥ್ವೀರಾಜನ ಪ್ರತಿಮೆಗೆ ಹಾರ ಹಾಕಿದಳು. ಅಲ್ಲೇ ಹತ್ತಿರದಲ್ಲಿ ಅಡಗಿಕೊಂಡಿದ್ದ ಪೃಥ್ವೀರಾಜ ಸಂಯುಕ್ತೆಯನ್ನು ಒಡನೆಯೇ ಅಶ್ವದ ಮೇಲೆ ಎತ್ತಿಕೊಂಡು ಹೋಗಿ, ತನ್ನ ಅರಮನೆಯಲ್ಲಿ ಮದುವೆ ಮಾಡಿಕೊಂಡ. ಈ ಘಟನೆಯಿಂದ ಎರಡು ಮನೆತನಗಳೊಳಗೆ ಇದ್ದ ವೈರತ್ವ ಮೊದಲಿಗಿಂತ ಇನ್ನಷ್ಟು ಹೆಚ್ಚಿತು.

ಪೃಥ್ವೀರಾಜನು ಮಹಮದ್ ಘೋರಿಯ ಆಕ್ರಮಣಗಳನ್ನು ವಿರೋಧಿಸಿದನು. ಅನೇಕ ರಜಪೂತ ಅರಸರನ್ನು ಒಗ್ಗೂಡಿಸಿದನು. ಆದರೆ ಕನೌಜದ ರಾಜನಾದ ಜಯಚಂದ್ರನು ಇವನೊಂದಿಗೆ ಸೇರಲಿಲ್ಲ. ಪೃಥ್ವೀರಾಜನು ಮಹಮದನನ್ನು ಕದನದಲ್ಲಿ ಸೋಲಿಸಿದನಾದರೂ ಆತನಿಗೆ ಕ್ಷಮಾದಾನ ಮಾಡಿದನು. ಮುಂದಿನ ವರ್ಷವೇ ಇವರೊಳಗೆ ನಡೆದ ಯುದ್ಧದಲ್ಲಿ ಪೃಥ್ವೀರಾಜನು ಪರಾಭವಗೊಂಡನು. ವಿಪತ್ತಿನ ಸಮಯದಲ್ಲಿ ಪೃಥ್ವೀರಾಜ ತಾನು ಕುದುರೆಯನ್ನೇರಿ ತಪ್ಪಿಸಿಕೊಳ್ಳಲು ಯತ್ನಿಸಿದ. ಆದರೆ ಶತ್ರು ಸೈನಿಕರಿಗೆ ಸೆರೆಸಿಕ್ಕಿದ. ಮಹಮದ್ ಘೋರಿ ಇವನನ್ನು ಕೊಲ್ಲಿಸಿದ. ದಿಲ್ಲಿಯು ಮಹಮದ್ ಘೋರಿಯ ವಶವಾಯಿತು. ಇದು ದಿಲ್ಲಿ ಸುಲ್ತಾನರ ಆಳ್ವಿಕೆಗೆ ನಾಂದಿಯಾಯಿತು.

ಪೃಥ್ವೀರಾಜ ಶೌರ್ಯ ಮತ್ತು ಧೀರತನಕ್ಕೆ ಹೆಸರಾಗಿದ್ದನು. "ಪೃಥ್ವೀರಾಜರಾಸೋ" ಎಂಬ ಹಿಂದಿ ಮಹಾಕಾವ್ಯದಲ್ಲಿ ಚಾಂದ್ ಬರ್ದಾಯಿ ಎಂಬ ಕವಿ ಈತನ ಪರಾಕ್ರಮವನ್ನು ವರ್ಣಿಸಿದ್ದಾನೆ.

• **ಗುಹಿಲರು:** ರಜಪೂತರಲ್ಲಿ ಗುಹಿಲರು (ಗುಹಿಲೋಟರು) ವೀರಪರಂಪರೆಯ ವಂಶದವರು. ಈ ವಂಶದ ದೊರೆ ಖೊಮ್ಮಾಣನು ಅರಬ್ಬರ ದಾಳಿಯಿಂದ ತನ್ನ ರಾಜ್ಯವನ್ನು ರಕ್ಷಿಸಿ ಬಪ್ಪಾರಾವಲ್ ಎಂಬ ಬಿರುದನ್ನು ಧರಿಸಿದನು. ಈ ಮನೆತನದ ರಾಣಾ ಕುಂಭನು ಸುಲ್ತಾನರ ವಿರುದ್ಧ ಹೋರಾಡಿ ರಾಜ್ಯವನ್ನು ರಕ್ಷಿಸಿದ ಪರಾಕ್ರಮಿ. ರಾಜ್ಯದ ಭದ್ರತೆಗಾಗಿ 32 ಕೋಟೆಗಳನ್ನು ಕಟ್ಟಿಸಿದನು. ಚಿತ್ತೋಡಗಡದ ಪ್ರಖ್ಯಾತ ವಿಜಯಸ್ತಂಭವು ಈತನ ರಚನೆ.


ಚಿತ್ರ 2.9 – ವಿಜಯಸ್ತಂಭ, ಚಿತ್ತೋಡಗಡ

ರಾಣಾ ಸಂಗ ಅಥವಾ ರಾಣಾ ಸಂಗ್ರಾಮ ಸಿಂಹನು ಗುಹಿಲ ವಂಶದ ಇನ್ನೊಬ್ಬ ಖ್ಯಾತ ದೊರೆ. ನೂರು ಕದನಗಳ ವೀರ. ಈತನ ದೇಹದಲ್ಲಿ ಯುದ್ಧದ ಎಂಬತ್ತು ಗಾಯಗಳ ಕಲೆಗಳಿದ್ದವು. ಇವನು ದಿಲ್ಲಿಯ ಸುಲ್ತಾನರ ವಿರುದ್ಧ ಸತತ ಹೋರಾಡಿದನು.

ಆರ್ಥಿಕ ಸ್ಥಿತಿ

• ಗುಪ್ತರ ಕಾಲದಿಂದಲೂ ಸರ್ಕಾರದಲ್ಲಿ ಸೇವೆ ಸಲ್ಲಿಸುವವರಿಗೆ ಜಮೀನನ್ನು ಉಂಬಳಿಯಾಗಿ ನೀಡಲಾಗಿತ್ತು. ಇದು ಜಮೀನ್ದಾರಿ ಪದ್ಧತಿಯಾಗಿ ಪರಿವರ್ತನೆಗೊಂಡಿತು. ಈ ಪದ್ಧತಿ ಸಾಮಾನ್ಯ ರೈತರಿಗೆ ಕಷ್ಟ ನೀಡಿತು.


• ಪಟ್ಟಣಗಳಲ್ಲಿ ವ್ಯಾಪಾರಿಗಳೂ ಕುಶಲಕರ್ಮಿಗಳೂ ನೆಲೆಸಿದ್ದು, ವೈಶ್ಯರು ವ್ಯಾಪಾರ, ಹಣಕಾಸು ಲೇವಾದೇವಿ ಮಾಡುತ್ತಿದ್ದರು.

• ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಹೆಚ್ಚಾಗಿ ಅರಬ್ ವರ್ತಕರು ಭಾರತದೊಂದಿಗೆ ವ್ಯಾಪಾರ ಮಾಡುತ್ತಿದ್ದರು. ಸಾಂಬಾರ ಪದಾರ್ಥ, ಹತ್ತಿ ಮತ್ತು ರೇಷ್ಮೆ ವಸ್ತ್ರಗಳು, ಸುಗಂಧ ದ್ರವ್ಯಗಳು ಮತ್ತು ವಜ್ರಗಳು ಭಾರತದಿಂದ ರಫ್ತಾಗುತ್ತಿದ್ದವು. ಕುದುರೆಗಳನ್ನು ಮಧ್ಯ ಏಷ್ಯ, ಅರೇಬಿಯಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು.

• ರಜಪೂತರು ಕಂದಾಯದ ಆದಾಯದಲ್ಲಿ ಹೆಚ್ಚಿನ ಹಣವನ್ನು ಕೋಟೆ, ದೇವಾಲಯ ನಿರ್ಮಾಣಗಳಿಗಾಗಿ ವಿನಿಯೋಗಿಸುತ್ತಿದ್ದರು. ಇದರಿಂದ ಜನರಿಗೆ ಉದ್ಯೋಗ ಸಿಗುತ್ತಿತ್ತು.

ಸಾಮಾಜಿಕ ಸ್ಥಿತಿ

• ರಜಪೂತರ ಕಾಲದಲ್ಲಿ ವೃತ್ತಿಗೆ ಅನುಗುಣವಾಗಿ ವಿವಿಧ ವರ್ಗಗಳಿದ್ದವು. • ಸಮಾಜದಲ್ಲಿ ಸ್ತ್ರೀಯರಿಗೆ ಗೌರವದ ಸ್ಥಾನವಿತ್ತು. ಸ್ತ್ರೀಯರು ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆ, ಕಸೂತಿಕಲೆಗಳಲ್ಲಿ ಪರಿಣಿತರಾಗಿದ್ದರು. ಬಾಲ್ಯ ವಿವಾಹ, ಸತಿಸಹಗಮನ ಪದ್ಧತಿ ರೂಢಿಯಲ್ಲಿತ್ತು. • ರಜಪೂತರು ಪುಣ್ಯಕ್ಷೇತ್ರಗಳಲ್ಲಿ ಸ್ನಾನ ಮಾಡುವುದು ಪವಿತ್ರವೆಂದು ತಿಳಿದಿದ್ದರು. ಬ್ರಹ್ಮನ ಆವಾಸವೆನಿಸಿದ ಪುಷ್ಕರ (ಅಜ್ಮೀರ್ ಸಮೀಪ) ಗಣ್ಯ ಯಾತ್ರಾಸ್ಥಳವೆನಿಸಿತು. ಪ್ರತಿ ವರ್ಷ ಇಲ್ಲಿ ನಡೆಯುತ್ತಿದ್ದ ದೊಡ್ಡ ಜಾತ್ರೆಯು ಈಗಲೂ ಪ್ರಸಿದ್ಧವಾಗಿದೆ. ✤



ಚಿತ್ರ 2.10 – ಒಂಟೆ ಜಾತ್ರೆ, ಪುಷ್ಕರ

ಕಾಲಗಣನೆ (ಕ್ರಿ.ಶ.)

ರಜಪೂತರ ಕಾಲ	–	650–1200
ನಾಗಭಟ	–	8ನೇ ಶತಮಾನ
ಭೋಜ	–	9ನೇ ಶತಮಾನ
ಧರ್ಮಪಾಲ	–	8–9ನೇ ಶತಮಾನ
ಚೌಹಾಣರು	–	12ನೇ ಶತಮಾನ

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ರಜಪೂತರ ಗುಣಧರ್ಮಗಳು ಯಾವುವು?

2 ರಜಪೂತರ ಮೂರು ಪ್ರಸಿದ್ಧ ವಾಸ್ತುಶಿಲ್ಪಗಳನ್ನು ಹೆಸರಿಸಿ. ಅವು ಎಲ್ಲಿವೆ?

3 'ಪೃಥ್ವೀರಾಜರಾಸೋ' ಮತ್ತು 'ಗೀತಗೋವಿಂದ' ಬರೆದ ಕವಿಗಳು ಯಾರು?

4 ಪೃಥ್ವೀರಾಜ ಚೌಹಾಣ್ ಕುರಿತು ಟಿಪ್ಪಣಿ ಬರೆಯಿರಿ.

5 ಬಪ್ಪಾರಾವಲ್ ಎಂದರೆ ಯಾರು?

6 ರಾಣಾ ಸಂಗ್ರಾಮಸಿಂಹನ ಬಗ್ಗೆ ಟಿಪ್ಪಣಿ ಬರೆಯಿರಿ.

7 ರಜಪೂತರ ಕಾಲದ ಸಾಮಾಜಿಕ ಸ್ಥಿತಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

ಚಟುವಟಿಕೆಗಳು

1 ರಜಪೂತರಿಂದ ನಿರ್ಮಾಣಗೊಂಡ ದೇವಾಲಯ, ಅರಮನೆ ಮತ್ತು ಕೋಟೆಗಳ ಭಾವಚಿತ್ರವನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ರಜಪೂತರ ಕಾಲದ ಪ್ರಸಿದ್ಧ ವಾಸ್ತುಶಿಲ್ಪ ಕೇಂದ್ರಗಳನ್ನು ಭೂಪಟದಲ್ಲಿ ಗುರುತಿಸಿ.

3 ರಜಪೂತರ ಕಾಲದ ಸಾಹಿತಿಗಳು ಮತ್ತು ಅವರ ಕೃತಿಗಳನ್ನು ಪಟ್ಟಿ ಮಾಡಿ

☆ ☆ ☆

ಪಾಠ
3

ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು

ಪಾಠದ ಪರಿಚಯ

ಕನ್ನಡಕ್ಕಿಂದು ಶಾಸ್ತ್ರೀಯ ಭಾಷೆಯ ಸ್ಥಾನವನ್ನು ನೀಡಲಾಗಿದೆ. ಈ ಭಾಷೆಯನ್ನು ಬೆಳಸಿದ ರಾಜಕುಟುಂಬಗಳು ಹಾಗೂ ಶ್ರೇಷ್ಠ ಕವಿಗಳ ವಿಚಾರ ತಿಳಿಯೋಣ.

ದಖನ್ನಿನಲ್ಲಿ ಜಯಭೇರಿ ಬಾರಿಸುತ್ತ ಮುನ್ನಡೆದ ರಾಷ್ಟ್ರಕೂಟ ಸಮ್ರಾಟರ ಮಹತ್ಸಾಧನೆಯನ್ನೂ, ರಾಷ್ಟ್ರಕೂಟರು ಸಾಹಿತ್ಯ, ಕಲೆ ಮತ್ತು ಮೂರ್ತಿಶಿಲ್ಪಗಳಿಗೆ ನೀಡಿರುವ ಅಮೋಘ ಕೊಡುಗೆಗಳನ್ನೂ ಈ ಪಾಠದಲ್ಲಿ ಪರಿಚಯಿಸಲಾಗಿದೆ. ರಾಷ್ಟ್ರಕೂಟರ ಅನಂತರ ಆಳ್ವಿಕೆ ನಡೆಸಿದ ಕಲ್ಯಾಣದ ಚಾಳುಕ್ಯ ವಂಶದ ಗಣ್ಯ ಸಮ್ರಾಟರ ಸಾಧನೆಗಳು ಹಾಗೂ ಸಾಹಿತ್ಯ, ವಾಸ್ತುಶಿಲ್ಪ ಕ್ಷೇತ್ರಗಳಿಗೆ ಅವರು ನೀಡಿರುವ ಕೊಡುಗೆಗಳನ್ನು ಪಾಠದಲ್ಲಿ ನಿರೂಪಿಸಲಾಗಿದೆ.

ಸಾಮರ್ಥ್ಯಗಳು

1 ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯ ವಂಶಗಳ ಆಯ್ದ ಸಮ್ರಾಟರ ರಾಜಕೀಯ ಸಾಧನೆಗಳನ್ನು ಅರಿತುಕೊಳ್ಳುವುದು.

2 ಈ ವಂಶಗಳು ಸಾಹಿತ್ಯ ಮತ್ತು ಶಿಲ್ಪಕಲೆಗೆ ನೀಡಿರುವ ಕೊಡುಗೆಗಳು ಕರ್ನಾಟಕದ ಸಂಸ್ಕೃತಿಯನ್ನು ಹೇಗೆ ಶ್ರೀಮಂತಗೊಳಿಸಿದವು ಎಂಬುದನ್ನು ಅರಿತುಕೊಳ್ಳುವುದು.

3 ಈ ಎರಡೂ ಸಾಮ್ರಾಜ್ಯಗಳಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.



ರಾಷ್ಟ್ರಕೂಟರು

ಚಾಳುಕ್ಯರ ಸಾಮ್ರಾಜ್ಯವು ಅಳಿದು, ರಾಷ್ಟ್ರಕೂಟರ ಆಳ್ವಿಕೆ ಪ್ರಾರಂಭವಾಯಿತು. ರಾಷ್ಟ್ರಕೂಟರು ಎಂದಾಕ್ಷಣ ನೆನಪಿಗೆ ಹೊಳೆಯುವುದು – ಕವಿರಾಜಮಾರ್ಗ, ಆದಿಕವಿ ಪಂಪ ಮತ್ತು ಎಲ್ಲೋರದ ಕೈಲಾಸ ದೇವಾಲಯ. ಇಲ್ಲಿಂದಲೇ ಪಾಠ ಪ್ರಾರಂಭಿಸೋಣ.

• **'ಕವಿರಾಜಮಾರ್ಗ'** ಎಂಬ ಮಹತ್ವದ ಲಕ್ಷಣಗ್ರಂಥವು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು, ಇದನ್ನು ರಚಿಸಿದವನು **ಶ್ರೀವಿಜಯ**. ಈವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಇದು ಅತ್ಯಂತ ಪ್ರಾಚೀನವಾದುದು. ಇದರ ಕಾಲ 9ನೇ ಶತಮಾನ.

ಲಕ್ಷಣಗ್ರಂಥವೆಂದರೆ ಭಾಷೆ, ಶೈಲಿ, ಛಂದಸ್ಸು ಮುಂತಾದ ಲಕ್ಷಣಗಳನ್ನು ವಿವರಿಸುವ ಗ್ರಂಥ.

• **ಪಂಪ:** ಸಂಸ್ಕೃತಕ್ಕೆ ವಾಲ್ಮೀಕಿಯು ಹೇಗೆ ಆದಿಕವಿಯೋ ಹಾಗೆ ಕನ್ನಡಕ್ಕೆ ಪಂಪನು ಆದಿಕವಿ. ಪಂಪನ ಕಾಲಕ್ಕೆ ಹಿಂದೆ ಕನ್ನಡದಲ್ಲಿ ರಚನೆಯಾಗಿರುವ ಕಾವ್ಯಗಳು ನಮಗೆ ಈವರೆಗೆ ದೊರಕಿಲ್ಲ.

'ವಿಕ್ರಮಾರ್ಜುನ ವಿಜಯ' ಪಂಪನ ಮಹಾಕಾವ್ಯ. ಇದು **'ಪಂಪಭಾರತ'**ವೆಂದು ವಿಖ್ಯಾತವಾಗಿದೆ. ಇದರಲ್ಲಿ ಮಹಾಭಾರತದ ಕಥೆಯಿದೆ. ಕನ್ನಡದ ಪ್ರಮುಖ ಕವಿಗಳ ಮೇಲೆ ಪಂಪ ಬೀರಿರುವ ಪ್ರಭಾವ ಅಪಾರವಾಗಿದೆ.

ಪಂಪನು ವೇಮುಲವಾಡದ ಮಾಂಡಲಿಕ ಅರಿಕೇಸರಿಯ ಆಸ್ಥಾನದಲ್ಲಿದ್ದನು.

ಇದೇ ಕಾಲಕ್ಕೆ ಸೇರಿದ **ಪೊನ್ನ** ಕನ್ನಡದ ಮತ್ತೊಬ್ಬ ಮಹಾಕವಿ.

• **ಎಲ್ಲೋರ ಮತ್ತು ಎಲಿಫೆಂಟ**



ಚಿತ್ರ 3.1 – ಕೈಲಾಸ ದೇವಾಲಯ, ಎಲ್ಲೋರ

ಎಲ್ಲೋರದ ಕೈಲಾಸ ದೇವಾಲಯವು ನೂರಡಿ ಎತ್ತರದ ಬಂಡೆಯನ್ನು ಕೊರೆದು ಮಾಡಿರುವ ಏಕಶಿಲಾ ಮಂದಿರವಾಗಿದೆ. ಇದನ್ನು ನಿರ್ಮಿಸಿದ ಕೀರ್ತಿ ರಾಷ್ಟ್ರಕೂಟ ಅರಸ ಒಂದನೇ ಕೃಷ್ಣನಿಗೆ ಸಲ್ಲುತ್ತದೆ. ಪ್ರಪಂಚದಲ್ಲಿ ಇಂಥದ್ದೊಂದು ವಾಸ್ತುಶಿಲ್ಪ ಇನ್ನೆಲ್ಲಿಯೂ ಕಾಣೆವು. ಇಲ್ಲಿನ ಮೂರ್ತಿಶಿಲ್ಪ ವೈಭವವನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಮೂರ್ತಿಶಿಲ್ಪಗಳಲ್ಲಿ ರಾವಣನು ಕೈಲಾಸ ಪರ್ವತವನ್ನೆತ್ತುವ ಕಥಾಪ್ರಸಂಗವು ರಮಣೀಯವಾದುದು.

ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಈಗಿನ ಮಹಾರಾಷ್ಟ್ರದ ಬಹುಭಾಗಗಳು ಸೇರಿದ್ದುವು. ಎಲ್ಲೋರ ಹಾಗೂ ಎಲಿಫೆಂಟಾ ಮಹಾರಾಷ್ಟ್ರದಲ್ಲಿವೆ.

ರಾಷ್ಟ್ರಕೂಟರ ಮೂರ್ತಿಶಿಲ್ಪ ಕಲಾವೈಭವವನ್ನು ಎಲಿಫೆಂಟ ಗುಹಾಲಯದಲ್ಲಿ ಕಾಣಬಹುದು. ಎಲಿಫೆಂಟ ಮುಂಬೈ ಬಂದರಿನ ಸಮೀಪವಿರುವ ಒಂದು ಪುಟ್ಟ ದ್ವೀಪ. ಇಲ್ಲಿನ ಭಾರಿ ಗಾತ್ರದ ಮೂರು ಮುಖವುಳ್ಳ ಮಹೇಶಮೂರ್ತಿ ವಿಸ್ಮಯಕರವಾಗಿದೆ.



ಚಿತ್ರ 3.2 – ಮಹೇಶ ಮೂರ್ತಿ, ಎಲಿಫೆಂಟ. ಇದನ್ನು 'ತ್ರಿಮೂರ್ತಿ' ಎಂದೂ ಕರೆಯುವುದಿದೆ.

ಗಣ್ಯ ಚಕ್ರವರ್ತಿಗಳು


- **ಮೂರನೆಯ ಗೋವಿಂದ:** ಮೂರನೆಯ ಗೋವಿಂದನು ರಾಷ್ಟ್ರಕೂಟ ಸಮ್ರಾಟರಲ್ಲಿ ಅತಿ ಗಣ್ಯನು. ಇವನು ದಕ್ಷಿಣ ಭಾರತದ ಎಲ್ಲೆಡೆ ಪ್ರಭುತ್ವ ಸಾಧಿಸಿದನು. ಮುಂದೆ ಹಿಮಾಲಯದ ತಪ್ಪಲಿನವರೆಗೂ ತನ್ನ ಸೈನ್ಯದೊಂದಿಗೆ ಜಯಭೇರಿ ಭಾರಿಸುತ್ತ ಮುನ್ನಡೆದನು. ಈ ಮಹತ್ಸಾಧನೆಯನ್ನು ಅವನ ಆಸ್ಥಾನ ಕವಿಯು "ಗೋವಿಂದನ ಯುದ್ಧದ ಮದ್ದಾನೆಗಳು ಗಂಗಾನದಿಯ ಪುಣ್ಯತೀರ್ಥದ ರುಚಿ ನೋಡಿದವು", ಎಂಬುದಾಗಿ ಮನಮೋಹಕವಾಗಿ ವರ್ಣಿಸಿದ್ದಾನೆ.

- **ಅಮೋಘವರ್ಷ ನೃಪತುಂಗ:** ನೃಪತುಂಗನು ಮುಮ್ಮಡಿ ಗೋವಿಂದನ ಮಗ. ಪಟ್ಟಾಭಿಷೇಕವಾದಾಗ ಅವನು ಹದಿನಾಲ್ಕರ ತರುಣ. ಇವನು 60 ವರ್ಷಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸಿದನು. ಸ್ವತಃ ವಿದ್ವಾಂಸನಾಗಿದ್ದ. ಶ್ರೀವಿಜಯ ಅವನ ಆಸ್ಥಾನ ವಿದ್ವಾಂಸ.

ಭೂಪಟ 3

ರಾಷ್ಟ್ರಕೂಟ ನೃಪತುಂಗನ ಕಾಲದ ಸಾಮ್ರಾಜ್ಯ

(ಕ್ರಿ.ಶ. 9ನೇ ಶತಮಾನ)



ನೃಪತುಂಗನಿಗೆ ಅತ್ಯಂತ ಇಷ್ಟವಾದ ಸಂಗತಿಯೆಂದರೆ ತನ್ನ ಪ್ರಜೆಗಳ ಕ್ಷೇಮ. ಅವನು ಮಾನ್ಯಖೇಟ ಪಟ್ಟಣದ (ಈಗಿನ ಮಳಖೇಡ, ಗುಲ್ಬರ್ಗ ಜಿಲ್ಲೆ) ನಿರ್ಮಾಣ ಮಾಡಿದನು. ಇದು ರಾಷ್ಟ್ರಕೂಟರ ರಾಜಧಾನಿಯಾಯಿತು. ಆ ಕಾಲದ ವಿಶ್ವದ ನಾಲ್ಕು ವಿಶಾಲ ಸಾಮ್ರಾಜ್ಯಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಒಂದಾಗಿತ್ತೆಂದು ವಿದೇಶಿ ಪ್ರವಾಸಿ ಸುಲೈಮಾನ್ ಬರೆದಿದ್ದಾನೆ. (ಉಳಿದವುಗಳೆಂದರೆ ರೋಮನ್, ಅರಬ್ಬ ಮತ್ತು ಚೀನೀ ಸಾಮ್ರಾಜ್ಯಗಳು).

• **ಮೂರನೆಯ ಕೃಷ್ಣ:** ಮೂರನೆಯ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಮತ್ತೊಮ್ಮೆ ಭಾರತದ ರಾಜಕೀಯದಲ್ಲಿ ಅಗ್ರಸ್ಥಾನ ಪಡೆಯಿತು. ಕೃಷ್ಣನು ಚೋಳರನ್ನು ಪರಾಜಯಗೊಳಿಸಿ, ರಾಮೇಶ್ವರದವರೆಗೂ ತನ್ನ ಸೈನ್ಯದೊಂದಿಗೆ ಜಯಭೇರಿ ಬಾರಿಸುತ್ತ ಸಾಗಿ, ಅಲ್ಲೊಂದು ವಿಜಯಸ್ತಂಭವನ್ನೂ ದೇವಾಲಯವನ್ನೂ ಸ್ಥಾಪಿಸಿದನು. ಈತನು ಪಾಂಡ್ಯ, ಚೇರರನ್ನು ಸೋಲಿಸಿದನಲ್ಲದೆ, ಸಿಂಹಳದ ಅರಸನಿಂದ ಕಪ್ಪ ಸಂಗ್ರಹಿಸಿದನು. ಇಷ್ಟೇ ಅಲ್ಲ, ಮೂರನೆಯ ಗೋವಿಂದನಂತೆ ಉತ್ತರ ಭಾರತದಲ್ಲಿಯೂ ಅತ್ಯಂತ ಯಶಸ್ವಿಯಾಗಿ ದಂಡಯಾತ್ರೆ ನಡೆಸಿದನು.

ಕವಿ **ಪೊನ್ನ** ಕೃಷ್ಣನ ಆಶ್ರಯ ಪಡೆದಿದ್ದನು. ಮೂರನೆಯ ಕೃಷ್ಣನ ಅನಂತರ ರಾಷ್ಟ್ರಕೂಟ ಆಳ್ವಿಕೆಯು ಅವನತಿ ಹೊಂದಲಾರಂಭಿಸಿತು.

ಕಲ್ಯಾಣದ ಚಾಳುಕ್ಯರು

ರಾಷ್ಟ್ರಕೂಟರ ನಂತರ ಚಾಳುಕ್ಯ ವಂಶದವರು ಮತ್ತೊಮ್ಮೆ ಅಧಿಕಾರಕ್ಕೆ ಬಂದರು. ಇವರೇ ಕಲ್ಯಾಣದ ಚಾಳುಕ್ಯರು. ಬೀದರ್ ಜಿಲ್ಲೆಯ ಬಸವಕಲ್ಯಾಣ ಇವರ ರಾಜಧಾನಿ.

ಆರನೆಯ ವಿಕ್ರಮಾದಿತ್ಯ: ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಚಾಳುಕ್ಯ ವಂಶದ ಅತಿ ಶ್ರೇಷ್ಠ ಚಕ್ರವರ್ತಿ. ಇವರ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಕನ್ನಡನಾಡು ಅಭಿವೃದ್ಧಿ ಕಂಡಿತು. ಇವನು 'ಚಾಳುಕ್ಯ ವಿಕ್ರಮ ಶಕೆ'ಯನ್ನು ಆರಂಭಿಸಿದನು. ವಿಕ್ರಮಾದಿತ್ಯನು ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದನು. ಈತನ ಆಶ್ರಯ ಪಡೆದಿದ್ದ ಪಂಡಿತ **ಬಿಲ್ಹಣನು** **ವಿಕ್ರಮಾಂಕದೇವಚರಿತ** ಎಂಬ ಮಹಾಕಾವ್ಯವನ್ನು ರಚಿಸಿದನು. ಇದರಲ್ಲಿ ವಿಕ್ರಮಾದಿತ್ಯನ ಜೀವನ ವೃತ್ತಾಂತವಿದೆ. **ವಿಜ್ಞಾನೇಶ್ವರನು** ಆಸ್ಥಾನದ ಇನ್ನೊಬ್ಬ ಶ್ರೇಷ್ಠ ವಿದ್ವಾಂಸ. **ಮಿತಾಕ್ಷರ ಸಂಹಿತೆ** ಈತನ ಕೃತಿ. ಇದು ಹಿಂದೂ ಕಾನೂನು ಪದ್ಧತಿಯ ಪ್ರಮಾಣ ಗ್ರಂಥವೆಂದು ಮನ್ನಣೆ ಪಡೆದಿದೆ.

ಮುಮ್ಮಡಿ ಸೋಮೇಶ್ವರ: ವಿಕ್ರಮಾದಿತ್ಯನ ಮಗನಾದ ಮುಮ್ಮಡಿ ಸೋಮೇಶ್ವರನ ಕಾಲದಲ್ಲಿ ಸಾಮ್ರಾಜ್ಯದಲ್ಲಿ ಶಾಂತಿ, ಸಮೃದ್ಧಿ ನೆಲೆಗೊಂಡಿತು. ರಾಜನ ಒಲವು ಸಾಹಿತ್ಯ, ಕಲೆಗಳ ಕಡೆಗಿತ್ತು. ಇವನು **ಮಾನಸೋಲ್ಲಾಸ** ಎಂಬ ಖ್ಯಾತ ಸಂಸ್ಕೃತ ಗ್ರಂಥವನ್ನು ರಚಿಸಿದನು. ಇದರಲ್ಲಿ ಸರ್ವಶಾಸ್ತ್ರಗಳೂ ಅಡಗಿದೆ. ಸೋಮೇಶ್ವರನು ಮಹಾನ್ ವಿದ್ವಾಂಸನಾಗಿದ್ದು, ಸರ್ವಜ್ಞ ಚಕ್ರವರ್ತಿ ಎಂದೇ ಪ್ರಖ್ಯಾತನಾಗಿದ್ದಾನೆ.

ಸಾಹಿತ್ಯ: ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು.

• ಕವಿ ಚಕ್ರವರ್ತಿ ಎಂಬ ಬಿರುದು ಗಳಿಸಿದ **ರನ್ನನು** **ಸಾಹಸಭೀಮವಿಜಯ** ಅಥವಾ **ಗದಾಯುದ್ಧ** ಎಂಬ ವೀರಕಾವ್ಯವನ್ನು ರಚಿಸಿದನು. ಪಂಪ, ಪೊನ್ನ ಮತ್ತು ರನ್ನರನ್ನು ಕನ್ನಡ ಸಾಹಿತ್ಯದ ರತ್ನತ್ರಯರೆಂದು ಕರೆಯುತ್ತಾರೆ.

• **ವಚನ ಸಾಹಿತ್ಯ** ಚಾಳುಕ್ಯರ ಕಾಲದ ವಿಶಿಷ್ಟ ಕೊಡುಗೆಯಾಗಿದೆ. ವಚನಕಾರರು ಸರಳ ಕನ್ನಡದಲ್ಲಿ ವಚನಗಳನ್ನು ಬರೆದರು.

ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಇವರು ಈ ಕಾಲದ ಪ್ರಮುಖ ವಚನಕಾರರು.

ವಾಸ್ತುಶಿಲ್ಪ: ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದುವು. ಅವು ಲಲಿತಕಲೆಗಳಿಗೂ ಕೇಂದ್ರವಾಗಿದ್ದುವು. ಕೊಪ್ಪಳ ಜಿಲ್ಲೆಯ ಇಟಗಿಯ **ಮಹಾದೇವ**



ಚಿತ್ರ 3.3 – ಮಹಾದೇವ ದೇವಾಲಯ, ಇಟಗಿ

ದೇವಾಲಯ ಈ ಕಾಲದ ಅತ್ಯುತ್ತಮ ವಾಸ್ತುಕೃತಿ. ಇದನ್ನು ಅಲ್ಲಿಯ ಶಾಸನವೊಂದು 'ದೇವಾಲಯಗಳ ಚಕ್ರವರ್ತಿ' ಎಂದು ವರ್ಣಿಸಿದೆ. ✤

ಕಾಲಗಣನೆ (ಕ್ರಿ.ಶ.)

ರಾಷ್ಟ್ರಕೂಟರ ಆಳ್ವಿಕೆಯ ಕಾಲ	–	ಸುಮಾರು 750ರಿಂದ 950
ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲ	–	ಸುಮಾರು 970ರಿಂದ 1150
ಮೂರನೆಯ ಗೋವಿಂದ	–	793–814
ಅಮೋಘವರ್ಷ ನೃಪತುಂಗ	–	814–878
ಮುಮ್ಮಡಿ ಕೃಷ್ಣ	–	939–967
ಆರನೆಯ ವಿಕ್ರಮಾದಿತ್ಯ	–	1076–1127
ಚಾಳುಕ್ಯ ವಿಕ್ರಮ ಶಕೆ	–	1076
ಮುಮ್ಮಡಿ ಸೋಮೇಶ್ವರ	–	1127–1137

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಪಂಪ, ಪೊನ್ನ ಮತ್ತು ಶ್ರೀವಿಜಯ ಇವರನ್ನು ಕುರಿತು ಟಿಪ್ಪಣಿ ಬರೆಯಿರಿ.

2 ಎಲ್ಲೋರದ ಕೈಲಾಸ ದೇವಾಲಯ ಮತ್ತು ಎಲಿಫೆಂಟದ ಗುಹಾಲಯ ಏಕೆ ಪ್ರಸಿದ್ಧಿ ಪಡೆದಿವೆ?

3 ಮೂರನೆಯ ಗೋವಿಂದನ ಸೈನಿಕ ಸಾಧನೆಗಳನ್ನು ಹೇಳಿ.

4 ಅಮೋಘವರ್ಷ ನೃಪತುಂಗನು ಏಕೆ ಓರ್ವ ಗಣ್ಯ ಸಮ್ರಾಟನಾಗಿದ್ದಾನೆ?

5 ಆರನೆಯ ವಿಕ್ರಮಾದಿತ್ಯನನ್ನು ಕಲ್ಯಾಣದ ಚಾಳುಕ್ಯ ವಂಶದ ಅತಿ ಶ್ರೇಷ್ಠ ಚಕ್ರವರ್ತಿ ಎಂಬುದಾಗಿ ಏಕೆ ಕರೆಯಲಾಗುತ್ತದೆ?

6 'ವಿಕ್ರಮಾಂಕದೇವ ಚರಿತ', 'ಮಿತಾಕ್ಷರ ಸಂಹಿತೆ' ಮತ್ತು 'ಮಾನಸೋಲ್ಲಾಸ' ಈ ಕೃತಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

7 'ದೇವಾಲಯಗಳ ಚಕ್ರವರ್ತಿ' ಎಂದು ಯಾವ ದೇವಾಲಯವನ್ನು ಕರೆಯಲಾಗುತ್ತದೆ? ಏಕೆ?

ಚಟುವಟಿಕೆಗಳು

1 ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಭೂಪಟದಲ್ಲಿ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ರಾಜಧಾನಿ ಮತ್ತು ವಾಸ್ತುಶಿಲ್ಪ ಕೇಂದ್ರಗಳನ್ನು ಗುರುತಿಸಿ.

☆ ☆ ☆

ಪಾಠ 4	ಹೊಯ್ಸಳರು ಮತ್ತು ಚೋಳರು

ಪಾಠದ ಪರಿಚಯ


ಈ ಪಾಠದಲ್ಲಿ ಹೊಯ್ಸಳ ಮತ್ತು ಚೋಳ ರಾಜಮನೆತನಗಳ ಗಣ್ಯ ಸಮ್ರಾಟರು ಮತ್ತು ಅವರು ಶಿಲ್ಪಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿರುವ ವಿಶೇಷ ಕೊಡುಗೆಗಳನ್ನು ಪರಿಚಯಿಸಲಾಗಿದೆ. ಜೊತೆಗೆ ಚೋಳರ ಗ್ರಾಮಾಡಳಿತ ಪದ್ಧತಿಯನ್ನು ವಿವರಿಸಲಾಗಿದೆ.

ಸಾಮರ್ಥ್ಯಗಳು

1 ಹೊಯ್ಸಳರು ಮತ್ತು ಚೋಳರು ಶಿಲ್ಪಕಲೆ ಮತ್ತು ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳನ್ನು ಅರಿತುಕೊಂಡು ಅವುಗಳ ಮಹತ್ವವನ್ನು ಪ್ರಶಂಸಿಸುವುದು.

2 ಹೊಯ್ಸಳ ವಿಷ್ಣುವರ್ಧನ ಹಾಗೂ ಮೂರನೆಯ ಬಲ್ಲಾಳ ಮತ್ತು ರಾಜರಾಜ ಚೋಳ ಹಾಗೂ ರಾಜೇಂದ್ರ ಚೋಳ ಇವರ ಸಾಧನೆಗಳನ್ನು ಅರ್ಥೈಸಿಕೊಳ್ಳುವುದು.

3 ಭೂಪಟದಲ್ಲಿ ಹೊಯ್ಸಳ ಮತ್ತು ಚೋಳರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು.



ಹೊಯ್ಸಳರು

ಮಾವಿನಕೆರೆ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬೇಲೂರಿನ ಚೆನ್ನಕೇಶವ ದೇವಾಲಯವನ್ನು ನೋಡಲು ನಿರ್ಧರಿಸಿದರು. ಬಸ್ಸನ್ನೇರಿ ದೇವಾಲಯದ ಎದುರು ಬಂದು ನಿಂತಾಗ ಅವರು ಕಂಡದ್ದೇನು? ಹೊಂಬಿಸಿಲಿನಲ್ಲಿ ಕಂಗೊಳಿಸುವ ಶಿಲ್ಪಕಲೆಯ ಮಾಯಾಲೋಕ!


ಶಿಕ್ಷಕರು : ಮಕ್ಕಳೇ, ಇದುವೇ ಹೊಯ್ಸಳರ ವಿಶ್ವವಿಖ್ಯಾತ ದೇವಾಲಯ. ಇದರ ಎರಡು ಹೊಸತನವೇನೆಂದರೆ: ಗುಡಿಯನ್ನು ಎತ್ತರದ ಜಗತಿ(ಜಗಲಿ)ಯ ಮೇಲೆ ಕಟ್ಟಿರುವುದು, ಮತ್ತು ಜಗತಿಯು ನಕ್ಷತ್ರಾಕಾರದಲ್ಲಿರುವುದು.

ವಿದ್ಯಾರ್ಥಿ : ಜಗತಿಯ ಮೇಲೇಕೆ ಗುಡಿಯನ್ನು ನಿಲ್ಲಿಸಲಾಗಿದೆ?

ಶಿಕ್ಷಕರು : ಏಕೆಂದರೆ ಗಿಡ್ಡವಾಗಿರುವ ಗುಡಿಯು ಮೇಲೆದ್ದು ಎತ್ತರವಾಗಿ ಕಾಣುವಂತಾಗಲು.

ವಿದ್ಯಾರ್ಥಿ : ಜಗತಿಯು ನಕ್ಷತ್ರಾಕಾರದಲ್ಲಿದೆಯೇಕೆ?

ಶಿಕ್ಷಕರು : ಜಗಲಿ ಮಾತ್ರವಲ್ಲ, ಗುಡಿಯ ಗೋಡೆಗಳು, ಗರ್ಭಗೃಹ ಮತ್ತು ಶಿಖರ ಇವೆಲ್ಲವೂ ನಕ್ಷತ್ರಾಕಾರದಲ್ಲಿವೆ. ಇದರಿಂದ ಅವುಗಳ ಮೈಮೇಲೆ ಬೆಳಕು ನೆರಳು ಚೆಲ್ಲಾಟವಾಡಲು ಅವಕಾಶ ಒದಗಿಸಿದಂತಾಗಿದೆ. ಅಲ್ಲದೆ ಉಬ್ಬು ಶಿಲ್ಪಗಳು ಇನ್ನಷ್ಟು ಹರಿತವಾಗಿ ಎದ್ದುಕಾಣುತ್ತವೆ.




ಚಿತ್ರ 4.1 – ಬೇಲೂರಿನ ಚೆನ್ನಕೇಶವ ದೇವಾಲಯ

ಹೊಯ್ಸಳರು ಅಸಂಖ್ಯ ದೇವಾಲಯಗಳನ್ನು ಬಳಪದ ಮೃದುಕಲ್ಲಿನಿಂದ ರಚಿಸಿದರು. ಶಿಲ್ಪಿಗಳು ಅಲಂಕರಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಹೊರಗೋಡೆಯ ಕೆಳಗಿನ ಭಾಗದಲ್ಲಿ ಆನೆಗಳು, ಕುದುರೆ ಸವಾರರು, ಲತಾತೋರಣಗಳು, ಸಿಂಹಮುಖ ಮುಂತಾದ ಉಬ್ಬುಶಿಲ್ಪಗಳ ನವಿರಾದ ಪಟ್ಟಿಕೆಗಳಿವೆ. ನಯಗೆಲಸದ ಕೋಮಲ ಶಿಲ್ಪದಲ್ಲಿ ಹೊಯ್ಸಳರನ್ನು ಮೀರಿಸಿದವರಿಲ್ಲ.

ವಿದ್ಯಾರ್ಥಿ : ಗುರುಗಳೇ, ಗುಡಿಯೊಳಗೆ ಹೋಗೋಣವೆ?

ಶಿಕ್ಷಕರು : ಆಗಬಹುದು. ಒಳಗೆ ಬನ್ನಿ. ಇದು 'ನವರಂಗ'. ಪೂಜಾ ಕಾಲದಲ್ಲಿ ಸಂಗೀತ, ನೃತ್ಯ ಮುಂತಾದ ಕಲಾಸೇವೆಗಾಗಿ ಇರುವ ಸ್ಥಳ. ನವರಂಗದ ನಾಲ್ಕು ಕಂಬಗಳನ್ನು ಗಮನಿಸಿ. ಇವು ಚರಕಿಯಂತ್ರದ (ಕಡೆತಯಂತ್ರ) ಮೂಲಕ ಮಾಡಿರುವ ಕಂಬಗಳು. ಕಂಬಗಳು ಕನ್ನಡಿಯಂತೆ ಹೊಳೆಯುತ್ತಿವೆಯಲ್ಲವೆ? ನವರಂಗದ ಚಾವಣಿಯನ್ನೊಮ್ಮೆ ತಲೆಎತ್ತಿ ನೋಡಿ. ಇದನ್ನು 'ಭುವನೇಶ್ವರಿ' ಎನ್ನುವರು. ಭುವನೇಶ್ವರಿಯ ಶಿಲ್ಪವಿನ್ಯಾಸ ಅದೆಷ್ಟು ಅನುಪಮ!



ಚಿತ್ರ 4.2 – ಭುವನೇಶ್ವರಿ, ಬೇಲೂರು

ಮಕ್ಕಳೇ, ಇನ್ನೂ ಒಳಬನ್ನಿ. ಇದು ಗರ್ಭಗುಡಿ. ಇಲ್ಲಿನ ಸುಂದರವಾದ ವಿಜಯನಾರಾಯಣನ ಮೂರ್ತಿಯನ್ನು ನೋಡಿ. ಬೇಲೂರು ದೇವಾಲಯದ ಮುಖ್ಯವಾದ ಆಕರ್ಷಣೆಯೆಂದರೆ ಮದನಿಕೆ ವಿಗ್ರಹಗಳು ಮತ್ತು ನಾನಾ ಭಂಗಿಗಳಲ್ಲಿರುವ ರಮ್ಯವಾದ ಸ್ತ್ರೀವಿಗ್ರಹಗಳು.

ವಿದ್ಯಾರ್ಥಿ : ಹೊಯ್ಸಳ ಮಂದಿರಗಳನ್ನು ಕಟ್ಟಿದ ಶಿಲ್ಪಿ ಜಕಣಾಚಾರಿ ಎಂದು ಹೇಳುವರಲ್ಲ. ಅವನ ಬಗ್ಗೆ ಹೇಳಿರಿ.

ಶಿಕ್ಷಕರು : ಜಕಣಾಚಾರಿಯ ಬಗ್ಗೆ ಖಚಿತವಾಗಿ ಏನೂ ತಿಳಿದು ಬಂದಿಲ್ಲವಾದರೂ ಅವನ ಕುರಿತಾದ ಐತಿಹ್ಯವೊಂದಿದೆ.



ಚಿತ್ರ 4.3 – ಮದನಿಕೆ

ಜಕಣಾಚಾರಿ: ಜಕಣಾಚಾರಿ ತನ್ನ ಹೆಂಡತಿ ಮತ್ತು ಗಂಡು ಮಗುವನ್ನು ಬಿಟ್ಟು ಊರೂರು ಅಲೆಯುತ್ತ ಅಲ್ಲಲ್ಲಿ ದೇವಾಲಯಗಳನ್ನು ನಿರ್ಮಿಸುತ್ತ ಹತ್ತಾರು ವರ್ಷಗಳನ್ನು ಕಳೆದನಂತೆ. ಒಮ್ಮೆ ಅವನು ಹೊಯ್ಸಳ ರಾಜಧಾನಿಯಲ್ಲಿ ದೇವಾಲಯವೊಂದನ್ನು ನಿರ್ಮಾಣ ಮಾಡುತ್ತಿದ್ದಾಗ ಅವನ ಮಗ ಡಂಕಣಾಚಾರಿ ತಂದೆಯನ್ನು ಹುಡುಕುತ್ತಾ ಅಲೆದಾಡಿ ಅಲ್ಲಿಗೆ ಬಂದ. ಇವನೂ ಶಿಲ್ಪ ವಿದ್ಯೆಯಲ್ಲಿ ಪ್ರವೀಣನಾಗಿದ್ದ. ಮಂದಿರದಲ್ಲಿ ಪ್ರತಿಷ್ಠೆ ಮಾಡಲು ಜಕಣಾಚಾರಿ ಸಿದ್ಧಪಡಿಸಿಟ್ಟಿದ್ದ ಮೂರ್ತಿಯನ್ನು ಕಂಡ. ಅದರಲ್ಲಿ ದೋಷವಿದೆಯೆಂದು ಡಂಕಣಾಚಾರಿ ಹೇಳಿದಾಗ, ಹಾಗೆಂದು ತೋರಿಸಿಕೊಟ್ಟರೆ ತನ್ನ ಕೈಯನ್ನು ಕತ್ತರಿಸಿಕೊಳ್ಳುವುದಾಗಿ ಜಕಣಾಚಾರಿ ಪಣತೊಟ್ಟ. ಚಂದನವನ್ನು ತೆಯ್ದು ಮೂರ್ತಿಯ ಹೊಟ್ಟೆಯ ಭಾಗಕ್ಕೆ ಬಳಿದಾಗ ಚಂದನ ಹೊಕ್ಕಳಿನ ಭಾಗದಲ್ಲಿ ಮಾತ್ರ ಹಸಿಯಾಗಿ ಉಳಿಯಿತು. ಆ ಭಾಗದಲ್ಲಿ ವಿಗ್ರಹವನ್ನು ಒಡೆದಾಗ ಅದು ಟೊಳ್ಳಾಗಿದ್ದುದನ್ನೂ, ಅದರಲ್ಲಿ ಸ್ವಲ್ಪ ನೀರು, ಮರಳು ಮತ್ತು ಕಪ್ಪೆ ಇದ್ದುದನ್ನೂ ಕಂಡ ಜಕಣಾಚಾರಿ ತನ್ನ ಕೈಯನ್ನು ತತ್‌ಕ್ಷಣ ಕತ್ತರಿಸಿಕೊಂಡ. ಜಕಣಾಚಾರಿ ತನ್ನ ತಂದೆಯೆಂದು ಡಂಕಣಾಚಾರಿಗೂ, ಆ ಹುಡುಗ ತನ್ನ ಮಗನೆಂದು ಜಕಣಾಚಾರಿಗೂ ತಿಳಿದದ್ದು ಆಮೇಲೆಯೇ. ಮುಂದೆ ಜಕಣಾಚಾರಿ ತನ್ನ ಹುಟ್ಟೂರಿನಲ್ಲಿ ಒಂದೇ ಕೈಯಲ್ಲಿ ಕೇಶವ ದೇವಾಲಯವನ್ನು ಕಟ್ಟಿದ. ಅದು ಪೂರೈಸುತ್ತ ಬಂದ ಹಾಗೆ ಅವನ ಕೈ ಮೊದಲಿನಂತೆ ಬೆಳೆಯಿತಂತೆ!

ಶಿಕ್ಷಕರು : ಹೊತ್ತು ಏರುತ್ತಿದೆ. ಇನ್ನು ಹೊರಡೋಣ.

ವಿದ್ಯಾರ್ಥಿ : ಆಗಬಹುದು, ಗುರುಗಳೆ.

ಹೊಯ್ಸಳ ಶೈಲಿಯ ನೂರಾರು ದೇವಾಲಯಗಳಿವೆ. ಅವುಗಳಲ್ಲಿ ಹಾಸನ ಜಿಲ್ಲೆಯ ಬೇಲೂರು ಮತ್ತು ಹಳೇಬೀಡು ಮತ್ತು ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿರುವ ದೇವಾಲಯಗಳು ಅತ್ಯಂತ ಶ್ರೇಷ್ಠವಾಗಿವೆ. ಹೊಯ್ಸಳರ ಬಹುತೇಕ ದೇವಾಲಯಗಳು ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿವೆ.



ಚಿತ್ರ 4.4 – ಕೇಶವ ದೇವಾಲಯ, ಸೋಮನಾಥಪುರ

ಹಳೇಬೀಡಿನಲ್ಲಿರುವ ವಿಶಾಲವಾದ ಪ್ರಾಚೀನ ಕೆರೆಯಿಂದಲೇ ಇದಕ್ಕೆ 'ದೋರಸಮುದ್ರ' ಎಂಬ ಹೆಸರಾಯಿತು. ದೋರಸಮುದ್ರವನ್ನು ದಿಲ್ಲಿಯ ಸುಲ್ತಾನ್ ಅಲಾವುದ್ದೀನನ ದಂಡನಾಯಕ ಮಲ್ಲಿಕ್ ಕಾಫರ್ ಕೊಳ್ಳೆಹೊಡೆದ (1310). ಬಳಿಕ ಅದು ಮತ್ತೆ ಚೇತರಿಸಿಕೊಳ್ಳಲಿಲ್ಲ. ಅದು 'ಹಳೇಬೀಡು' ಆಯಿತು.

ಹೊಯ್ಸಳರು ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಭೌಗೋಳಿಕ ಪ್ರದೇಶಗಳು ಸೇರಿದಂತೆ ವಿಶಾಲ ಪ್ರದೇಶವನ್ನು ಮೂರು ಶತಮಾನಗಳಿಗೂ ಹೆಚ್ಚುಕಾಲ ವೈಭವಪೂರ್ಣವಾಗಿ ಆಳಿದರು. ಪ್ರಾರಂಭದಲ್ಲಿ ಬೇಲೂರು, ಅನಂತರ ದೋರಸಮುದ್ರ ಅವರ ರಾಜಧಾನಿಯಾಗಿತ್ತು. ಹುಲಿಯನ್ನು ಕೊಲ್ಲುವ ಸಳನ ಚಿತ್ರವೇ ಹೊಯ್ಸಳರ ಲಾಂಛನ.

ಹೊಯ್ಸಳ ರಾಜವಂಶದ ಪ್ರಮುಖ ಅರಸರು

- **ವಿಷ್ಣುವರ್ಧನ:** ವಿಷ್ಣುವರ್ಧನನು ಹೊಯ್ಸಳ ವಂಶದ ಗಣ್ಯ ರಾಜ. ಅವನು ಚೋಳ ಮತ್ತು ಪಾಂಡ್ಯರನ್ನು ಸೋಲಿಸಿ ಅವರ ವಶದಲ್ಲಿದ್ದ ಕನ್ನಡ ಪ್ರದೇಶಗಳನ್ನು ಗೆದ್ದುಕೊಂಡನು. ಈತನು ಜೈನಮತೀಯನಾಗಿದ್ದು, ಅನಂತರ ಶ್ರೀವೈಷ್ಣವ ಪಂಥವನ್ನು ಸ್ವೀಕರಿಸಿದನು. ಈತನ ರಾಣಿ ಶಾಂತಲೆಯು ಜೈನಮತದಲ್ಲಿಯೇ ಮುಂದುವರಿದಳು. ಧರ್ಮಸಹಿಷ್ಣುವಾಗಿದ್ದ ಈತ ಶೈವ ಮತ್ತು ಜೈನ ಮತಗಳಿಗೆ ಉದಾರ ಪ್ರೋತ್ಸಾಹ ನೀಡಿದನು.

- **ಮೂರನೆಯ ಬಲ್ಲಾಳ:** ಮೂರನೆಯ ಬಲ್ಲಾಳನು ಹೊಯ್ಸಳ ವಂಶದ ಕೊನೆಯ ಪ್ರಮುಖ ಅರಸ. ಇವನು ಐವತ್ತು ವರ್ಷಗಳಷ್ಟು ಕಾಲ ಸುದೀರ್ಘ ಆಳ್ವಿಕೆ ನಡೆಸಿದ. ಇವನ ಕಾಲದಲ್ಲಿ ದಿಲ್ಲಿಯ ಸುಲ್ತಾನರು ಮೇಲಿಂದ ಮೇಲೆ ದಕ್ಷಿಣ ಭಾರತದ ರಾಜ್ಯಗಳ ಮೇಲೆ ದಂಡೆತ್ತಿ ಬಂದರು. ದೇವಾಲಯಗಳು ಭಗ್ನಗೊಂಡವು. ಅಲ್ಲಿನ ಸಂಪತ್ತು ಸೂರೆಯಾಯಿತು.


ಆಕ್ರಮಣಗಳ ಪರಿಣಾಮವಾಗಿ ದಕ್ಷಿಣ ಭಾರತದ ಪ್ರಮುಖ ಅರಸು ಮನೆತನಗಳು ಕಣ್ಮರೆಯಾದವು. ಆದರೆ ಸುಲ್ತಾನರು ಹೊಯ್ಸಳ ರಾಜ್ಯವನ್ನು ಮಾತ್ರವೇ ಹತ್ತಿಕ್ಕದೆ ಹೋದರು. ಈ ಘೋರ ವಿಪತ್ತನ್ನು ಮೂರನೇ ಬಲ್ಲಾಳನೊಬ್ಬನೇ ಎದುರಿಸಬೇಕಾಯಿತು.

ಈ ನಡುವೆ ದಿಲ್ಲಿಯ ಪ್ರತಿನಿಧಿಯಾಗಿದ್ದ ಮಧುರೆಯ ಸುಲ್ತಾನನ ಕ್ರೌರ್ಯ ಹೆಚ್ಚಿತು. ವಯಸ್ಸಾಗಿದ್ದರೂ ಬಲ್ಲಾಳನು ಅವನನ್ನು ದಂಡಿಸಲು ಹೋದನು. ಯುದ್ಧದಲ್ಲಿ ಸುಲ್ತಾನನು ಮೋಸದಿಂದ ಬಲ್ಲಾಳನನ್ನು ಸೆರೆಹಿಡಿದು ಕ್ರೂರತನದಿಂದ ಕೊಲ್ಲಿಸಿದನು. ಪರಕೀಯರ ಆಕ್ರಮಣದ ಸಂಧಿಕಾಲದ ಕತ್ತಲಲ್ಲಿ ಮೂರನೇ ಬಲ್ಲಾಳನು ಏಕಾಂಗಿಯಾಗಿ ಬೆಳಗಿದ ಬೆಳ್ಳಿಯಂತಾಗಿದ್ದಾನೆ. ನಂತರ ಅವನ ಮಗ ನಾಲ್ಕನೇ ಬಲ್ಲಾಳನು ಕ್ರಿ.ಶ. 1346ರಲ್ಲಿ ಮಧುರೆಯ ಸುಲ್ತಾನನಿಂದ ಹತನಾದಾಗ ಹೊಯ್ಸಳ ಅರಸೊತ್ತಿಗೆ ಅಳಿಯಿತು. ಆಗಲೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗಿತ್ತು.

ಭೂಪಟ : 4

ಹೊಯ್ಸಳ ವಿಷ್ಣುವರ್ಧನನ ರಾಜ್ಯ

(ಕ್ರಿ. ಶ. 12ನೇ ಶತಮಾನ)



ಕನ್ನಡ ಸಾಹಿತ್ಯಕ್ಕೆ ಹೊಯ್ಸಳರ ಕೊಡುಗೆ

ಜನ್ನ, ಹರಿಹರ ಮತ್ತು ರಾಘವಾಂಕ ಇವರು ಹೊಯ್ಸಳರ ಕಾಲದ ಶ್ರೇಷ್ಠ ಕವಿಗಳು. ಜನ್ನನು ಆ ಕಾಲದ ಅತ್ಯಂತ ಶ್ರೇಷ್ಠ ಕವಿ. ಕವಿಚಕ್ರವರ್ತಿಯೆಂಬ ಬಿರುದು ಇವನಿಗಿತ್ತು. ಹರಿಹರನು ರಗಳೆಗಳನ್ನು ಮತ್ತು ಮಹಾಕಾವ್ಯವನ್ನು ಬರೆದನು. ರಾಘವಾಂಕನು ಅನೇಕ ಕಾವ್ಯಗಳನ್ನು ರಚಿಸಿದನು. ಇವು ಭಾಷೆಯಲ್ಲಿನ ಹೊಸ ಬೆಳವಣಿಗೆಗೆ ದಾರಿಮಾಡಿಕೊಟ್ಟವು.

ಆಂಡಯ್ಯನು ಅಚ್ಚಕನ್ನಡದಲ್ಲಿ ಕೃತಿ ರಚಿಸಿದನು. ಇದೇ ಕಾಲದಲ್ಲಿ ಬಸವೇಶ್ವರ ಮತ್ತಿತರ ಶರಣರ ವಚನಗಳು ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದವು.

ಕವಿ, ಕಾವ್ಯಗಳು: ಜನ್ನ – 'ಯಶೋಧರ ಚರಿತ'. ಹರಿಹರ –'ಗಿರಿಜಾ ಕಲ್ಯಾಣ'. ರಾಘವಾಂಕ – 'ಹರಿಶ್ಚಂದ್ರ ಕಾವ್ಯ'. ಆಂಡಯ್ಯ –'ಕಬ್ಬಿಗರ ಕಾವಂ'

ಚೋಳರು



ಚಿತ್ರ 4.5



ಚಿತ್ರ 4.6

ಚೋಳರ ಕಾಲದ ಮೇಲಿನ ಕಂಚುಶಿಲ್ಪಗಳನ್ನು ಗುರುತಿಸಬಲ್ಲಿರಾ?

ಇವೇ ನಟರಾಜ ಮತ್ತು ಕಾಳಿಂಗನ ಮೇಲೆ ನಲಿದಾಡುವ ಬಾಲಮುರಳೀ ಕೃಷ್ಣ. ಕಂಚುಶಿಲ್ಪ ಚೋಳರು ಭಾರತೀಯ ಮೂರ್ತಿಶಿಲ್ಪಕ್ಕೆ ನೀಡಿದ ಅಪೂರ್ವ ಕೊಡುಗೆಯಾಗಿದೆ.

ತಾಮ್ರ ಮತ್ತು ತವರ ಇವೆರಡರ ಮಿಶ್ರಲೋಹವೇ ಕಂಚು. ಕಂಚು ಗಟ್ಟಿಯಾಗಿದ್ದು ಹೊಳಪು ಹೊಂದಿದೆ. ಅಚ್ಚುಗಳಲ್ಲಿ ಕಂಚನ್ನು ಎರಕಹೊಯ್ದು ಕಂಚಿನ ವಿಗ್ರಹಗಳನ್ನು ತಯಾರಿಸಲಾಗುತ್ತದೆ. ಈ ವಿಧಾನ ಇಂದಿಗೂ ರೂಢಿಯಲ್ಲಿದೆ.

ಚೋಳರು ವಾಸ್ತುಶಿಲ್ಪ ಕ್ಷೇತ್ರಕ್ಕೆ ಕೂಡ ವಿಶೇಷ ಕೊಡುಗೆ ನೀಡಿದರು. ತಂಜಾವೂರಿನ ಬೃಹದೀಶ್ವರ ಮಂದಿರ ಚೋಳರ ವಿಶ್ವವಿಖ್ಯಾತ ವಾಸ್ತುಕೃತಿಯಾಗಿದೆ. ಇದು ಒಂದು ಸಾವಿರ ವರ್ಷಗಳಷ್ಟು ಹಿಂದಿನದು.

ಬೃಹದೀಶ್ವರ ದೇವಾಲಯದ ವಿಮಾನವನ್ನು ಗಮನಿಸಿ. ವಿಮಾನವೆಂದರೆ ಗರ್ಭಗುಡಿಯ ಮೇಲಿರುವ ಗೋಪುರ. ಈ ದೇವಾಲಯದ ವಿಮಾನವು ಹದಿಮೂರು ಅಂತಸ್ತುಗಳಲ್ಲಿ ಮೇಲೆದ್ದು ಗಗನವನ್ನು ಮುಟ್ಟುವಂತಿದೆ. ವಿಮಾನದ ಎತ್ತರ 61 ಮೀ. (200 ಅಡಿ). ಬೃಹದೀಶ್ವರ ಭಾರತದಲ್ಲಿಯೇ ಎತ್ತರದ ಹಾಗೂ ಗಾತ್ರದಲ್ಲಿ ಅತಿ ದೊಡ್ಡದಾದ ದೇವಾಲಯವಾಗಿದೆ. ವಿಶ್ವಪರಂಪರೆಯ ತಾಣವೆಂದು ಇದು ಮನ್ನಣೆ ಪಡೆದಿದೆ.




ಚಿತ್ರ 4.7 – ಬೃಹದೀಶ್ವರ ದೇವಾಲಯ, ತಂಜಾವೂರು

ಎಲ್ಲ ಶಿವಾಲಯಗಳ ಮುಂಭಾಗದಲ್ಲಿ ನಂದಿ ವಿಗ್ರಹ ಇರುವುದು ವಾಸ್ತುಶಿಲ್ಪದ ಒಂದು ಲಕ್ಷಣವಾಗಿದೆ. ಇಲ್ಲಿನ ನಂದಿ ವಿಗ್ರಹವು ದಕ್ಷಿಣ ಭಾರತದಲ್ಲೇ ಗಾತ್ರದಲ್ಲಿ ದೊಡ್ಡದು. ಚೋಳರ ಇನ್ನೊಂದು ಬೃಹತ್ ದೇವಾಲಯವೆಂದರೆ ಗಂಗೈಕೊಂಡ ಚೋಳಪುರಂ ಎಂಬಲ್ಲಿರುವ ಶಿವಮಂದಿರ.

ಭಾರತ ರಿಸರ್ವ ಬ್ಯಾಂಕ್ ಇತ್ತೀಚೆಗೆ ರೂ. 1000 ಮುಖಬೆಲೆಯ "ಸಹಸ್ರವರ್ಷ ತುಂಬಿರುವ ಬೃಹದೀಶ್ವರ ದೇವಾಲಯ" ಎಂಬ ನಾಣ್ಯವನ್ನು ಹೊರತಂದಿದೆ.

ಪ್ರಮುಖ ಚೋಳ ಸಮ್ರಾಟರು

ಚೋಳರು ದಕ್ಷಿಣ ಭಾರತದ ಪ್ರಬಲ ರಾಜಕೀಯ ಶಕ್ತಿಯಾಗಿ ಸುಮಾರು ನಾಲ್ಕು ಶತಮಾನಗಳ ಕಾಲ ಮೆರೆದರು. ತಂಜಾವೂರು (ತಮಿಳುನಾಡು) ಚೋಳರ ರಾಜಧಾನಿ. ಚೋಳ ಸಮ್ರಾಟರಲ್ಲಿ ರಾಜರಾಜ ಮತ್ತು ರಾಜೇಂದ್ರ ಪ್ರಮುಖರು.



• **ರಾಜರಾಜ ಚೋಳ:** ರಾಜರಾಜನು ಪರಾಕ್ರಮಿ ಹಾಗೂ ದಕ್ಷ ಆಡಳಿತಗಾರನಾಗಿದ್ದನು. ವಿಶಾಲವಾಗಿದ್ದ ಇವನ ಸಾಮ್ರಾಜ್ಯವು ತುಂಗಭದ್ರಾ ನದಿಯ ದಕ್ಷಿಣಕ್ಕಿದ್ದ ಎಲ್ಲಾ ಪ್ರದೇಶಗಳು, ಶ್ರೀಲಂಕಾ ಮತ್ತು ಮಾಲ್ದೀವ್ ದ್ವೀಪಗಳನ್ನು ಒಳಗೊಂಡಿತ್ತು. ಸಾಮ್ರಾಜ್ಯದ ರಕ್ಷಣೆಗಾಗಿ ಪ್ರಬಲವಾದ ಭೂಸೇನೆ ಮತ್ತು ನೌಕಾದಳವನ್ನು ಇವನು ಕಟ್ಟಿದನು. ಬೃಹದೀಶ್ವರ ದೇವಾಲಯವು ರಾಜರಾಜನ ಕೊಡುಗೆಯಾಗಿದೆ.

• **ರಾಜೇಂದ್ರ ಚೋಳ:** ರಾಜರಾಜನ ಅನಂತರ ಅವನ ಮಗ ರಾಜೇಂದ್ರನು ಸಾಮ್ರಾಜ್ಯದ ಉತ್ತರಾಧಿಕಾರಿಯಾದನು. ಉತ್ತರ ಭಾರತದ ಯಶಸ್ವೀ ದಂಡಯಾತ್ರೆಯು ಇವನ ಒಂದು ಮುಖ್ಯ ಸಾಧನೆಯಾಗಿದೆ. ಈ ವಿಜಯದ ನೆನಪಿಗಾಗಿ ರಾಜೇಂದ್ರನು 'ಗಂಗೈಕೊಂಡ' ಎಂಬ ಬಿರುದನ್ನು ಧರಿಸಿದ. ಅಲ್ಲದೆ ಗಂಗೈಕೊಂಡ ಚೋಳಪುರಂ ಎಂಬ ಹೊಸ ರಾಜಧಾನಿಯನ್ನೂ ಅಲ್ಲೊಂದು ಬೃಹತ್ ಶಿವದೇವಾಲಯವನ್ನೂ ನಿರ್ಮಿಸಿದನು. ರಾಜಧಾನಿಯ ಸಮೀಪ ನೀರಾವರಿಗೆ ಯೋಗ್ಯವಾದ 'ಚೋಳಗಂಗಂ' ಎಂಬ ಭಾರಿ ಗಾತ್ರದ ಕೆರೆಯನ್ನು ತೋಡಿಸಿದನು. ಉತ್ತರ ಭಾರತದಿಂದ ಸಂಭ್ರಮದಿಂದ ಹೊತ್ತುತಂದ ಪವಿತ್ರ ಗಂಗಾಜಲವನ್ನು ವಿಧಿವತ್ತಾಗಿ ಕೆರೆಗೆ ಸುರಿಯಲಾಯಿತು. ನಮ್ಮ ಪೂರ್ವಜರಿಗೆ ಗಂಗಾಜಲದ ಬಗ್ಗೆ ಎಂತಹ ಪೂಜ್ಯ ಭಾವನೆ!

ಆಗ್ನೇಯ ಏಷ್ಯದ ಸುಮಾತ್ರಾದಲ್ಲಿನ ಶ್ರೀವಿಜಯ ರಾಜ್ಯವನ್ನು ಗೆದ್ದುಕೊಂಡಿದ್ದು ರಾಜೇಂದ್ರನ ಇನ್ನೊಂದು ಗಣನೀಯ ಸಾಧನೆಯಾಗಿದೆ.

ಸಾಹಿತ್ಯ: ಚೋಳರ ಆಳ್ವಿಕೆಯ ಕಾಲವು ತಮಿಳು ಸಾಹಿತ್ಯ ಮತು ಸಂಸ್ಕೃತಿಯ ಸುವರ್ಣ ಯುಗವಾಗಿತ್ತು. ಅವರ ಕಾಲದಲ್ಲಿ ಭಕ್ತಿ ಸಾಹಿತ್ಯವು ಹುಲುಸಾಗಿ ಬೆಳೆಯಿತು. **'ಪೆರಿಯಪುರಾಣಂ'** ಭಕ್ತಿ ಸಾಹಿತ್ಯದಲ್ಲಿ ಪ್ರಮುಖ ಸ್ಥಾನಪಡೆದಿದೆ. ಇದೇ ಕಾಲಕ್ಕೆ ಸೇರಿದ **ಕಂಬನ್** ಬರೆದಿರುವ ರಾಮಾಯಣವು ಇಂದಿಗೂ ಜನಪ್ರಿಯವಾಗಿದೆ.

ಗ್ರಾಮಾಡಳಿತ: ಚೋಳರ ಗ್ರಾಮಾಡಳಿತ ಪದ್ಧತಿಯು ಆದರ್ಶಪ್ರಾಯವಾಗಿತ್ತು. ಗ್ರಾಮಾಡಳಿತವನ್ನು ಆಯಾ ಗ್ರಾಮಸಭೆಗಳೇ ನಡೆಸುತ್ತಿದ್ದವು. ಗ್ರಾಮಸಭೆಯ ಸದಸ್ಯರನ್ನು ಚುನಾಯಿಸಲಾಗುತ್ತಿತ್ತು. ಕೆಲವು ಮಂದಿ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸಿ ಅವುಗಳಿಗೆ ನಿರ್ದಿಷ್ಟವಾದ ಕಾರ್ಯಗಳನ್ನು ಗೊತ್ತುಪಡಿಸಲಾಗುತ್ತಿತ್ತು. ಸಮಿತಿಗಳು ಹಣಕಾಸಿನ ಲೆಕ್ಕವನ್ನು ಒಪ್ಪಿಸಬೇಕಿತ್ತು. ಅನರ್ಹ ಸದಸ್ಯರನ್ನು ಗ್ರಾಮಸಭೆಯಿಂದ ದೂರವಿಡುವ ಕ್ರಮವಿತ್ತು. ಚೋಳ ಗ್ರಾಮಾಡಳಿತ ವ್ಯವಸ್ಥೆಯು ಸಾಮಾನ್ಯವಾಗಿ ಇಂದಿನ ಪಂಚಾಯಿತಿ ವ್ಯವಸ್ಥೆಯಂತಿತ್ತು.

ಭಾರತದಲ್ಲಿ ಆಡಳಿತ ನಡೆಸಿದ ಬ್ರಿಟಿಷ್ ಅಧಿಕಾರಿಗಳು ಚೋಳರ ದಕ್ಷ ಆಡಳಿತವನ್ನು ಮೆಚ್ಚಿಕೊಂಡು, ಚೋಳರ ಕಾಲದ ಗ್ರಾಮಗಳು 'ಪುಟ್ಟ ಗಣರಾಜ್ಯಗಳು' ಎಂಬಂತೆ ಇದ್ದವೆಂದು ಬಣ್ಣಿಸಿದ್ದಾರೆ.

ಚಟುವಟಿಕೆ: ಚೋಳರ ಕಾಲದ ಗ್ರಾಮಾಡಳಿತ ಪದ್ಧತಿಗೂ ಇಂದಿನ ಗ್ರಾಮ ಪಂಚಾಯಿತಿಗಳಿಗೂ ಇರುವ ಸಮಾನ ಲಕ್ಷಣಗಳನ್ನು ಕುರಿತು ಬರೆಯಿರಿ.

ವ್ಯಾಪಾರ: ಚೋಳ ಸಾಮ್ರಾಜ್ಯವು ಸಂಪದ್ಭರಿತವಾಗಿತ್ತು. ವಿದೇಶಿ ವ್ಯಾಪಾರವು ಬಿರುಸಾಗಿ ನಡೆಯುತ್ತಿತ್ತು. ಚೀನ, ಸುಮಾತ್ರಾ, ಜಾವಾ ಮತ್ತು ಅರೇಬಿಯ ಮುಂತಾದ ಪ್ರದೇಶಗಳೊಡನೆ ಸಾಮ್ರಾಜ್ಯವು ವ್ಯಾಪಾರ ಸಂಬಂಧವನ್ನಿರಿಸಿಕೊಂಡಿತ್ತು. ವ್ಯಾಪಾರಿ ಸಂಘಗಳು ದೇಶವಿದೇಶಗಳಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದವು.✤

ಕಾಲಗಣನೆ (ಕ್ರಿ.ಶ.)

ಹೊಯ್ಸಳರ ಆಳ್ವಿಕೆಯ ಕಾಲ	–	1006–1346
ಚೋಳರ ಆಳ್ವಿಕೆಯ ಕಾಲ	–	ಸುಮಾರು 850–1200
ವಿಷ್ಣುವರ್ಧನ	–	ಸುಮಾರು 1108–1141
ಮೂರನೆಯ ಬಲ್ಲಾಳ	–	ಸುಮಾರು 1291–1343
ವಿಜಯನಗರದ ಸ್ಥಾಪನೆ	–	1336
ರಾಜರಾಜ ಚೋಳ	–	985–1014
ರಾಜೇಂದ್ರ ಚೋಳ	–	1015–1044

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಹೊಯ್ಸಳ ದೇವಾಲಯಗಳ ಎರಡು ಲಕ್ಷಣಗಳನ್ನು ಹೇಳಿರಿ.
2 'ಭುವನೇಶ್ವರಿ' ಎಂದರೇನು?
3 ಹೊಯ್ಸಳರ ಕೆಲವು ಶ್ರೇಷ್ಠ ದೇವಾಲಯಗಳನ್ನು ಹೆಸರಿಸಿ.
4 ಹೊಯ್ಸಳರ ಆಳ್ವಿಕೆಯ ಕಾಲದ ಶ್ರೇಷ್ಠ ಕವಿಗಳನ್ನು ಹಾಗೂ ಅವರ ಕೃತಿಗಳನ್ನು ಹೆಸರಿಸಿ.
5 ಬೃಹದೀಶ್ವರ ದೇವಾಲಯ ಏಕೆ ಪ್ರಸಿದ್ಧವಾಗಿದೆ?
6 ರಾಜರಾಜ ಚೋಳನ ಸಾಧನೆಗಳು ಯಾವುವು?
7 ಚೋಳ ಕಾಲದ ಗ್ರಾಮಾಡಳಿತ ವ್ಯವಸ್ಥೆಯ ವಿಶೇಷತೆಗಳು ಯಾವುವು?

ಚಟುವಟಿಕೆಗಳು

1 ಹೊಯ್ಸಳ ಮತ್ತು ಚೋಳರ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಗಳ ಭಾವಚಿತ್ರವನ್ನು ವಿವರಣೆಯೊಂದಿಗೆ ಸಂಗ್ರಹಿಸಿ.
2 ಭೂಪಟದಲ್ಲಿ ಹೊಯ್ಸಳ ಮತ್ತು ಚೋಳರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

☆ ☆ ☆

ಪಾಠ 5	ಧಾರ್ಮಿಕ–ಸಾಮಾಜಿಕ ಸುಧಾರಣಾ ಚಳವಳಿಗಳು

ಪಾಠದ ಪರಿಚಯ

• ಕ್ರಿ.ಶ. 8ನೇ ಶತಮಾನದಿಂದ 16ನೇ ಶತಮಾನದವರೆಗಿನ ಕಾಲದಲ್ಲಿ ಅನೇಕ ಧಾರ್ಮಿಕ ಸುಧಾರಕರು ಜನ್ಮತಾಳಿದರು. ಅವರು ಚಿಂತನಶೀಲರಾಗಿದ್ದು, ವೈಚಾರಿಕ ನೆಲೆಯಲ್ಲಿ ಧರ್ಮ ಮತ್ತು ಸಮಾಜದ ಪುನರುತ್ಥಾನ ಮಾಡಿದರು.

• ಈ ಪಾಠದಲ್ಲಿ ಸುಧಾರಣಾ ಚಳವಳಿಯ ಮುಂಚೂಣಿಯಲ್ಲಿದ್ದ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಬಸವೇಶ್ವರರು ಮತ್ತು ಮಧ್ವಾಚಾರ್ಯರ ಜೀವನ ಹಾಗೂ ಸುಧಾರಣೆಗಳನ್ನು ಸಂಕ್ಷಿಪ್ತವಾಗಿ ನಿರೂಪಣೆ ಮಾಡಲಾಗಿದೆ.

ಸಾಮರ್ಥ್ಯಗಳು

1 ಧಾರ್ಮಿಕ ಸುಧಾರಕರ ಚಿಂತನೆಗಳನ್ನು ಮತ್ತು ಸುಧಾರಣೆಗಳನ್ನು ಅರ್ಥೈಸಿಕೊಳ್ಳುವುದು.

2 ಅವರ ಚಿಂತನೆಗಳು ಎಷ್ಟರ ಮಟ್ಟಿಗೆ ಪ್ರಸ್ತುತವಾಗಿವೆ ಎಂಬುದನ್ನು ಅರಿತುಕೊಳ್ಳುವುದು.

ಭಾರತದಲ್ಲಿ ಅನೇಕ ಮಹಾಪುರುಷರು ಜನ್ಮತಾಳಿದರು. ಇವರು ಬೋಧಕರು ಮಾತ್ರವೇ ಆಗಿರದೆ ಸಕ್ರಿಯವಾಗಿ ಸಮಾಜ ಸುಧಾರಣೆಯನ್ನೂ ಮಾಡಿದರು. ಇವರ ಸುಧಾರಣೆಗಳು ಜನರಲ್ಲಿದ್ದ ಅಜ್ಞಾನ ಮತ್ತು ಕೆಟ್ಟ ಸಂಪ್ರದಾಯಗಳನ್ನು ತೊಡೆದು ಹಾಕಿದವು. ಇವರ ಪ್ರಭಾವ ಇಂದಿಗೂ ವ್ಯಾಪಕವಾಗಿ ಹರಡಿದೆ.

'ಭಜಗೋವಿಂದಂ' ಹಾಡನ್ನು ಕೇಳಿರುವಿರಾ? ನೀವು ಅದನ್ನು ಹಾಡುವ ಪದ್ಧತಿ ಇದೆಯೋ? ಅದನ್ನು ಬರೆದವರು ಯಾರು?

ಶ್ರೀಶಂಕರಾಚಾರ್ಯರು

ಶಂಕರರು ಕೇರಳದ ಕಾಲಡಿ ಎಂಬ ಗ್ರಾಮದಲ್ಲಿ ಜನಿಸಿದರು. ಪ್ರತಿಭಾವಂತರಾದ ಇವರು ಎಂಟರ ವಯಸ್ಸಿನಲ್ಲಿಯೇ ನಾಲ್ಕು ವೇದಗಳನ್ನು ಅರಿತರು.

ಶಿವಗುರು ಮತ್ತು ಆರ್ಯಾಂಬೆ ಶಂಕರರ ತಂದೆ ತಾಯಿ. ಶಂಕರರು ಪ್ರತಿಪಾದಿಸಿದ ತತ್ವವನ್ನು ಅದ್ವೈತ ಎನ್ನುವರು.



ಚಿತ್ರ 5.1 – ಶಂಕರಾಚಾರ್ಯರು

ಶಂಕರರ ಸುಧಾರಣೆಗಳು

- ಶಂಕರರು ಅಂದಿನ ಕಾಲದ ಹಿಂದೂ ಸಮಾಜದ ಮೂಢ ಆಚಾರ ವಿಚಾರಗಳನ್ನು ಖಂಡಿಸಿ ಸುಧಾರಣೆ ತಂದರು.
- ಶಂಕರರು ಬದರಿ (ಉತ್ತರಾಖಂಡ), ದ್ವಾರಕೆ (ಗುಜರಾತ್), ಪುರಿ (ಒಡಿಶ) ಮತ್ತು ಕರ್ನಾಟಕದ ಶೃಂಗೇರಿಯಲ್ಲಿ ಪೀಠಗಳನ್ನು



ಚಿತ್ರ 5.2 – ಬದರಿನಾಥ ಮಂದಿರ, ಬದರಿ


ಸ್ಥಾಪಿಸಿದರು. ಈ ಪೀಠಗಳು ಭಾರತೀಯರನ್ನು ಭಾವನಾತ್ಮಕ ಹಾಗೂ ಧಾರ್ಮಿಕವಾಗಿ ಜೋಡಿಸುವ ಕೇಂದ್ರಗಳಾದವು.

- ಶಂಕರರು ಅನೇಕ ಶಾಸ್ತ್ರಗ್ರಂಥಗಳನ್ನು ಬರೆದರು. ಅವರ ಕೃತಿ 'ಭಜಗೋವಿಂದಂ' ಇಂದಿಗೂ ಜನಪ್ರಿಯವಾಗಿದೆ. ಶಂಕರರು ತಮ್ಮ 32 ವರ್ಷಗಳ ಜೀವಿತ ಕಾಲದೊಳಗೆ ಇಷ್ಟೆಲ್ಲಾ ಸಾಧಿಸಿದ್ದು ಅಚ್ಚರಿಯ ಸಂಗತಿಯಾಗಿದೆ.

ಶ್ರೀರಾಮಾನುಜಾಚಾರ್ಯರು

ರಾಮಾನುಜರು ಚೆನ್ನೈ ಸಮೀಪದ ಶ್ರೀಪೆರಂಬುದೂರಿನಲ್ಲಿ ಜನಿಸಿದರು. ಕಾಂಚಿ ನಗರದಲ್ಲಿ ಶಾಸ್ತ್ರಾಧ್ಯಯನ ಮಾಡಿದರು.

ರಾಮಾನುಜರ ತಂದೆ ಕೇಶವ ದೀಕ್ಷಿತರು, ತಾಯಿ ಕಾಂತಿಮತಿ. ಅವರು ಪ್ರತಿಪಾದಿಸಿದ ಸಿದ್ಧಾಂತವನ್ನು ವಿಶಿಷ್ಟಾದ್ವೈತವೆಂದು ಕರೆಯುತ್ತೇವೆ.



ಚಿತ್ರ 5.3 – ರಾಮಾನುಜಾಚಾರ್ಯರು

ರಾಮಾನುಜರು ದೇಶದ ನಾಲ್ಕೂ ದಿಕ್ಕಿನಲ್ಲಿ ಸಂಚರಿಸಿ ಶ್ರೀವೈಷ್ಣವಮತವನ್ನು ಪ್ರಚಾರ ಮಾಡಿದರು. ಮುಕ್ತಿಗೆ ಭಕ್ತಿ ಮತ್ತು ಶರಣಾಗತಿ ಮುಖ್ಯವೆಂದು ಸಾರಿದರು. ಕರ್ನಾಟಕದ ಹೊಯ್ಸಳ ದೊರೆ ವಿಷ್ಣುವರ್ಧನ ಇವರನ್ನು ಸ್ವಾಗತಿಸಿದನು.



ಚಿತ್ರ 5.4 – ಚೆಲುವನಾರಾಯಣ ದೇವಾಲಯ, ಮೇಲುಕೋಟೆ.

ರಾಮಾನುಜರ ಸುಧಾರಣೆಗಳು

- ರಾಮಾನುಜರು ಜಾತಿವಾದವನ್ನು ಖಂಡಿಸಿದರು.
- ರಾಮಾನುಜರು ಮೇಲುಕೋಟೆ ಮತ್ತು ದಕ್ಷಿಣ ಭಾರತದಲ್ಲಿ ಅನೇಕ ಭವ್ಯ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದರು.

ಶ್ರೀಬಸವೇಶ್ವರರು

ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದಲ್ಲಿ ಬಸವೇಶ್ವರರು ಅತ್ಯಂತ ಕ್ರಾಂತಿಕಾರಿ ಪಾತ್ರವಹಿಸಿದರು. ಬಸವೇಶ್ವರರು ವಿಜಯಾಪುರ ಜಿಲ್ಲೆಯ ಬಸವನ ಬಾಗೇವಾಡಿಯವರು. ಬಾಲ್ಯದಲ್ಲಿ ಉಪನಯನ ಸಂಸ್ಕಾರಕ್ಕೆ ಒಪ್ಪದೆ ಲಿಂಗದೀಕ್ಷೆ ಪಡೆದರು. ಅವರ ವಿದ್ಯಾಭ್ಯಾಸ ಕೂಡಲಸಂಗಮದಲ್ಲಾಯಿತು.

ಬಸವೇಶ್ವರರ ತಂದೆ ತಾಯಿ ಮಾದರಸ ಮತ್ತು ಮಾದಲಾಂಬಿಕೆ ಬಸವನ ಬಾಗೇವಾಡಿ ಅಗ್ರಹಾರದ ಶೈವ ಬ್ರಾಹ್ಮಣರಾಗಿದ್ದರು. ಬಸವತತ್ವವನ್ನು ಶಕ್ತಿವಿಶಿಷ್ಟಾದ್ವೈತ ಎಂದು ಕರೆಯುತ್ತಾರೆ.

ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದ ಕಲಚೂರಿ ವಂಶದ ಬಿಜ್ಜಳನು ಬಸವೇಶ್ವರರನ್ನು ಭಂಡಾರದ ಅಧಿಕಾರಿಯಾಗಿ ನೇಮಿಸಿದನು. ಕಲ್ಯಾಣದಲ್ಲಿ ಬಸವಣ್ಣನವರು ಕ್ರಾಂತಿಕಾರಿ ಚಿಂತನೆಗಳನ್ನು ಪ್ರಚಾರ ಮಾಡಲಾರಂಭಿಸಿದರು. ಸಂಪ್ರದಾಯಸ್ಥರು ಈ ಚಿಂತನೆಗಳನ್ನು ವಿರೋಧಿಸಿದರು. ಇದರಿಂದ ನೊಂದುಕೊಂಡ ಅವರು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಹೋದರು. ಅವರು ನಂತರ ಕೂಡಲಸಂಗಮದಲ್ಲಿ ಐಕ್ಯರಾದರೆಂದು ನಂಬಲಾಗಿದೆ.



ಚಿತ್ರ 5.5 – ಬಸವೇಶ್ವರರು

ಬಸವೇಶ್ವರರ ಸುಧಾರಣೆಗಳು

- ಬಸವಣ್ಣನವರು ಜಾತಿರಹಿತ ಮತ್ತು ವರ್ಗರಹಿತ ಸಮಾಜ ನಿರ್ಮಾಣಕ್ಕೆ ಪಣತೊಟ್ಟರು.
- 'ಕಾಯಕವೇ ಕೈಲಾಸ' ಇದು ಅವರ ಮುಖ್ಯ ಬೋಧನೆಗಳಲ್ಲಿ ಒಂದಾಗಿದೆ.

ಚಟುವಟಿಕೆ : ನಿಮಗೆ ಮುಖ್ಯವೆಂದು ಕಂಡ ಬಸವಣ್ಣನವರ ಮೂರು ವಚನಗಳನ್ನು ಸಂಗ್ರಹಿಸಿ. ಅವುಗಳಲ್ಲಿ ಕಂಡು ಬರುವ ಜಾತ್ಯತೀತ ತತ್ವಗಳನ್ನು ಅರ್ಥೈಸಿ ಆ ವಿಚಾರ ಕುರಿತು ಹತ್ತು ವಾಕ್ಯಗಳನ್ನು ಬರೆಯಿರಿ.

ಕಾಯಕವೆಂದರೆ ಭಕ್ತಿಯಿಂದ ಮಾಡುವ ದುಡಿಮೆ. ಕಾಯಕದಿಂದ ಬಂದ ಫಲವನ್ನು ಸಮಾನವಾಗಿ ಸ್ವೀಕರಿಸುವುದೇ 'ದಾಸೋಹ' ಆಗಿರುತ್ತದೆ. ಬಸವಣ್ಣನವರ ಗುರಿ ಜನರಲ್ಲಿ ದುಡಿಮೆಯ ಸಂಸ್ಕೃತಿ ಬೆಳೆಸುವುದಾಗಿತ್ತು.

- ಬಸವಣ್ಣನವರು ಜಾತೀಯತೆ, ಮೂರ್ತಿಪೂಜೆ, ಯಜ್ಞಯಾಗಾದಿಗಳನ್ನು ಖಂಡಿಸಿದರು. 'ದೇಹವೇ ದೇಗುಲ' ಎಂದರು.
- 'ಹೆಣ್ಣು ತಾಯಿ ಅವಳೇ ಸರ್ವಸ್ವ' ಎಂಬ ಅವರ ಮಾತು ದನಿ ಕಳೆದುಕೊಂಡಿದ್ದ ಸ್ತ್ರೀಯರಿಗೆ ಆತ್ಮವಿಶ್ವಾಸ ನೀಡಿತು.
- ಅವರು ಬಸವಕಲ್ಯಾಣದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ಇದು ವಚನಕಾರರ ವೇದಿಕೆಯಾಗಿತ್ತು.
- ಬಸವೇಶ್ವರರು ಸಾವಿರಕ್ಕೂ ಹೆಚ್ಚಿನ ವಚನಗಳನ್ನು ರಚಿಸಿದರು. ಇವು 'ಕೂಡಲಸಂಗಮದೇವ' ಎಂಬ ಅಂಕಿತದಿಂದ ಕೊನೆಗೊಳ್ಳುತ್ತವೆ.

ವಚನ ಸಾಹಿತ್ಯ: 'ವಚನ' ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ವಚನಗಳು ಗದ್ಯದಂತೆ ಓದಲು ಪದ್ಯದಂತೆ ಹಾಡಲು ಬರುವ ಸಾಹಿತ್ಯ. ಜೇಡರ ದಾಸಿಮಯ್ಯ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ವಚನಕಾರರಿದ್ದರು. ಅವರು ಎಲ್ಲಾ ಜಾತಿ ವರ್ಗಗಳಿಗೆ ಸೇರಿದವರಾಗಿದ್ದರು. ವಚನಗಳಲ್ಲಿ ಪ್ರಕಟವಾದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

ಶ್ರೀಮಧ್ವಾಚಾರ್ಯರು

ಮಧ್ವರು ಉಡುಪಿಗೆ ಹತ್ತಿರವಿರುವ ಪಾಜಕ (ಬೆಳ್ಳೆ) ಗ್ರಾಮದಲ್ಲಿ ಜನಿಸಿದರು.

ತುಳು ಬ್ರಾಹ್ಮಣರಾದ ಮಧ್ಯಗೇಹ ಭಟ್ಟ ಮತ್ತು ವೇದಾವತಿ ಇವರ ತಂದೆ ತಾಯಿ. ಇವರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.

ಸನ್ಯಾಸ ಸ್ವೀಕರಿಸಿದ ಅನಂತರ ಮಧ್ವರು ತಮ್ಮ ಬೋಧನೆಗಳ ಪ್ರಸಾರಕ್ಕಾಗಿ ಭಾರತದ ಎಲ್ಲೆಡೆ ಎರಡು ಬಾರಿ ಸಂಚರಿಸಿದರು. ವಿಷ್ಣು ಅವರ ಆರಾಧ್ಯ ದೇವರು.

ಮಧ್ವರ ಸುಧಾರಣೆಗಳು

- ಮಧ್ವರು ಒಟ್ಟು 37 ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದರು.
- ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದರು.
- ಅವರು ಸರಳವಾದ ಭಕ್ತಿಮಾರ್ಗವನ್ನು ಉಪದೇಶ ಮಾಡಿದರು.



ಚಿತ್ರ 5.6 – ಮಧ್ವಾಚಾರ್ಯರು

ಕೃಷ್ಣನ ಪೂಜೆಯನ್ನು ಅಷ್ಟಮಠಗಳ ಯತಿಗಳು ಎರಡು ತಿಂಗಳಿಗೊಮ್ಮೆ ಪರ್ಯಾಯದಿಂದ ಮಾಡಬೇಕೆಂದು ಮಧ್ವರು ವ್ಯವಸ್ಥೆಗೊಳಿಸಿದರು. ಪರ್ಯಾಯದ ಕಾಲಾವಧಿಯನ್ನು ವಾದಿರಾಜರು ಎರಡು ವರ್ಷಗಳಿಗೆ ವಿಸ್ತರಿಸಿದರು.

ಅಷ್ಟ ಮಠಗಳೊಂದಿಗೆ, ಉತ್ತರಾದಿ, ವ್ಯಾಸರಾಯ ಮತ್ತು ರಾಘವೇಂದ್ರ ಮಠಗಳು ಮಧ್ವತತ್ವದ ಅನುಯಾಯಿಗಳ ಮುಖ್ಯ ಧರ್ಮಕೇಂದ್ರಗಳಾಗಿವೆ.

ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಮಧ್ವಾಚಾರ್ಯರ ಉಪದೇಶಗಳಿಂದ ಜನತೆ ಪ್ರಭಾವಿತರಾದರು. ✤



ಚಿತ್ರ 5.7 – ಶ್ರೀಕೃಷ್ಣ ದೇವಸ್ಥಾನ, ಉಡುಪಿ

ಕಾಲಗಣನೆ (ಕ್ರಿ.ಶ.)

ಶಂಕರಾಚಾರ್ಯರು	–	8–9ನೇ ಶತಮಾನ
ರಾಮಾನುಜಾಚಾರ್ಯರು	–	11–12ನೇ ಶತಮಾನ
ಬಸವೇಶ್ವರರು	–	12ನೇ ಶತಮಾನ
ಮಧ್ವಾಚಾರ್ಯರು	–	13–14ನೇ ಶತಮಾನ

ಹೊಸ ಪದಗಳು

ದೀಕ್ಷೆ – ಮಂತ್ರೋಪದೇಶ. ಭಂಡಾರ – ಖಜಾನೆ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಶಂಕರಾಚಾರ್ಯರು ಮಾಡಿರುವ ಸುಧಾರಣೆಗಳು ಯಾವುವು?

2 ರಾಮಾನುಜಾಚಾರ್ಯರು ಯಾವ ಸಾಮಾಜಿಕ ಸುಧಾರಣೆಗಳನ್ನು ಮಾಡಿದರು?

3 ಬಸವೇಶ್ವರರ ಚಿಂತನೆಗಳು ಯಾವುವು?

4 ವಚನ ಸಾಹಿತ್ಯದ ಮಹತ್ವವೇನು? ಕೆಲವು ವಚನಕಾರರನ್ನು ಹೆಸರಿಸಿ.

5 ಮಧ್ವಾಚಾರ್ಯರ ಕೊಡುಗೆಗಳು ಯಾವುವು?

ಚಟುವಟಿಕೆಗಳು

1 'ಭಜಗೋವಿಂದಂ' ಆಲಿಸಿ.

2 ಶಂಕರರು, ರಾಮಾನುಜರು, ಬಸವೇಶ್ವರರು ಮತ್ತು ಮಧ್ವರ ಜೀವನ ಚರಿತ್ರೆಯನ್ನು ಓದಿ.

3 ಬಸವೇಶ್ವರರ ಹತ್ತು ವಚನಗಳನ್ನು ಸಂಗ್ರಹಿಸಿ.

4 ಕೆಲವು ವಚನಕಾರರು ಮತ್ತು ಅವರ ಅಂಕಿತನಾಮಗಳನ್ನು ಸಂಗ್ರಹಿಸಿ.

5 ಶಾಲಾ ಸಮಾರಂಭಗಳಲ್ಲಿ ಆಚಾರ್ಯರು, ಸಂತರು ಮತ್ತು ಶರಣರ ವೇಷಭೂಷಣಗಳನ್ನು ಧರಿಸಿ ಅವರ ಬೋಧನೆಗಳನ್ನು ತಿಳಿಸಿ.

6 ಕಳಬೇಡ, ಕೊಲಬೇಡ............ಈ ವಚನದಲ್ಲಿ ಕಂಡುಬರುವ ಜೀವನ ಮೌಲ್ಯಗಳಾವುವು? ಇಂದು ನಮ್ಮ ಸಮಾಜದಲ್ಲಿ ಈ ಮೌಲ್ಯಗಳು ಕಂಡು ಬರುತ್ತಿವೆಯೋ? ಇಲ್ಲವಾದಲ್ಲಿ ಕಾರಣಗಳನ್ನು ಸಂಗ್ರಹಿಸಿ ಚರ್ಚಿಸಿ.

7 ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು ಬೋಧಿಸಿದ ತತ್ವಗಳನ್ನು ಸಂಗ್ರಹಿಸಿ ಬರೆಯಿರಿ.

☆ ☆ ☆

ಪಾಠ 6	# ದಿಲ್ಲಿಯ ಸುಲ್ತಾನರು

ಪಾಠದ ಪರಿಚಯ

11–12ನೇ ಶತಮಾನಗಳಲ್ಲಿ ಭಾರತದ ಮೇಲೆ ಟರ್ಕರು ಪದೇ ಪದೇ ಎಸಗುತ್ತಿದ್ದ ಸೈನಿಕ ಆಕ್ರಮಣಗಳು ಅಂತಿಮವಾಗಿ ದಿಲ್ಲಿಯ ಸುಲ್ತಾನರ ಆಳ್ವಿಕೆಗೆ (1206–1526) ನಿಮಿತ್ತವಾದುವು. ಈ ಪಾಠದಲ್ಲಿ ದಿಲ್ಲಿಯ ಸುಲ್ತಾನರ ಧೋರಣೆ, ಆಡಳಿತ, ಅವರ ಕಾಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಮತ್ತು ವಾಸ್ತುಶಿಲ್ಪ, ಸಾಹಿತ್ಯಗಳಿಗೆ ಅವರು ನೀಡಿದ ಕೊಡುಗೆಯನ್ನು ನಿರೂಪಿಸಲಾಗಿದೆ.

ಸಾಮರ್ಥ್ಯಗಳು

1 11–12ನೇ ಶತಮಾನಗಳಲ್ಲಾದ ಐತಿಹಾಸಿಕ ಬೆಳವಣಿಗೆಗಳು ಅಂತಿಮವಾಗಿ ದಿಲ್ಲಿಯ ಸುಲ್ತಾನರ ಆಳ್ವಿಕೆಯ ಸ್ಥಾಪನೆಗೆ ಹೇಗೆ ದಾರಿಮಾಡಿಕೊಟ್ಟವು ಎಂಬುದನ್ನು ಅರ್ಥೈಸಿಕೊಳ್ಳುವುದು.

2 ಸುಲ್ತಾನರ ಧೋರಣೆಗಳು ಹಾಗೂ ಆಡಳಿತ ವೈಖರಿ ಇವು ಭಾರತೀಯ ಸಮಾಜ, ಆರ್ಥಿಕತೆ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವುದು.

3 ದಿಲ್ಲಿಯ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.

ನಮ್ಮ ದೇಶದ ಮೇಲೆ ಎಂಟನೆಯ ಶತಮಾನದಿಂದ ಮೊದಲುಗೊಂಡು ಮೇಲಿಂದ ಮೇಲೆ ವಿದೇಶಿ ಆಕ್ರಮಣಗಳು ನಡೆದವು. ಆಕ್ರಮಣಕಾರರು ವಾಯವ್ಯ ಸರಹದ್ದಿನಿಂದ ಬಂದವರಾಗಿದ್ದರು. ಸಂಪತ್ತಿನ ಲೂಟಿ, ರಾಜ್ಯ ವಿಸ್ತರಣೆ ಮತ್ತು ಮತಪ್ರಸಾರ ಇವು ದಾಳಿಗಳ ಉದ್ದೇಶವಾಗಿದ್ದುವು.

- **ಅರಬ್ಬರ ದಾಳಿ:** ಭಾರತದ ಮೇಲೆ ದಾಳಿ ಮಾಡಿದ ಮೊದಲಿಗರೆಂದರೆ ಅರಬ್ಬರು. ಅರಬ್ಬರ ದಂಡು ಕ್ರಿ.ಶ. 712ರಲ್ಲಿ ಸಿಂಧ್ ಮತ್ತು ಮುಲ್ತಾನ್ ಪ್ರಾಂತಗಳನ್ನು ವಶಪಡಿಸಿಕೊಂಡಿತು. ಇದರೊಂದಿಗೆ ಈ ಪ್ರದೇಶದಲ್ಲಿ ಇಸ್ಲಾಂ ನೆಲೆಯೂರಿತು. ಆದರೆ ಅಲ್ಪಕಾಲದಲ್ಲಿ ಅರಬ್ಬರ ಅತಿಕ್ರಮಣವು ತಣ್ಣಗಾಯಿತು.

- **ಟರ್ಕರ ದಾಳಿ:** ಇದಾದ ಸುಮಾರು ಮೂರು ಶತಮಾನಗಳ ಅನಂತರ ಟರ್ಕಿ ಮೂಲದ ಮಹಮದ್ ಘಜನಿ ಭಾರತದ ಮೇಲೆ ದಾಳಿ ನಡೆಸಿದನು. ಅಫ್‌ಘಾನಿಸ್ತಾನದ ಘಜನಿ ಎಂಬ ಚಿಕ್ಕ ರಾಜ್ಯದ ಸುಲ್ತಾನನಾಗಿದ್ದ ಇವನು ಹದಿನೇಳು ಬಾರಿ ದಾಳಿ ನಡೆಸಿದನು. ಇದರ ಪರಿಣಾಮವಾಗಿ ಭಾರತದ ಹಲವಾರು ಸಂಪದ್ಭರಿತ ನಗರಗಳು ಸೂರೆಗೊಂಡವು. ಧಾರ್ಮಿಕ ಕೇಂದ್ರಗಳು ನಾಶವಾದವು. ಅವುಗಳಲ್ಲಿ ಮಥುರೆಯ ಪ್ರಸಿದ್ಧ ಶ್ರೀಕೃಷ್ಣ ಮಂದಿರ ಹಾಗೂ ಗುಜರಾತಿನ ಸಂಪದ್ಭರಿತ ಸೋಮನಾಥ ಮಂದಿರಗಳು ಸೇರಿದ್ದವು.

ಚಟುವಟಿಕೆ: ಪ್ರಾರಂಭದ ಹಂತದಲ್ಲಿ ಭಾರತದ ಮೇಲೆ ದಾಳಿ ಮಾಡಿದ ಪರಕೀಯರ ಗುರಿ ಏನಿದ್ದಿತು? ಅದರಿಂದ ಭಾರತದ ಮೇಲೆ ಆದ ಪರಿಣಾಮಗಳೇನು? ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.



ಚಿತ್ರ 6.1 – ಘಜನಿ ಮಹಮದ್



ಚಿತ್ರ 6.2 – ಘೋರಿ ಮಹಮದ್

ದೇಶ ಸ್ವತಂತ್ರಗೊಂಡ ಅನಂತರ ಭಗ್ನಗೊಂಡ ಸೋಮನಾಥ ದೇವಾಲಯವನ್ನು ಭವ್ಯವಾಗಿ ಪುನರ್‌ನಿರ್ಮಾಣ ಮಾಡಲಾಯಿತು (1951). ಇದನ್ನು ಭಾರತದ ಪ್ರಥಮ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು.



ಚಿತ್ರ 6.3 – ಸೋಮನಾಥ ಮಂದಿರ, ಗುಜರಾತ್

• **ಮಹಮದ್ ಘೋರಿ:** ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಅಫ್‌ಘಾನಿಸ್ತಾನದ ಮಹಮದ್ ಘೋರಿ ಭಾರತದ ಮೇಲೆ ದಾಳಿ ನಡೆಸಿ ಸಿಂಧ್ ಮತ್ತು ಪಂಜಾಬ್ ಪ್ರಾಂತಗಳನ್ನು ವಶಪಡಿಸಿಕೊಂಡನು. ದಾಳಿ ಮುಂದುವರಿಯುತ್ತಿದ್ದಂತೆ ದಿಲ್ಲಿಯ ರಾಜ ಪೃಥ್ವೀರಾಜ್ ಚೌಹಾಣ ಮಹಮದನನ್ನು ಯುದ್ಧದಲ್ಲಿ ಹೀನಾಯವಾಗಿ ಸೋಲಿಸಿದನು. ಆದರೆ ಪೃಥ್ವೀರಾಜ್ ಅವನಿಗೆ ಮರಣದಂಡನೆ ನೀಡಲಿಲ್ಲ. ಮರುವರ್ಷವೇ ಇವರೊಳಗೆ ಮತ್ತೊಮ್ಮೆ ಕದನ ನಡೆದು ಪೃಥ್ವೀರಾಜ್ ಪರಾಭವಗೊಂಡನು. ಅವನನ್ನು ಮಹಮದ್ ಘೋರಿ ಕೊಲ್ಲಿಸಿದನು. ದಿಲ್ಲಿ ಮಹಮದನ ವಶವಾಯಿತು. ಮಹಮದ್ ಗೆದ್ದುಕೊಂಡ ಪ್ರದೇಶಗಳನ್ನು ತನ್ನ ಸೇನಾನಿ ಕುತ್ಬುದ್ದೀನ್ ಐಬಕ್ ಎಂಬವನಿಗೆ ಹಸ್ತಾಂತರಿಸಿದನು. ಇಲ್ಲಿಂದ ಕುತ್ಬುದ್ದೀನ್ ದಿಲ್ಲಿಯ ಸುಲ್ತಾನನಾಗಿ ಆಳ್ವಿಕೆ ಪ್ರಾರಂಭಿಸಿದ.

ಗುಲಾಮಿ ಸಂತತಿ

ಕುತ್ಬುದ್ದೀನ್ ಐಬಕ್: ಕುತ್ಬುದ್ದೀನ್ ಪ್ರಾರಂಭದಲ್ಲಿ ಗುಲಾಮನಾಗಿದ್ದ. ಈ ಕಾರಣದಿಂದಾಗಿ ಇವನದು 'ಗುಲಾಮಿ' ಸಂತತಿ ಎಂದಾಯಿತು. ಇವನು ಶತ್ರುಗಳನ್ನು ಗೆದ್ದು, ಟರ್ಕರ ಆಳ್ವಿಕೆಯನ್ನು ಭದ್ರಗೊಳಿಸಿದನು. ತನ್ನ ವಿಜಯದ ದ್ಯೋತಕವಾಗಿ ದಿಲ್ಲಿಯ ಸಮೀಪದ ಮೆಹರೌಲಿ ಎಂಬಲ್ಲಿ ಕುತುಬ್ ಮಿನಾರಿನ ನಿರ್ಮಾಣಕಾರ್ಯ ಆರಂಭಿಸಿದನು. ಇಲ್ತುತ್‌ಮಿಶ್‌ನ ಕಾಲದಲ್ಲಿ ಇದು ಪೂರ್ಣಗೊಂಡಿತು.



ಚಿತ್ರ 6.4 – ಕುತ್ಬುದ್ದೀನ್ ಐಬಕ್



ಚಿತ್ರ 6.5 – ಕುತುಬ್ ಮಿನಾರ್, ದಿಲ್ಲಿ

ದಿಲ್ಲಿಯ ಸುಲ್ತಾನರ ಕಾಲದಲ್ಲಿ ಅಧಿಕಾರ ಸೂತ್ರವನ್ನು ಹಿಡಿದ ಏಕೈಕ ಮಹಿಳೆಯೆಂದರೆ ಸುಲ್ತಾನಾ ರಜಿಯಾ. ಈ ಧೀರೆಯು ಆಸ್ಥಾನದಲ್ಲಿ ನ್ಯಾಯ ನೀಡುತ್ತಿದ್ದಳು. ಗಂಡುಡುಗೆ ತೊಟ್ಟು ರಣರಂಗಕ್ಕೆ ಧುಮುಕುತ್ತಿದ್ದಳು. ಆಸ್ಥಾನದ ಸರದಾರರು ಮಹಿಳೆಯೋರ್ವಳ ಆಳ್ವಿಕೆಯನ್ನು ಸಹಿಸದೆ ಅವಳನ್ನು ವಧೆ ಮಾಡಿದರು.



ಚಿತ್ರ 6.6 – ಸುಲ್ತಾನಾ ರಜಿಯಾ

ಖಲ್ಜಿ ವಂಶ

ಗುಲಾಮಿ ಸಂತತಿಯ ಅನಂತರ ಖಲ್ಜಿ ವಂಶ ಅಧಿಕಾರಕ್ಕೇರಿತು. ಖಲ್ಜಿಗಳಲ್ಲಿ ಅಲ್ಲಾವುದ್ದೀನ್ ದಿಲ್ಲಿಯ ಸುಲ್ತಾನರಲ್ಲೇ ಬಲಶಾಲಿಯಾಗಿದ್ದನು. ಈತನದು ಸೈನಿಕ ಆಡಳಿತವಾಗಿತ್ತು.



ಚಿತ್ರ 6.7 – ಅಲ್ಲಾವುದ್ದೀನ್ ಖಲ್ಜಿ

ಧೋರಣೆಗಳು: ಅಲ್ಲಾವುದ್ದೀನನು ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು. ಅಗತ್ಯವಸ್ತುಗಳ ಮಾರಾಟದ ಮೇಲೆ ಹತೋಟಿಯನ್ನಿಟ್ಟುಕೊಂಡನು. ಮಾದಕ ಪದಾರ್ಥ ಸೇವನೆ, ಜೂಜಾಟ ನಿಷೇಧ ಮಾಡಿದ. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ.

ದಂಡ ಯಾತ್ರೆಗಳು: ಭಾರತ ದೇಶವನ್ನು ಪೂರ್ಣವಾಗಿ ಗೆದ್ದುಕೊಳ್ಳಬೇಕೆಂಬುದು ಅಲ್ಲಾವುದ್ದೀನನ ಆಕಾಂಕ್ಷೆಯಾಗಿತ್ತು. ಪ್ರಾರಂಭದಲ್ಲಿ ತನ್ನ ಸೈನಿಕ ಶಕ್ತಿಯಿಂದ ಉತ್ತರ ಭಾರತವನ್ನು ಗೆದ್ದುಕೊಂಡನು. ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳಲು ತನ್ನ ಆಪ್ತ ಗುಲಾಮನಾದ ಮಲ್ಲಿಕ್ ಕಾಫರ್ ಎಂಬ ಸೇನಾನಿಯನ್ನು ಭಾರಿ ಸೇನಾಪಡೆಯೊಂದಿಗೆ ಕಳುಹಿಸಿದನು. ಕಾಫರ್ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ರಾಜಧಾನಿಗಳನ್ನು ಕೊಳ್ಳೆಹೊಡೆದನು.

ಕಾಫರ್ ಆಕ್ರಮಣ ಮಾಡಿದ ರಾಜ್ಯಗಳೆಂದರೆ: ಮಹಾರಾಷ್ಟ್ರದ ಯಾದವ (ರಾಜಧಾನಿ ದೇವಗಿರಿ), ಆಂಧ್ರದ ಕಾಕತೀಯ (ವಾರಂಗಲ್ಲು), ಹೊಯ್ಸಳ (ದೋರಸಮುದ್ರ) ಮತ್ತು ತಮಿಳುನಾಡಿನ ಪಾಂಡ್ಯ (ಮಧುರೆ).

ತದನಂತರ ಕಾಫರನು ದಂಡಯಾತ್ರೆಯನ್ನು ರಾಮೇಶ್ವರದವರೆಗೆ ಮುಂದುವರಿಸಿದನು. ಅಲ್ಲಿ ಅನೇಕ ದೇವಾಲಯಗಳನ್ನು ಲೂಟಿಮಾಡಿದನು, ಧನಕನಕಾದಿಗಳು ಭಾರಿ ಪ್ರಮಾಣದಲ್ಲಿ ಸೂರೆಗೊಂಡವು. ದಕ್ಷಿಣ ಭಾರತದಿಂದ ದಿಲ್ಲಿಗೆ ಇಷ್ಟೊಂದು ಪ್ರಮಾಣದಲ್ಲಿ ಸಂಪತ್ತಿನ ಹೊಳೆ ಹಿಂದೆಂದೂ ಹರಿದುಹೋಗಿರಲಿಲ್ಲ.

ಅಲ್ಲಾವುದ್ದೀನನು ಅಮೀರ್ ಖುಸ್ರು, ಅಮೀರ್ ಹಸನ್ ಮುಂತಾದ ಪರ್ಷಿಯನ್ ಕವಿಗಳನ್ನು ಪ್ರೋತ್ಸಾಹಿಸಿದ. ದಿಲ್ಲಿಯಲ್ಲಿ ಸಿರಿ ಎಂಬ ಕೋಟೆಯನ್ನು ಕಟ್ಟಿಸಿದನು. ಅಲೈ ದರ್ವಾಜಾ ಇವನ ಭವ್ಯ ರಚನೆ.



ಚಿತ್ರ 6.8 – ಅಲೈ ದರ್ವಾಜಾ, ದಿಲ್ಲಿ

ಅಲ್ಲಾವುದ್ದೀನನ ಅಂತ್ಯಕಾಲ ದುಃಖಮಯವಾಗಿತ್ತು. ಅರಮನೆಯಲ್ಲಿ ದಂಗೆಗಳಾದವು. ಕೊನೆಗೆ ಮಲ್ಲಿಕ್ ಕಾಫರ್ ಅಧಿಕಾರದಾಹದಿಂದ ಅಲ್ಲಾವುದ್ದೀನನನ್ನು ಕೊಲೆಮಾಡಿ ಪಟ್ಟವೇರಿದ. ಆದರೆ ಆತನನ್ನೂ ಕೊಲ್ಲಲಾಯಿತು. ಅಲ್ಪಕಾಲದಲ್ಲೇ ಖಲ್ಜಿ ಸುಲ್ತಾನರ ಆಳ್ವಿಕೆ ಕೊನೆಗೊಂಡು ತುಘಲಕರು ಅಧಿಕಾರಕ್ಕೆ ಬಂದರು.

ತುಘಲಕರು

ತುಘಲಕ್ ಸುಲ್ತಾನರಲ್ಲಿ ಮಹಮದ್ ಬಿನ್ ತುಘಲಕ್ ಪ್ರಮುಖನು. ಇವನು ವಿದ್ವಾಂಸನಾಗಿದ್ದನು. ಆದರೆ ಆತುರ, ಸಿಟ್ಟು ಜಾಸ್ತಿ; ವ್ಯವಹಾರ ಕೌಶಲ ಕಡಿಮೆ. ವಿಚಿತ್ರ ಗುಣಸ್ವಭಾವದವನು.

ಆಡಳಿತ ಪ್ರಯೋಗಗಳು: ಆಡಳಿತ ಸುಧಾರಣೆಗಾಗಿ ಮಹಮದನು ಹಲವು ಪ್ರಯೋಗಗಳನ್ನು ನಡೆಸಿದನು. ಅವುಗಳಲ್ಲಿ ಮುಖ್ಯವಾದುದು ರಾಜಧಾನಿಯ ವರ್ಗಾವಣೆ. ದಿಲ್ಲಿಯ ಬದಲು ಭಾರತದ ಮಧ್ಯಭಾಗದಲ್ಲಿರುವ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿದರೆ ಅದು ಸಾಮ್ರಾಜ್ಯದ ಕೇಂದ್ರದಲ್ಲಿ ಇದ್ದಂತಾಗುತ್ತದೆ ಎಂಬುದು ಮಹಮದನ ನಂಬಿಕೆಯಾಗಿತ್ತು. ದಿಲ್ಲಿಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟು, ದಿಲ್ಲಿಯ ಜನ ಅಲ್ಲಿಗೆ ಹೋಗಬೇಕೆಂದು ಕಟ್ಟಾಜ್ಞೆ ಹೊರಡಿಸಿದನು. ಆದರೆ ವಲಸೆ ಹೊರಟ ಜನ ಅನುಭವಿಸಿದ ಕಷ್ಟ ಹೇಳತೀರದು. ಎಷ್ಟೋ ಜನ ದಾರಿಯಲ್ಲೇ ಮಡಿದರು. ತಾನು ಮಾಡಿದ್ದು ಪ್ರಮಾದವಾಯಿತೆಂದು ಮನಗಂಡ ಅವನು ಜನರು ಮತ್ತೆ ದಿಲ್ಲಿಗೆ ಹಿಂದಿರುಗುವಂತೆ ಅಪ್ಪಣೆ ಮಾಡಿದ. ಬದುಕಿ ಉಳಿದು ದಿಲ್ಲಿಗೆ ಮರಳಿದವರು ಕೆಲವೇ ಜನ.



ಚಿತ್ರ 6.9 – ಮಹಮದ್ ಬಿನ್ ತುಘಲಖ್

ಮಹಮದನ ಇನ್ನೊಂದು ಸುಧಾರಣೆಯೆಂದರೆ ಬೆಳ್ಳಿಯ ನಾಣ್ಯಗಳ ಬದಲು ಅಷ್ಟೇ ಮುಖಮೌಲ್ಯವುಳ್ಳ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದುದು. ಆದರೆ ತಾಮ್ರದ ನಾಣ್ಯಗಳನ್ನು ಟಂಕಿಸುವ ಅಧಿಕಾರ ಸರ್ಕಾರಕ್ಕೆ ಮಾತ್ರವೇ ಸೇರಿದ್ದು ಎಂಬ ರಾಜಾಜ್ಞೆಯನ್ನು ಅವನು ಹೊರಡಿಸಲಿಲ್ಲ. ಪರಿಣಾಮವಾಗಿ ಸಿಕ್ಕಸಿಕ್ಕವರೆಲ್ಲ ತಾಮ್ರದ ನಾಣ್ಯಗಳನ್ನು ತಯಾರಿಸಿದರು. ಅವಕ್ಕೆ ವಿನಿಮಯ ರೂಪದಲ್ಲಿ ಬೆಳ್ಳಿ ಲೋಹಗಳನ್ನು ಕೊಡುವುದು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಮಹಮದನು ತಪ್ಪನ್ನರಿತು ಮತ್ತೆ ಹಿಂದಿನ ನಾಣ್ಯಗಳನ್ನೇ ಚಲಾಯಿಸಬೇಕೆಂದು ಆಜ್ಞಾಪಿಸಿದ. ಒಟ್ಟಿನಲ್ಲಿ ಈ ಪ್ರಯೋಗದಿಂದ ರಾಜ್ಯದ ಆರ್ಥಿಕ ಸ್ಥಿತಿ ಕೆಟ್ಟುಹೋಯಿತು.

ಮಹಮದನ ಆಡಳಿತದಿಂದ ಅತೃಪ್ತರಾದ ಪ್ರಜೆಗಳು ದಂಗೆ ಎದ್ದರು. ಸಿಂಧ್ ಪ್ರದೇಶದಲ್ಲಿ ದಂಗೆಕೋರರನ್ನು ದಮನ ಮಾಡುತ್ತಿದ್ದಾಗ, ಜ್ವರ ಬಂದು, ಮಹಮದ್ ತೀರಿಕೊಂಡ.

ಗುಲಾಮಿ ಸಂತತಿ, ಖಿಲ್ಜಿ ಮತ್ತು ತುಘಲಕರ ಅನಂತರ ಸಯ್ಯದ್ ಮತ್ತು ಲೋದಿಗಳು ಅಲ್ಪಕಾಲ ದಿಲ್ಲಿಯಿಂದ ಆಳ್ವಿಕೆ ನಡೆಸಿದರು. ಲೋದಿ ಸುಲ್ತಾನ್ ಇಬ್ರಾಹಿಮನನ್ನು ಮೊಗಲ ದೊರೆ ಬಾಬರ್ ಪಾಣಿಪತ್ ಕದನದಲ್ಲಿ ಸೋಲಿಸಿ, ಮೊಗಲ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದನು.

ದಿಲ್ಲಿ ಸುಲ್ತಾನರ ಕಾಲದ ಸ್ಥಿತಿಗತಿ

ಆಡಳಿತ: ದಿಲ್ಲಿ ಸುಲ್ತಾನರ ರಾಜ್ಯದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ಆಡಳಿತವು ಟರ್ಕ್ ನೆಲೆಯಲ್ಲಿ ನಡೆಯುತ್ತಿತ್ತು. ಮಿಲಿಟರಿ ಶಕ್ತಿಯು ರಾಜ್ಯದ ಬೆನ್ನೆಲುಬಾಗಿತ್ತು. ಸುಲ್ತಾನರು ನಿರಂಕುಶ ಪ್ರಭುಗಳಾಗಿದ್ದರು. ಬಲ್ಬನ್ ಎಂಬ ಸುಲ್ತಾನನು ತಾನು ದೇವರ ಪ್ರತಿನಿಧಿ, ದೇವರಿಗಲ್ಲದೆ ಇನ್ನಾರಿಗೂ ಹೊಣೆಗಾರನಲ್ಲ ಎಂಬುದಾಗಿ ಸಾರಿದ್ದನು. ದಿಲ್ಲಿಯ ಸುಲ್ತಾನರು ಸ್ಥಳಿಯ ರಾಜರ ಪ್ರಬಲ ಪ್ರತಿರೋಧವನ್ನು ಸತತ ಎದುರಿಸಬೇಕಾಗಿತ್ತು. ಅಧಿಕಾರವನ್ನು ಕಳೆದುಕೊಳ್ಳುವ ಭೀತಿ ಸುಲ್ತಾನರನ್ನು ಕಾಡುತ್ತಿತ್ತು.


ಆರ್ಥಿಕತೆ: ರೈತರ ಮೇಲಿನ ಭೂಕಂದಾಯದ ಹೊರೆ ವಿಪರೀತವಾಗಿತ್ತು. ಮಹಮದ್ ಬಿನ್ ತುಘಲಖನು ಕಂದಾಯವನ್ನು ಇನ್ನಷ್ಟು ಹೆಚ್ಚಿಸಿದನಲ್ಲದೆ, ಅದನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಿದನು. ಪರಿಣಾಮವಾಗಿ ರೈತರು ಎಲ್ಲೆಡೆ ದಂಗೆಯೆದ್ದರು.

ನೇಯ್ಗೆಯು ಆ ಕಾಲದ ಬೃಹತ್ ಉದ್ಯಮ. ನಗರ ಪ್ರದೇಶಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಬಿರುಸಾಗಿ ನಡೆಯುತ್ತಿತ್ತು. ಇದು ಭಾರಿ ಪ್ರಮಾಣದಲ್ಲಿ ಉದ್ಯೋಗ ಒದಗಿಸಿತು.

ಸುಲ್ತಾನರು ಪ್ರಮುಖವಾಗಿ ಯುದ್ಧಾಶ್ವಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಇದೇ ವೇಳೆ ಗುಲಾಮರನ್ನು ಭಾರಿ ಸಂಖ್ಯೆಯಲ್ಲಿ ರಫ್ತು ಮಾಡಲಾಗುತ್ತಿತ್ತು.


ಅಲ್ಲಾವುದ್ದೀನ್ ಖಿಲ್ಜಿಯು ಗುಲಾಮರ ಬೆಲೆಯನ್ನು ಕೂಡ ನಿಗದಿ ಮಾಡಿದ್ದನು. ಗುಲಾಮರನ್ನು ಮಾರುಕಟ್ಟೆಯಲ್ಲಿ ಬಹಿರಂಗವಾಗಿ ಮಾರಾಟ ಮಾಡಲಾಗುತ್ತಿತ್ತು. ಸುಲ್ತಾನರ ಕೈಕೆಳಗಿದ್ದ ಗುಲಾಮರ ಸಂಖ್ಯೆಯಾದರೋ ದಂಗುಬಡಿಸುವಂತಿತ್ತು. ಅಲ್ಲಾವುದ್ದೀನನ ಕೆಳಗೆ 50,000 ಗುಲಾಮರಿದ್ದರೆ ಫಿರೂಜ್‌ಷಾ ತುಘಲಖನ ಅಧೀನದಲ್ಲಿ 1,80,000 ಗುಲಾಮರಿದ್ದರು.

ವಾಸ್ತು ರಚನೆ ಮತ್ತು ಸಾಹಿತ್ಯ: ದಿಲ್ಲಿ ಸುಲ್ತಾನರ ಕಾಲದ ಪ್ರಮುಖ ವಾಸ್ತುಶಿಲ್ಪಗಳೆಂದರೆ – ಪ್ರಸಿದ್ಧವಾದ ಕುತುಬ್ ಮಿನಾರ್ (71 ಮಿ. ಎತ್ತರ), ಅಲೈ ದರ್ವಾಜಾ ಎಂಬ ಸುಂದರ ದ್ವಾರ, ಕವ್ವತ್‌ವುಲ್ ಇಸ್ಲಾಮ್ ಮಸೀದಿ ಮತ್ತು ಸಿರಿ ಕೋಟೆ.



ಚಿತ್ರ 6.10 – ಅಮೀರ್ ಖುಸ್ರು

ಇದೇ ಕಾಲದಲ್ಲಿ ಉರ್ದು ಭಾಷೆ ರೂಪುಗೊಂಡಿತು. ಅಮೀರ್ ಖುಸ್ರು ಮತ್ತು ಅಮೀರ್ ಹಸನ್ ಪರ್ಷಿಯನ್ ಭಾಷೆಯ ಹೆಸರಾಂತ ಕವಿಗಳು. ಖುಸ್ರು ಸಂಗೀತಗಾರನಾಗಿದ್ದು ತಬಲಾ, ಸಿತಾರ್ ಮುಂತಾದ ವಾದ್ಯಗಳನ್ನು ರೂಪಿಸಿದನು. ಜಯಸಿ ಎಂಬ ಕವಿ ಉರ್ದುವಿನಲ್ಲಿ 'ಪದ್ಮಾವತ್' ಎಂಬ ಸೂಫಿ ಕಾವ್ಯ ಬರೆದನು. ರಾಮಾನಂದ, ಕಬೀರ, ರಾಯಿದಾಸ, ಮೀರಾ ಈ ಕಾಲದವರು. ✤



ಚಿತ್ರ 6.11 – ಕಬೀರದಾಸ್



ಚಿತ್ರ 6.12 – ಮೀರಾಬಾಯಿ

ಕಾಲಗಣನೆ (ಕ್ರಿ.ಶ.)

ಸಿಂಧ್ ಪ್ರಾಂತದ ಮೇಲೆ ಅರಬ್ಬರ ದಾಳಿ	–	712
ಮಹಮದ್ ಘಜನಿಯ ಆಕ್ರಮಣಗಳು	–	1000–1026
ತರೈನ್ ಕದನಗಳು (ಮಹಮದ್ ಘೋರಿ ಮತ್ತು ಪೃಥ್ವೀರಾಜ್ ಚೌಹಾಣರ ನಡುವೆ)	–	1191–1192
ದಿಲ್ಲಿಯ ಸುಲ್ತಾನರ ಆಳ್ವಿಕೆ	–	1206–1526
ಕುತ್ಬುದ್ದೀನ್ ಐಬಕ್	–	1206–1210
ರಜಿಯಾ	–	1236–1240
ಅಲ್ಲಾವುದ್ದೀನ್ ಖಿಲ್ಜಿ	–	1296–1316
ಮಹಮದ್ ತುಘಲಖ್	–	1325–1351
ಪಾಣಿಪತ್ ಕದನ ಹಾಗೂ ಮೊಗಲ್ ಆಳ್ವಿಕೆಯ ಆರಂಭ	–	1526

ಹೊಸ ಪದ

ಮಿನಾರು – ಎತ್ತರವಾದ ಸ್ತಂಭಗೋಪುರ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಮಹಮದ್ ಘಜನಿಯ ದಾಳಿಗಳ ಪರಿಣಾಮಗಳೇನು?

2 ಮಹಮದ್ ಘೋರಿಯ ಸಾಧನೆಗಳು ಯಾವುವು?

3 ಕುತ್ಬುದ್ದೀನ್ ಐಬಕ್‌ನ ಸಾಧನೆಗಳನ್ನು ತಿಳಿಸಿ.

4 ಅಲ್ಲಾವುದ್ದೀನ್ ಖಲ್ಜಿಯ ಧೋರಣೆಗಳು ಹಾಗೂ ಅವುಗಳ ಪರಿಣಾಮಗಳನ್ನು ಹೇಳಿ.

5 ಮಹಮದ್ ತುಘಲಖನ ಧೋರಣೆಗಳು ಏಕೆ ವಿಫಲಗೊಂಡವು?

6 ದಿಲ್ಲಿಯ ಸುಲ್ತಾನರ ಕಾಲದಲ್ಲಿ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಹೇಗಿತ್ತು?

7 ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ದಿಲ್ಲಿಯ ಸುಲ್ತಾನರು ನೀಡಿದ ಕೊಡುಗೆಗಳು ಯಾವುವು?

ಚಟುವಟಿಕೆಗಳು

1 ದಿಲ್ಲಯ ಸುಲ್ತಾನರ ಕಾಲದ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಭೂಪಟದಲ್ಲಿ ದಿಲ್ಲಿ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

☆ ☆ ☆

ಪಾಠ 7	ನಮ್ಮ ಸಂವಿಧಾನ

ಪಾಠದ ಪರಿಚಯ

ಈ ಪಾಠದಲ್ಲಿ ಸಂವಿಧಾನದ ಅರ್ಥ, ಮಹತ್ವ, ರಚನೆ ಹಾಗೂ ಅದರ ಮುಖ್ಯ ಲಕ್ಷಣಗಳನ್ನು ನಿರೂಪಿಸಲಾಗಿದೆ.

ಸಾಮರ್ಥ್ಯಗಳು

1 ಸಂವಿಧಾನದ ಅರ್ಥ ಮತ್ತು ಮಹತ್ವವನ್ನು ತಿಳಿಯುವುದು.
2 ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಅರ್ಥೈಸಿಕೊಳ್ಳುವುದು.
3 ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಅರಿಯುವುದು ಮತ್ತು ಮೆಚ್ಚುವುದು.
4 ಸಂವಿಧಾನದ ರಚನಾ ಕಾರ್ಯದಲ್ಲಿ ಪಾಲ್ಗೊಂಡ ಗಣ್ಯ ವ್ಯಕ್ತಿಗಳ ವಿವರ ತಿಳಿಯುವುದು.
5 'ಗಣರಾಜ್ಯ'ದ ಕಲ್ಪನೆಯನ್ನು ತಿಳಿಯುವುದು.
6 'ಸರ್ವಧರ್ಮಸಮಭಾವ' ಎಂಬ ತತ್ವದ ಆಶಯವನ್ನು ಅರಿತು ನಿತ್ಯಜೀವನದಲ್ಲಿ ಈ ಮೌಲ್ಯವನ್ನು ರೂಢಿಸಿಕೊಳ್ಳಲು ಶಕ್ತರಾಗುವುದು.
7 ಸಂವಿಧಾನವನ್ನು ಗೌರವಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು.

ಸರ್ಕಾರ ಎಂದರೇನು? ಪ್ರಜೆಗಳ ಬದುಕು ಚೆನ್ನಾಗಿರಬೇಕಾದರೆ ದೇಶದಲ್ಲಿ ಶಿಸ್ತುಪಾಲನೆ, ಶಾಂತಿ, ವ್ಯವಸ್ಥಿತ ಆಡಳಿತ, ಭದ್ರತೆ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮುಂತಾದವುಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಸಂಘಟನೆಯೊಂದು ಬೇಕಾಗುತ್ತದೆ. ಇಂಥ ಸಂಘಟನೆಯನ್ನು ಸರ್ಕಾರ ಎನ್ನುತ್ತಾರೆ.

ಸಂವಿಧಾನದ ಅರ್ಥ ಮತ್ತು ಮಹತ್ವ

ಸಂವಿಧಾನವೆಂದರೆ ಒಂದು ದೇಶವು ಅನುಸರಿಸುವ **ಮೂಲಭೂತ ಕಾನೂನು**. ಅದು ಸರ್ಕಾರದ ಅಂಗಗಳು, ಅವುಗಳ ಅಧಿಕಾರ ಹಾಗೂ ಕಾರ್ಯಗಳನ್ನು ನಿರೂಪಿಸುತ್ತದೆ. ಸಂವಿಧಾನದಲ್ಲಿ ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳ ಉಲ್ಲೇಖವೂ ಇರುತ್ತದೆ. ಸಂವಿಧಾನವು ಸರಕಾರಕ್ಕೆ ಮಾರ್ಗಸೂಚಿಯಂತಿದೆ.

ಸಂವಿಧಾನದ ಮಹತ್ವ: ಸಂವಿಧಾನವು ದೇಶದ ಮೂಲಭೂತ ಕಾನೂನು ಆಗಿರುವುದರಿಂದ ಅದು ಮಹತ್ವದ್ದಾಗಿದೆ. ಅದಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ರಾಷ್ಟ್ರಪತಿ, ಪ್ರಧಾನಮಂತ್ರಿ, ಸಂಸತ್ ಸದಸ್ಯರು, ನ್ಯಾಯಾಧೀಶರು, ಅಧಿಕಾರಿ ವರ್ಗ ಎಲ್ಲರೂ ಸಂವಿಧಾನದ ಪಾಲನೆ ಮಾಡಲು ಕಟಿಬದ್ಧರು.

- ಸಂವಿಧಾನವು ಜನತೆಯ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ.
- ಅದು ಸರ್ಕಾರದ ನೀತಿ ಮತ್ತು ಕಾರ್ಯವಿಧಾನಗಳನ್ನು ನಿಯಂತ್ರಿಸುತ್ತದೆ.
- ಕಾನೂನಿನ ಎದುರು ಎಲ್ಲರು ಸಮಾನರು ಎಂಬ ಸೂತ್ರವನ್ನು ಎತ್ತಿಹಿಡಿದು ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ.

ಚಟುವಟಿಕೆ: ಡಾ. ಅಂಬೇಡ್ಕರ್‌ರವರು ಯಾರು? ಅವರನ್ನು ನಾವಿಂದು ಕೃತಜ್ಞತೆಯಿಂದ ಏಕೆ ನೆನೆಯುತ್ತೇವೆ? ಗುಂಪಿನಲ್ಲಿ ಚರ್ಚಿಸಿ.

ಭಾರತ ಸಂವಿಧಾನದ ರಚನೆ

ಭಾರತದ ಸಂವಿಧಾನವನ್ನು **'ಸಂವಿಧಾನ ಸಭೆ'** ಎಂಬ ವಿಶೇಷ ಸಭೆಯು ಸಿದ್ಧಪಡಿಸಿತು. ಸಭೆಯ ಸದಸ್ಯರು ಪ್ರಥಮ ಅಧಿವೇಶನದಲ್ಲಿ ಡಾ. ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

ಸಂವಿಧಾನ ಸಭೆಯಲ್ಲಿ 299 ಮಂದಿ ಸದಸ್ಯರಿದ್ದರು. 1946ರಲ್ಲಿ ಅದರ ಪ್ರಥಮ ಅಧಿವೇಶನ ನಡೆಯಿತು.

ಸಂವಿಧಾನ ಸಭೆಯು ತನ್ನ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಕೆಲವು ಸಮಿತಿಗಳನ್ನು ರಚಿಸಿತು. ಅಲ್ಲದೆ ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸಲು **'ಸಂವಿಧಾನ ಕರಡು ಸಮಿತಿ'**ಯನ್ನು ನೇಮಿಸಿತು. ಈ ಸಮಿತಿಯ ಅಧ್ಯಕ್ಷರು ಡಾ. ಬಿ.ಆರ್. ಅಂಬೇಡ್ಕರ್.

- ಸದಸ್ಯರು ಸಂವಿಧಾನದ ಕರಡು ಪ್ರತಿಯನ್ನು ಪರಿಶೀಲಿಸಿ 2473 ತಿದ್ದುಪಡಿಗಳನ್ನು ಸೂಚಿಸಿದ್ದರು. ಕರಡು ಸಂವಿಧಾನ ಮತ್ತು ತಿದ್ದುಪಡಿಗಳನ್ನು ಸಂವಿಧಾನ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಹೀಗೆ ಸಂವಿಧಾನಕ್ಕೆ ಅಂತಿಮ ರೂಪ ನೀಡಲು ಸುಮಾರು ಮೂರು ವರ್ಷಗಳು ಬೇಕಾದವು.
- ಡಾ. ಅಂಬೇಡ್ಕರ್ 15-8-1947ರಿಂದ 26-1-1950ರವರೆಗಿನ ಅವಧಿಯಲ್ಲಿ ಕಾನೂನು ಮಂತ್ರಿಗಳಾಗಿದ್ದರು.

26 ಜನವರಿ 1950ರಂದು ಸಂವಿಧಾನವನ್ನು ಜಾರಿಗೊಳಿಸಲಾಯಿತು. ಸಂವಿಧಾನವು ಭಾರತವನ್ನು **ಗಣರಾಜ್ಯ**ವೆಂದು ಘೋಷಣೆ ಮಾಡಿತು. ನಾವು ಪ್ರತಿ ವರ್ಷವೂ ಈ ದಿನದಂದು ಗಣರಾಜ್ಯೋತ್ಸವವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸುತ್ತೇವೆ.



ಚಿತ್ರ 7.1 – ಗಣರಾಜ್ಯೋತ್ಸವದ ಪರೇಡ್, ಹೊಸದಿಲ್ಲಿ

ಸಂವಿಧಾನದಲ್ಲಿ ಉಲ್ಲೇಖಿಸಿದಂತೆ 1951–52ರಲ್ಲಿ ಪ್ರಥಮ ಮಹಾಚುನಾವಣೆಗಳು ನಡೆದವು. 'ರಾಜ್ಯಸಭೆ' ಮತ್ತು 'ಲೋಕಸಭೆ' ಎಂಬ ಎರಡು ಸದನಗಳನ್ನೊಳಗೊಂಡ ಮೊದಲ ಚುನಾಯಿತ ಸಂಸತ್ತು (ಪಾರ್ಲಿಮೆಂಟ್) 1952ರಲ್ಲಿ ಅಸ್ತಿತ್ವಕ್ಕೆ ಬಂದಿತು.

ನಮ್ಮ ಸಂವಿಧಾನದ ಗಾತ್ರ: ಭಾರತ ಸಂವಿಧಾನವು 444 ವಿಧಿಗಳನ್ನು ಒಳಗೊಂಡಿದೆ. ಸಂವಿಧಾನದಲ್ಲಿ 12 ಪರಿಚ್ಛೇದಗಳಿವೆ. ಜನವರಿ 12, 2006ರವರೆಗೆ ಸಂವಿಧಾನವನ್ನು 97 ಬಾರಿ ತಿದ್ದುಪಡಿಮಾಡಲಾಗಿದೆ.

ಪ್ರಸ್ತಾವನೆ

ಸಂವಿಧಾನದ ಆರಂಭದಲ್ಲಿ ಪೀಠಿಕೆಯ ರೂಪದಲ್ಲಿ 'ಪ್ರಸ್ತಾವನೆ' ಎಂಬುದಿದೆ. ಸಂವಿಧಾನದ ಹೃದಯದಂತಿರುವ ಈ ಪ್ರಸ್ತಾವನೆಯು ಜನತೆಯ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಗೌರವ, ಭ್ರಾತೃತ್ವ ಹಾಗೂ ರಾಷ್ಟ್ರೀಯ ಏಕತೆ ಮುಂತಾದವುಗಳು ಅಂತಹ ತತ್ವಾದರ್ಶಗಳು.

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು **ಸಾರ್ವಭೌಮ ಸಮಾಜವಾದೀ ಸರ್ವಧರ್ಮಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;


ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ಸಂವಿಧಾನದ ಮುಖ್ಯ ಲಕ್ಷಣಗಳು

ನಮ್ಮ ಸಂವಿಧಾನಕ್ಕೆ ತನ್ನದೇ ಆದ ಕೆಲವು ಲಕ್ಷಣಗಳಿವೆ.

• **ಲಿಖಿತ ಸಂವಿಧಾನ:** ಭಾರತ ಸಂವಿಧಾನವು ಲಿಖಿತ ರೂಪದಲ್ಲಿದೆ. ಇದು ಪ್ರಪಂಚದಲ್ಲಿಯೇ ಅತಿ ವಿಸ್ತಾರವಾದ ಸಂವಿಧಾನವಾಗಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಇದರಲ್ಲಿ ಹೇಳಲಾಗಿದೆ. ಸಂವಿಧಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಒಂದೇ ಇದೆ. ಆದ್ದರಿಂದ ಸಂವಿಧಾನದ ಗಾತ್ರ ವಿಶಾಲವಾಗಿದೆ.

ಗಣರಾಜ್ಯ: ಭಾರತವು ಒಂದು ಗಣರಾಜ್ಯವೆಂದು ಸಂವಿಧಾನವು ಸಾರಿದೆ. ಗಣರಾಜ್ಯದಲ್ಲಿ ರಾಜರ ಆಳ್ವಿಕೆಯಿರುವುದಿಲ್ಲ. ಬದಲಾಗಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳ ಆಳ್ವಿಕೆಯಿರುತ್ತದೆ. ಇಂಥ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ಭಾರತವು ಒಂದು 'ಪ್ರಜಾಸತ್ತಾತ್ಮಕ ಗಣರಾಜ್ಯ'ವಾಗಿದೆ.



ಚಿತ್ರ 7.2 – ಡಾ. ರಾಜೇಂದ್ರ ಪ್ರಸಾದ್ 'ಸಂವಿಧಾನ ಸಭೆ'ಯ ಅಧ್ಯಕ್ಷರು, ಭಾರತ ಗಣರಾಜ್ಯದ ಪ್ರಥಮ ಅಧ್ಯಕ್ಷರು



ಚಿತ್ರ 7.3 – ಡಾ.ಬಿ.ಆರ್.ಅಂಬೇಡ್ಕರ್ 'ಸಂವಿಧಾನ ಕರಡು ಸಮಿತಿ'ಯ ಅಧ್ಯಕ್ಷರು



ಚಿತ್ರ 7.4 – ಜವಾಹರಲಾಲ್ ನೆಹರು ಭಾರತದ ಪ್ರಥಮ ಪ್ರಧಾನಿ

• **ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಉಲ್ಲೇಖ:** ಸಂವಿಧಾನವು ಪೌರರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವುಗಳನ್ನು ಮೊಟಕುಗೊಳಿಸುವ ಯಾವುದೇ ಶಾಸನವನ್ನಾಗಲಿ, ನಿಯಮಗಳನ್ನಾಗಲಿ, ಉಪಕ್ರಮ ಕೈಗೊಳ್ಳುವುದನ್ನಾಗಲಿ ಯಾವುದೇ ರಾಜ್ಯವು ಮಾಡುವಂತಿಲ್ಲ. ಹಕ್ಕುಗಳು ಉಲ್ಲಂಘನೆಯಾದಾಗ ಅವುಗಳನ್ನು ರಕ್ಷಿಸುವ ಅಧಿಕಾರ ನ್ಯಾಯಾಂಗಕ್ಕಿದೆ. ನಾಗರಿಕರು ಹಕ್ಕುಗಳನ್ನು ತಮಗಿಷ್ಟ ಬಂದಂತೆ ಚಲಾಯಿಸಿ ಸಾಮಾಜಿಕ ಅಶಾಂತಿಗೆ ಕಾರಣವಾಗಬಾರದು ಅಥವಾ ಕಾನೂನು ವ್ಯವಸ್ಥೆಗೆ ಭಂಗವನ್ನುಂಟು ಮಾಡಬಾರದು. ಸಂವಿಧಾನದಲ್ಲಿ ನಾಗರಿಕರು ಮಾಡಬೇಕಾದ ಹನ್ನೊಂದು ಕರ್ತವ್ಯಗಳನ್ನೂ ಉಲ್ಲೇಖಿಸಲಾಗಿದೆ.

• **ಸರ್ವಧರ್ಮಸಮಭಾವ:** ಸಂವಿಧಾನವು **'ಸರ್ವಧರ್ಮಸಮಭಾವ'** (ಸೆಕ್ಯುಲರಿಸಂ) ತತ್ವವನ್ನು ಎತ್ತಿಹಿಡಿದಿದೆ. ಸರ್ಕಾರವು ಪಕ್ಷಪಾತಮಾಡದೆ ಎಲ್ಲ ಮತಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕೆಂಬುದು ಇದರರ್ಥ. ಸರ್ಕಾರವು ಯಾವುದೇ ಮತಧರ್ಮವನ್ನು ದೇಶದ ಧರ್ಮವೆಂದು ಮಾನ್ಯತೆ ನೀಡುವುದಿಲ್ಲ. ಅದು ಪ್ರತಿಯೊಬ್ಬನಿಗೂ ತನ್ನ ಧರ್ಮಾಚರಣೆ ಹಾಗೂ ನಂಬಿಕೆಯ ಸ್ವಾತಂತ್ರ್ಯ ನೀಡಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಸಾಮಾಜಿಕ ಹಿತದೃಷ್ಟಿಯಿಂದ ನಿಯಂತ್ರಿಸುವ ಅಧಿಕಾರ ಸರ್ಕಾರಕ್ಕೆ ಇದೆ. ಸರ್ವಧರ್ಮಸಮಭಾವವು ನಾಸ್ತಿಕ ಅಥವಾ ದೇವರು ಹಾಗೂ ಮತಧರ್ಮಗಳ ವಿರೋಧಿ ಎಂದಲ್ಲ.

• **ಸ್ವತಂತ್ರ ನ್ಯಾಯಾಂಗ:** ನಮ್ಮ ನ್ಯಾಯಾಂಗವು ಸ್ವತಂತ್ರವಾಗಿದ್ದು ಸಾಕಷ್ಟು ಅಧಿಕಾರವನ್ನು ಹೊಂದಿದೆ. ಸರ್ಕಾರವಾಗಲಿ, ಸಂಸತ್ ಆಗಲಿ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಕಾನೂನಿನ ಎದುರು ಎಲ್ಲರೂ ಸಮಾನರು; ನ್ಯಾಯ ಪಡೆಯುವ ಅವಕಾಶ ಎಲ್ಲರಿಗಿದೆ ಎಂಬ ತತ್ವವನ್ನು ನ್ಯಾಯಾಂಗ ಎತ್ತಿ ಹಿಡಿದಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಎಲ್ಲರೂ ಪಾಲಿಸಲೇ ಬೇಕು ಮತ್ತು ಅದು ಅಂತಿಮ ನಿರ್ಧಾರ.

• **ವಯಸ್ಕ ಮತದಾನ ಪದ್ಧತಿ:** ವಯಸ್ಕ ನಾಗರಿಕರು (18 ವರ್ಷಕ್ಕೆ ಮೇಲ್ಪಟ್ಟವರು) ಮತದಾನ ಮಾಡಿ ಪ್ರತಿನಿಧಿಗಳನ್ನು ಚುನಾಯಿಸುವ ಕ್ರಮವನ್ನು 'ವಯಸ್ಕ ಮತದಾನ ಪದ್ಧತಿ' ಎನ್ನುವರು. ನಾಗರಿಕರೆಲ್ಲರು ಯಾವುದೇ ಭೇದಭಾವವಿಲ್ಲದೆ ಮತ ಚಲಾಯಿಸುತ್ತಾರೆ.

• **ಅಸ್ಪೃಶ್ಯತೆಯ ರದ್ಧತಿ:** ಜನ್ಮಾಧಾರಿತ ಅಸ್ಪೃಶ್ಯತೆಯು ಸಮಾಜದ ಒಂದು ಅನಿಷ್ಟ ಪದ್ಧತಿಯಾಗಿದೆ. ಇದನ್ನು ಅಳಿಸಿಹಾಕಲು ಅನೇಕ ಮಹನೀಯರು ಶತಮಾನಗಳಿಂದ ಪ್ರಯತ್ನ ಮಾಡಿದರು. ಅದು ಇನ್ನೂ ಉಳಿದುಕೊಂಡಿದೆ. ನಮ್ಮ ಸಂವಿಧಾನವು ಈ ಪದ್ಧತಿಯನ್ನು ರದ್ದುಗೊಳಿಸಿದೆ.

ಭಾರತದ ಸಂವಿಧಾನದ ಆದರ್ಶವು **ಸುಖೀರಾಜ್ಯ**ವನ್ನು (ವೆಲ್‌ಫೇರ್ ಸ್ಟೇಟ್) ಸ್ಥಾಪಿಸುವುದಾಗಿದೆ.

> ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಎಲ್ಲರಿಗೂ ನೀಡುವ ಗುರಿಯನ್ನು ಇಟ್ಟುಕೊಂಡಿರುವ ರಾಜ್ಯವನ್ನು ಸಾಮಾನ್ಯವಾಗಿ ಸುಖೀರಾಜ್ಯ ಎನ್ನುವರು.

• **ಚುನಾವಣಾ ಪದ್ಧತಿ:** ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಕಳೆದ ಆರು ದಶಕಗಳಿಂದ ಚುನಾವಣೆಗಳು ಸಾಮಾನ್ಯವಾಗಿ ಕಾಲಕಾಲಕ್ಕೆ ನಡೆದಿವೆ. ಈ ಅವಧಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ದೇಶದಲ್ಲಿ ಸಾಕಷ್ಟು ಆಳವಾಗಿ ಬೇರೂರಿದೆ. ಇದರ ಕಾರ್ಯಾಚರಣೆಯಲ್ಲಿ ಕೆಲವು ನ್ಯೂನ್ಯತೆಗಳು ಕಂಡುಬಂದರೂ ಈ ಪದ್ಧತಿಯು ತೃಪ್ತಿಕರವಾಗಿದೆ. ✤

ಹೊಸ ಪದಗಳು

ಸಂವಿಧಾನ ಕರಡು ಸಮಿತಿ – 'ಸಂವಿಧಾನ ಸಭೆ'ಯಲ್ಲಿ ಮಂಡಿಸಲಾದ ಸಂವಿಧಾನದ ಕಚ್ಚಾ ಪ್ರತಿಯನ್ನು (ತಿದ್ದಬೇಕಾದ ಪ್ರತಿ) ಸಿದ್ಧಪಡಿಸಿದ ಸಮಿತಿ. ಪ್ರಜಾಸತ್ತೆ – ಪ್ರಜೆಗಳ ಆಳ್ವಿಕೆ, ಪ್ರಜಾಪ್ರಭುತ್ವ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಸಂವಿಧಾನ ಎಂದರೇನು?

2 ಸಂವಿಧಾನ ಸಭೆಯ ಅಧ್ಯಕ್ಷರು ಯಾರಾಗಿದ್ದರು?

3 ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚನೆಯಲ್ಲಿ ವಹಿಸಿದ ಪಾತ್ರ ಯಾವುದಾಗಿತ್ತು?

4 ಭಾರತವನ್ನು ಯಾವ ದಿನದಂದು ಗಣರಾಜ್ಯವೆಂದು ಘೋಷಣೆ ಮಾಡಲಾಯಿತು?

5 ವಯಸ್ಕ ಮತದಾನ ಪದ್ಧತಿ ಎಂದರೇನು?

6 ಗಣರಾಜ್ಯವೆಂದರೇನು?

7 ಸರ್ವಧರ್ಮಸಮಭಾವ ಎಂದರೇನು?

ಚರ್ಚಿಸಿ

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ ತತ್ವಗಳು ಮತ್ತು ಆದರ್ಶಗಳ ಬಗ್ಗೆ ಚರ್ಚಿಸಿ.

ಚಟುವಟಿಕೆಗಳು

1. ನಮ್ಮ ಸಂವಿಧಾನವು ನಮಗೆಲ್ಲರಿಗೂ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಕೊಟ್ಟಿದೆ. ಹಕ್ಕುಗಳು ಹಾಗೂ ಕರ್ತವ್ಯಗಳಲ್ಲಿ ನಿಮ್ಮ ದೃಷ್ಟಿಯಲ್ಲಿ ಯಾವುವು ಮುಖ್ಯ? ಗುಂಪುಗಳಲ್ಲಿ ಚರ್ಚಿಸಿ ನಿಮ್ಮ ಅಭಿಪ್ರಾಯಗಳನ್ನು ಬಿಂದುಗಳ ರೂಪದಲ್ಲಿ ಉಲ್ಲೇಖಿಸಿ.
2. ಸಂವಿಧಾನ ಸಭೆಯಲ್ಲಿನ ಸದಸ್ಯರ ಚಿತ್ರಗಳನ್ನು ಸಂಗ್ರಹಿಸಿ.

☆ ☆ ☆

ಪಾಠ 8 ರಾಜ್ಯ ನಿರ್ದೇಶಕ ತತ್ವಗಳು

ಪಾಠದ ಪರಿಚಯ

ನಮ್ಮ ಸಂವಿಧಾನವು ಕೆಲವು ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಧ್ಯೇಯೋದ್ದೇಶಗಳನ್ನು ಸಾಧಿಸಲು ಇವು ಸಹಾಯವಾಗುತ್ತವೆ. ಪಾಠದಲ್ಲಿ ಇವುಗಳ ವಿವರಣೆಯಿದೆ.

ಸಾಮರ್ಥ್ಯಗಳು

1 ರಾಜ್ಯ ನಿರ್ದೇಶಕ ತತ್ವಗಳ ಉದ್ದೇಶಗಳನ್ನು ತಿಳಿಯುವುದು.


2 ರಾಜ್ಯ ನಿರ್ದೇಶಕ ತತ್ವಗಳು ಸುಖೀರಾಜ್ಯ ಸ್ಥಾಪನೆಗೆ ಹೇಗೆ ಪೂರಕವಾಗಿವೆ ಎಂಬುದನ್ನು ಅರ್ಥೈಸಿಕೊಳ್ಳುವುದು.

ಸುಖೀರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸುವುದಕ್ಕಾಗಿ ಸಂವಿಧಾನವು ಕೆಲವು ತತ್ವಗಳನ್ನು ಮುಂದಿಟ್ಟು ರಾಜ್ಯಕ್ಕೆ ಮಾರ್ಗದರ್ಶನ ನೀಡಿದೆ. ಇಂತಹ ಮಾರ್ಗದರ್ಶಿ ಸೂತ್ರಗಳನ್ನು **ರಾಜ್ಯ ನಿರ್ದೇಶಕ ತತ್ವಗಳು** ಎನ್ನುವರು. ಯಾರೇ ಅಧಿಕಾರಕ್ಕೆ ಬಂದರೂ ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯಭಾರ ಮಾಡಬೇಕೆಂಬುದು ಇವುಗಳ ಉದ್ದೇಶವಾಗಿದೆ.

ಭಾರತ ಗಣರಾಜ್ಯವು ಅನುಸರಿಸಬೇಕಾದ ಈ ಕೆಳಗಿನ ಸೂತ್ರಗಳು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಡಗಿವೆ.

1 **ಸಾಮಾಜಿಕ ನ್ಯಾಯ:** ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸಿ ಜನಕಲ್ಯಾಣವನ್ನು ಸಾಧಿಸುವುದು.

2 **ದುರ್ಬಲರಿಗೆ ಸಾಮಾಜಿಕ ನ್ಯಾಯ:** ದುರ್ಬಲರಿಗೆ ಜೀವನಾಧಾರ ನೀಡುವುದು; ಅವರ ಆರ್ಥಿಕ ಶೋಷಣೆಯ ನಿವಾರಣೆ ಮತ್ತು ಶೈಕ್ಷಣಿಕ ಹಾಗೂ ಆರ್ಥಿಕಾಭಿವೃದ್ಧಿ; ಮತ್ತು ಅವರಿಗೆ ಕಾನೂನಿನ ಉಚಿತ ನೆರವು.



ಚಿತ್ರ 8.1 – ದುರ್ಬಲವರಿಗೆ ಸಾಮಾಜಿಕ ನ್ಯಾಯ

3 **ಮಹಿಳೆ ಮತ್ತು ಶಿಶುಕಲ್ಯಾಣ:** ಒಂದೇ ರೀತಿಯ ಕೆಲಸಕ್ಕೆ ಪುರುಷರಷ್ಟೇ ಮಹಿಳೆಯರಿಗೂ ಸಮಾನ ವೇತನ; ಮಹಿಳೆಯರಿಗೆ ಹೆರಿಗೆ ಸೌಲಭ್ಯ; ಮಕ್ಕಳ ಶೋಷಣೆಯ ತಡೆ; ಮಕ್ಕಳು ಆರೋಗ್ಯವಂತರಾಗಿ ಬೆಳೆಯಲು ಅವಕಾಶ ಮತ್ತು ಅವರಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ.



ಚಿತ್ರ 8.2 – ಮಹಿಳೆ ಮತ್ತು ಶಿಶುಕಲ್ಯಾಣ



ಚಿತ್ರ 8.3 – ಉಚಿತ ಮತ್ತು ಕಡ್ಡಾಯ ಶಿಕ್ಷಣ

4 **ಕಾರ್ಮಿಕ ಕಲ್ಯಾಣ:** ಕಾರ್ಮಿಕರ ಯೋಗಕ್ಷೇಮ ನೋಡಿಕೊಳ್ಳುವುದು; ದುಡಿಯುವ ಹಕ್ಕು; ದುಡಿಯಲು ಅನುಕೂಲಕರ ವಾತಾವರಣ; ಕಾರ್ಮಿಕರಿಗೆ ಕನಿಷ್ಠ ವೇತನ; ಮತ್ತು ಅವರಿಗೆ ಆಡಳಿತದಲ್ಲಿ ಭಾಗಿಗಳಾಗಲು ಅವಕಾಶ.



ಚಿತ್ರ 8.4 – ಕಾರ್ಮಿಕ ಕಲ್ಯಾಣ



ಚಿತ್ರ 8.5 – ಅಸಹಾಯಕರಿಗೆ ನೆರವು

5 **ಅಸಹಾಯಕರಿಗೆ ನೆರವು:** ವೃದ್ಧ, ರೋಗಿ ಮತ್ತು ನಿರುದ್ಯೋಗಿಗಳು ಬದುಕಲು ಸರ್ಕಾರದಿಂದ ನೆರವು.

6 **ಸರ್ವರಿಗೂ ಸಮಾನ ಕಾನೂನು:** ಭಾರತದ ಎಲ್ಲ ಪ್ರಜೆಗಳಿಗೂ ಸಮಾನ ನಾಗರಿಕ ಕಾನೂನು ಜಾರಿಮಾಡುವುದು.

7 **ಮದ್ಯಪಾನ ನಿಷೇಧ:** ಮದ್ಯಪಾನದಿಂದ ಆರೋಗ್ಯ ಕೆಡುತ್ತದೆ; ಕುಟುಂಬದ ಆರ್ಥಿಕ ಸ್ಥಿತಿ ಹದಗೆಡುತ್ತದೆ; ಹಾಗೂ ಮಹಿಳೆಯರ ಶೋಷಣೆ ಹೆಚ್ಚುತ್ತದೆ. ಇದಕ್ಕಾಗಿ ನಮ್ಮ ಸಂವಿಧಾನವು ಮದ್ಯಪಾನ ನಿಷೇಧವನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.




ಚಿತ್ರ 8.6 – ಮದ್ಯಪಾನ ನಿಷೇಧ



ಚಿತ್ರ 8.7 – ಜಾನುವಾರು– ನಮ್ಮ ದೇಶದ ಸಂಪತ್ತು

8 **ಕೃಷಿ ಮತ್ತು ಪಶು ಸಂಗೋಪನೆಯ ಸಂಘಟನೆ:** "ರಾಜ್ಯವು ಕೃಷಿಯನ್ನು ಮತ್ತು ಪಶು ಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಘಟನೆಗೊಳಿಸುವುದಕ್ಕೆ ಪ್ರಯತ್ನಿಸತಕ್ಕುದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಉತ್ತಮಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಹಾಗೂ ಇತರ ಹಾಲು ಕೊಡುವ ಮತ್ತು ಭಾರ ಎಳೆಯುವ ದನಕರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕುದು" ಎಂದು ಸಂವಿಧಾನದಲ್ಲಿ ನಿರ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು 1964 ರಲ್ಲಿ ಪಶು ಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದೆ. (ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಪಶು ಹತ್ಯೆ ನಿಷೇಧ ಕಾನೂನು ಜಾರಿಯಲ್ಲಿದೆ).



ಚಿತ್ರ 8.8 – ಕೃಷಿ ಅಭಿವೃದ್ಧಿ



ಚಿತ್ರ 8.9 – ಆಧುನಿಕ ಕೃಷಿ

9 **ಪರಿಸರ:** ಪರಿಸರ ರಕ್ಷಣೆ ಮತ್ತು ಅಭಿವೃದ್ಧಿ. ಉದಾ: ಗಣಿಗಾರಿಕೆ, ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯಗಳಿಂದ ಪರಿಸರವನ್ನು ಸಂರಕ್ಷಿಸುವುದು.


10. **ಐತಿಹಾಸಿಕ ಸ್ಮಾರಕಗಳ ರಕ್ಷಣೆ.** ಉದಾ : ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು ಮುಂತಾದವು.



ಚಿತ್ರ 8.10 – ಪರಿಸರ ಸಂರಕ್ಷಣೆ

11. **ಅಂತಾರಾಷ್ಟ್ರೀಯ ಶಾಂತಿ, ಭದ್ರತೆ**ಗಳನ್ನು ಕಾಪಾಡುವುದರಲ್ಲಿ ದೇಶವು ಸಹ ಭಾಗಿಯಾಗುವುದು.

ಸಾಮಾಜಿಕ ನ್ಯಾಯ ಎಂದರೇನು? ಜಾತಿ, ಧರ್ಮ, ಲಿಂಗ, ಭಾಷೆ, ವರ್ಣ, ಪ್ರದೇಶ ಮತ್ತು ಅಂತಸ್ತುಗಳ ಭೇದಭಾವ ಇಲ್ಲದೆ ಎಲ್ಲಾ ನಾಗರಿಕರಿಗೆ ರಕ್ಷಣೆ ನೀಡುವುದು ಹಾಗೂ ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುವುದೇ ಸಾಮಾಜಿಕ ನ್ಯಾಯ. ಹಿಂದುಳಿದ ವರ್ಗಗಳ ಹಿತಾಸಕ್ತಿ, ಕನಿಷ್ಠ ವೇತನ, ಜೀತಪದ್ಧತಿಯ ನಿರ್ಮೂಲನ, ಮಕ್ಕಳ ಶೋಷಣೆಯ ನಿರ್ಮೂಲನ, ಸ್ತ್ರೀಯರಿಗೆ ಸಮಾನ ಹಕ್ಕು ಹಾಗೂ ಗೌರವ ಮುಂತಾದವುಗಳು ಸಾಮಾಜಿಕ ನ್ಯಾಯಕ್ಕೆ ಒಳಪಟ್ಟಿವೆ.



ಚಿತ್ರ 8.11 – ಶೋಷಣೆ

ಸಂವಿಧಾನವು ಹಲವಾರು ಸಲಹೆ ಮತ್ತು ನಿರ್ದೇಶನಗಳನ್ನು ರಾಜ್ಯಕ್ಕೆ ನೀಡಿದೆ. ಆದರೂ ಅವುಗಳ ಉಲ್ಲಂಘನೆಯಾದರೆ, ನಾಗರಿಕರು ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ. (ಉದಾಹರಣೆ – ಆರು ದಶಕಗಳು ಕಳೆದರೂ ಕೇಂದ್ರ ಸರ್ಕಾರವು ಮದ್ಯಪಾನ ನಿಷೇಧ ಕಾನೂನು ತಂದಿಲ್ಲ. ಈ ನಿಟ್ಟಿನಲ್ಲಿ ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ.) ✤

ಚಟುವಟಿಕೆ : ರಾಜ್ಯ ನಿರ್ದೇಶಕ ತತ್ವಗಳು ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಜಾರಿಗೆ ಬಂದಿವೆ? ಇಂದೂ ಬೇರೆ ಬೇರೆ ರೀತಿಯ ಶೋಷಣೆಗಳು ನಡೆಯುತ್ತಲೇ ಇವೆ. ಈ ವಿಚಾರದಲ್ಲಿ ಒಂದು ಚರ್ಚಾಕೂಟವನ್ನು ಏರ್ಪಡಿಸಿ ಅದರಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ರಾಜ್ಯ ನಿರ್ದೇಶಕ ತತ್ವಗಳು ಎಂದರೇನು?

2 ಮಹಿಳೆ ಮತ್ತು ಶಿಶುಕಲ್ಯಾಣ ಸ್ಥಾಪಿಸುವುದಕ್ಕಾಗಿ ಸಂವಿಧಾನವು ರಾಜ್ಯಕ್ಕೆ ಯಾವ ನಿರ್ದೇಶನಗಳನ್ನು ನೀಡಿದೆ?

3 ರಾಜ್ಯ ನಿರ್ದೇಶಕ ತತ್ವಗಳು ಪಶುಹತ್ಯೆಯ ನಿಷೇಧ ಮಾಡಬೇಕೆಂದು ಏಕೆ ನಿರ್ದೇಶನ ನೀಡಿದೆ?

4 ಸರ್ವರಿಗೂ ಸಮಾನ ಕಾನೂನಿನ ಅವಶ್ಯಕತೆಯೇನು?

5 ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ರಾಜ್ಯಕ್ಕೆ ನಿರ್ದೇಶನವನ್ನು ಏಕೆ ನೀಡಲಾಗಿದೆ?

ಚರ್ಚಿಸಿ

1 ದುರ್ಬಲರಿಗೆ ಸಾಮಾಜಿಕ ನ್ಯಾಯ.

2 ಮದ್ಯಪಾನ ನಿಷೇಧ.

3 ಐತಿಹಾಸಿಕ ಸ್ಮಾರಕಗಳ ರಕ್ಷಣೆ.

4 ಮಕ್ಕಳ ಶಿಕ್ಷಣ ಹಕ್ಕನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಏನು ಮಾಡತಕ್ಕದ್ದು?

ಚಟುವಟಿಕೆಗಳು

1 ನಿಮ್ಮ ಸುತ್ತಮುತ್ತಲಿನ ಸಮುದಾಯದಲ್ಲಿ ಕಂಡು ಬರುವ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗಮನಿಸಿ. ಅವರೇಕೆ ದುರ್ಬಲರಾಗಿದ್ದಾರೆ ಎಂಬದರ ಬಗ್ಗೆ ಸಹಪಾಠಿಗಳೊಡನೆ ಚಿಂತನೆ ನಡೆಸು.

2 ಮದ್ಯಪಾನ ಸೇವನೆ ಹಾಗೂ ಮಾದಕ ಪದಾರ್ಥಗಳ ಬಳಕೆಯು ನಮ್ಮ ಯುವ ಜನಾಂಗದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳೇನು? ಈ ವಿಚಾರವಾಗಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

3 ಮಕ್ಕಳ ಹಕ್ಕು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಾಗಿದೆ. ಅವುಗಳ ಉಲ್ಲಂಘನೆಯಾದಾಗ ಚೈಲ್ಡ್‌ಲೈನ್ 1098 ಎಂಬ ಸಹಾಯವಾಣಿ ಸಂಖ್ಯೆಗೆ ಕರೆಯನ್ನು ಮಾಡಬಹುದೆಂದು ನಿಮಗೆ ತಿಳಿದಿದೆ. ಈ ವಿಚಾರ ಕುರಿತು ಒಂದು ಚರ್ಚಾಗೋಷ್ಠಿ ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

☆ ☆ ☆

ಪಾಠ 9	ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು

ಪಾಠದ ಪರಿಚಯ

ನಮ್ಮ ಸಂವಿಧಾನವು ಭಾರತದ ಪೌರರಿಗೆ ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

ಸಾಮರ್ಥ್ಯಗಳು

1 ಸ್ವಾಭಾವಿಕ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳಿಗಿರುವ ವ್ಯತ್ಯಾಸ ತಿಳಿಯುವುದು.

2 ಭಾರತದ ಪ್ರಜೆಗೆ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಅರ್ಥೈಸಿಕೊಳ್ಳುವುದು.

3 ಸಂವಿಧಾನದಲ್ಲಿ ಹೇಳಿರುವ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಅರಿತು ತಮ್ಮ ಜೀವನದಲ್ಲಿ ಅವುಗಳನ್ನು ಪಾಲಿಸಲು ಸಮರ್ಥರಾಗುವುದು.

4 ತಮಗಿರುವ ಹಕ್ಕುಗಳನ್ನು ಅನುಭವಿಸಲು ಅಡಚಣೆಯಾದಾಗ ಅವುಗಳನ್ನು ಮರಳಿ ಪಡೆಯುವ ವಿಧಾನಗಳನ್ನು ಕಂಡುಕೊಳ್ಳುವುದು.

ಹಕ್ಕುಗಳು ಎಂದರೇನು?

'ಹಕ್ಕು' ಎಂದರೆ ನಾಗರೀಕರಿಗೆ ಸಲ್ಲಬೇಕಾದ ಅಧಿಕಾರ, ಅದು 'ಸ್ವಾಭಾವಿಕ ಹಕ್ಕು' ಆಗಿರಬಹುದು. (ಉದಾಹರಣೆ–ಬದುಕುವ ಹಕ್ಕು, ಜೀವರಕ್ಷಣೆಯ ಹಕ್ಕು). ಇಲ್ಲವೆ 'ನ್ಯಾಯಸಮ್ಮತ ಹಕ್ಕು' ಆಗಿರಬಹುದು. (ಉದಾಹರಣೆ–ಸಮಾನತೆಯ ಹಕ್ಕು, ವಿದ್ಯಾಭ್ಯಾಸದ ಹಕ್ಕು).

ವ್ಯಕ್ತಿಯ ವಿಕಾಸಕ್ಕೆ ಮತ್ತು ರಾಷ್ಟ್ರದ ಅಭ್ಯುದಯಕ್ಕೆ ಕೆಲವು ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳು ಅನಿವಾರ್ಯ. ಆದ್ದರಿಂದಲೇ ಸಂವಿಧಾನವು ಪ್ರಜೆಗಳಿಗೆ ಕೆಲವು ಮೂಲಭೂತ ಹಕ್ಕುಗಳನ್ನು ನೀಡಿದೆ.

ಮೂಲಭೂತ ಹಕ್ಕುಗಳು

ಮೂಲಭೂತ ಹಕ್ಕುಗಳೆಂದರೆ ಸಂವಿಧಾನದಲ್ಲಿ ಹೇಳಲಾದ ಹಾಗೂ ರಕ್ಷಿಸಲಾಗುವ ಹಕ್ಕುಗಳು. ಇವು ನಾಗರಿಕರಿಗೆ ನೀಡಿದ ಸಾಂವಿಧಾನಿಕ ಹಕ್ಕುಗಳಾಗಿವೆ. ಇವುಗಳನ್ನು ಯಾರೂ ಉಲ್ಲಂಘಿಸುವಂತಿಲ್ಲ.

ಸಂವಿಧಾನವು ದೇಶದ ಎಲ್ಲಾ ನಾಗರಿಕರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವು –

1 ಸಮಾನತೆಯ ಹಕ್ಕು

2 ಸ್ವಾತಂತ್ರ್ಯದ ಹಕ್ಕು


3 ಶೋಷಣೆಯ ವಿರುದ್ಧದ ಹಕ್ಕು

4 ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

5 ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು

6 ಸಂವಿಧಾನಬದ್ಧ ಪರಿಹಾರದ ಹಕ್ಕು

1 ಸಮಾನತೆಯ ಹಕ್ಕು: ಕಾನೂನಿನ ಮುಂದೆ ಎಲ್ಲರೂ ಸಮಾನರು; ಯಾರೇ ಆಗಲಿ ಕಾನೂನಿಗಿಂತ ದೊಡ್ಡವರಲ್ಲ; ಮತ್ತು ಎಲ್ಲರಿಗೂ ಸಮಾನ ರಕ್ಷಣೆ ದೊರಕಬೇಕು ಎಂಬ ಅಂಶಗಳು ಸಮಾನತೆಯ ಹಕ್ಕಿನಲ್ಲಿ ಒಳಗೊಂಡಿವೆ.



ಚಿತ್ರ 9.1 – ಕಾನೂನಿನ ಮುಂದೆ ಎಲ್ಲರೂ ಸಮಾನರು

ಧರ್ಮ, ಕುಲ, ಜಾತಿ, ಲಿಂಗ, ಜನ್ಮಸ್ಥಳ ಇವುಗಳ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡುವಂತಿಲ್ಲ. ಅಂಗಡಿ, ಹೋಟೇಲು ಮತ್ತು ಮನೋರಂಜನಾ ಸ್ಥಳಗಳ ಪ್ರವೇಶಕ್ಕೆ ಯಾವುದೇ ಪ್ರಜೆಯ ಮೇಲೆ ನಿರ್ಬಂಧ ಹೇರುವಂತಿಲ್ಲ. ಸಾರ್ವಜನಿಕ ಬಾವಿ, ಕೆರೆ, ರಸ್ತೆ ಮತ್ತು ವಿರಾಮ ಸ್ಥಳಗಳನ್ನು ಉಪಯೋಗಿಸಲು ಕೂಡಾ ನಿರ್ಬಂಧವಿರುವುದಿಲ್ಲ. ಸರ್ಕಾರಿ ಸೇವೆಗೆ ಸೇರಲು ಎಲ್ಲಾ ನಾಗರಿಕರಿಗೂ ಸಮಾನ ಅವಕಾಶವಿದೆ. ಸಾರ್ವಜನಿಕ ಪೂಜಾಸ್ಥಳಗಳಲ್ಲಿ ಆಯಾ ಮತಧರ್ಮದ ವ್ಯಕ್ತಿಯು ಪ್ರವೇಶಿಸಿ ಪ್ರಾರ್ಥನೆ ಮಾಡುವುದನ್ನು ತಡೆಯುವಂತಿಲ್ಲ.

2 ಸ್ವಾತಂತ್ರ್ಯದ ಹಕ್ಕು: ಸಂವಿಧಾನದಲ್ಲಿ ನೀಡಿರುವ ಸ್ವಾತಂತ್ರ್ಯದ ಹಕ್ಕು ಹೀಗಿದೆ –

1 ವಾಕ್‌ಸ್ವಾತಂತ್ರ್ಯ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ.

2 ಶಾಂತವಾಗಿ ಸಭೆ ಸೇರುವ ಸ್ವಾತಂತ್ರ್ಯ.

3 ಸಂಘಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ.

4 ದೇಶದ ಎಲ್ಲೆಡೆ ನಿರ್ಬಂಧವಿಲ್ಲದೆ ಸಂಚರಿಸುವ ಸ್ವಾತಂತ್ರ್ಯ.

5 ಭಾರತದ ಯಾವುದೇ ಭಾಗದಲ್ಲಾದರೂ ವಾಸಿಸುವ ಸ್ವಾತಂತ್ರ್ಯ.

6 ಯಾವುದೇ ಉದ್ಯೋಗ, ವೃತ್ತಿ, ವ್ಯಾಪಾರ, ವ್ಯವಹಾರ ಮಾಡುವ ಸ್ವಾತಂತ್ರ್ಯ.



ಚಿತ್ರ 9.2 – ವಾಕ್ ಸ್ವಾತಂತ್ರ್ಯ

ಚಟುವಟಿಕೆ : ವಾಕ್ ಸ್ವಾತಂತ್ರ್ಯ ಎಷ್ಟರಮಟ್ಟಿಗೆ ಪ್ರಾಮುಖ್ಯವಾಗಿದೆ? ಇಂದು ನಮ್ಮಲ್ಲಿ ಅದರ ದುರುಪಯೋಗವೂ ಆಗುತ್ತಿದೆ. ಈ ವಿಚಾರ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿರಿ.

ಸ್ವಾತಂತ್ರ್ಯವು ಮೂಲಭೂತ ಹಕ್ಕಾಗಿದ್ದರೂ ಅದನ್ನು ಮನಸ್ಸಿಗೆ ಬಂದಂತೆ ಚಲಾಯಿಸಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜ್ಯವು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧಗಳನ್ನು ಹೇರಬಹುದೆಂದು ಸಂವಿಧಾನವೇ ತಿಳಿಸುತ್ತದೆ. ಉದಾ: ವಾಕ್ ಸ್ವಾತಂತ್ರ ಇದೆಯೆಂದು ಬೇರೆಯವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಆಡುವಂತಿಲ್ಲ.

3 ಶೋಷಣೆಯ ವಿರುದ್ಧದ ಹಕ್ಕು: ಬಡವರು, ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಶೋಷಣೆ ಮಾಡಬಾರದು ಎಂಬುದು ಈ ಹಕ್ಕಿನ ಉದ್ದೇಶ. ಶೋಷಣೆಯನ್ನು ನಿಷೇಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ – ವರದಕ್ಷಿಣೆ ಪಡೆಯುವುದು ಶಿಕ್ಷಾರ್ಹವಾಗಿದೆ; ಜೀತಪದ್ಧತಿಯನ್ನು ನಿಷೇಧಿಸಲಾಗಿದೆ; ಗಣಿಗಾರಿಕೆ, ಬೀಡಿ ತಯಾರಿಕೆ, ಪಟಾಕಿ ತಯಾರಿಕೆಗಳಂತಹ ಅಪಾಯಕಾರಿ ಕೆಲಸಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಮಕ್ಕಳ ದುಡಿಮೆಯನ್ನು ಸರ್ಕಾರ ನಿಷೇಧಿಸಿದೆ. ಅವರು ಹದಿನಾಲ್ಕು ವರ್ಷ ಪ್ರಾಯದವರೆಗೆ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು.



ಚಿತ್ರ 9.3 – ಮಕ್ಕಳ ದುಡಿಮೆಯನ್ನು ಸರ್ಕಾರ ನಿಷೇಧಿಸಿದೆ

4 ಧಾರ್ಮಿಕ ಸ್ವಾತಂತ್ರ್ಯದ ಹಕ್ಕು: ಸಾರ್ವಜನಿಕ ಶಿಸ್ತು, ನೀತಿ ಮತ್ತು ನೈರ್ಮಲ್ಯ ಹಾಗೂ ಇತರ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ಮತಧರ್ಮವನ್ನು ಆಚರಿಸುವ ಹಕ್ಕು ಎಲ್ಲರಿಗೂ ಇದೆ. ಬಲಾತ್ಕಾರ, ಮೋಸ ಮತ್ತು ಆಮಿಷಗಳ ಮೂಲಕ ಮತಾಂತರ ಮಾಡಬಾರದು ಎಂದು ಸಂವಿಧಾನದಲ್ಲಿ ಹೇಳಲಾಗಿದೆ.



ಚಿತ್ರ 9.4 – ಧಾರ್ಮಿಕ ಸ್ವಾತಂತ್ರ್ಯ

5 ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು: ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ರಕ್ಷಿಸುವುದು ಈ ಮೂಲಭೂತ ಹಕ್ಕಿನ ಉದ್ದೇಶವಾಗಿದೆ. ಯಾವುದೇ ಜನರು ತಮ್ಮ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ರಕ್ಷಿಸುವ ಹಕ್ಕನ್ನು ಪಡೆದಿದ್ದಾರೆ. ಅಲ್ಪಸಂಖ್ಯಾತರಿಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಆಡಳಿತವನ್ನು ನಡೆಸುವ ಹಕ್ಕು ಇದೆ. ಆದರೆ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಗಳು ರಾಜ್ಯದ ನಿಯಮಗಳಿಗೆ ಬದ್ಧವಾಗಿರಬೇಕು.



ಚಿತ್ರ 9.5 – ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು

6 ಸಂವಿಧಾನಬದ್ಧ ಪರಿಹಾರದ ಹಕ್ಕು: ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ನಾಗರಿಕನು ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು. ಈ ಹಕ್ಕನ್ನು 'ಸಂವಿಧಾನಬದ್ಧ ಪರಿಹಾರದ ಹಕ್ಕು' ಎನ್ನುವರು.

ಮೂಲಭೂತ ಹಕ್ಕುಗಳೆಂದರೆ: ನೇರವಾಗಿ ಸಂವಿಧಾನದಿಂದ ನಾಗರಿಕರಿಗೆ ಕೊಡಲ್ಪಟ್ಟ ಹಕ್ಕುಗಳು. ಇವುಗಳನ್ನು ಸಂಸತ್ತು, ವಿಧಾನ ಸಭೆ, ಕಾನೂನಿನ ಮೂಲಕವಾಗಿ, ಅಧಿಕಾರಿ ವರ್ಗ, ಪೊಲೀಸರು ಸೇರಿದಂತೆ ಯಾವುದೇ ಸಾರ್ವಜನಿಕ (ಸರ್ಕಾರಿ) ಸಂಸ್ಥೆಗಳು ಮೊಟಕುಗೊಳಿಸುವುದು ಅಥವಾ ಉಲ್ಲಂಘಿಸುವುದು ನಿಷಿದ್ಧ. ಉಲ್ಲಂಘನೆಯಾದಾಗ ಅನ್ಯಾಯಕ್ಕೆ ಒಳಪಟ್ಟ ವ್ಯಕ್ತಿ ನೇರವಾಗಿ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಲಯದ ಮೊರೆ ಹೋಗಿ ಪರಿಹಾರ ದೊರಕಿಸಿಕೊಳ್ಳಬಹುದು. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಇಲ್ಲವೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅರ್ಜಿಗಳನ್ನು **'ರಿಟ್ ಅರ್ಜಿ'** ಎನ್ನುವರು.

ಮೂಲಭೂತ ಕರ್ತವ್ಯಗಳು

ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ಕರ್ತವ್ಯ' ಎಂದರೆ ವ್ಯಕ್ತಿಯು ತನ್ನ ದೇಶಕ್ಕಾಗಿ ಮಾಡಬೇಕಾದ ಹೊಣೆ. ಪ್ರಜೆಗಳು ತಮ್ಮ ಮೂಲಭೂತ ಕರ್ತವ್ಯಗಳನ್ನು ಸ್ವಯಂಸ್ಫೂರ್ತಿಯಿಂದ ಮಾಡಿದರೆ ದೇಶವು ಅಭ್ಯುದಯ ಸಾಧಿಸುವುದು ಸುಲಭ.


ಸಂವಿಧಾನದಲ್ಲಿ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಅವುಗಳ ಸಾರಾಂಶ ಹೀಗಿದೆ.

1 ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

2 ಸ್ವಾತಂತ್ರ್ಯ ಚಳವಳಿಯ ಉನ್ನತ ಆದರ್ಶಗಳನ್ನು ಪಾಲಿಸುವುದು.

3 ಭಾರತದ ಏಕತೆಯನ್ನು ರಕ್ಷಿಸುವುದು.

4 ಮಾತೃಭೂಮಿಯನ್ನು ರಕ್ಷಿಸುವುದು.



ಚಿತ್ರ 9.6 – ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು



ಚಿತ್ರ 9.7 – ದೇಶದ ರಕ್ಷಣೆ

5 ಭಾರತೀಯರಾದ ನಾವೆಲ್ಲ ಸಹೋದರರು ಎಂಬ ಭಾವನೆಯನ್ನು ಬೆಳೆಸುವುದು.



ಚಿತ್ರ 9.8 – ನಾವೆಲ್ಲಾ ಭಾರತೀಯರು

6 ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಐತಿಹಾಸಿಕ ಸ್ಮಾರಕಗಳನ್ನು ರಕ್ಷಿಸುವುದು.

7 ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಿ, ಅಭಿವೃದ್ಧಿ ಪಡಿಸುವುದು.



ಚಿತ್ರ 9.9 – ಪರಿಸರ ಸಂರಕ್ಷಣೆ

ಚಟುವಟಿಕೆ: 'ಪರಿಸರ ಸಂರಕ್ಷಣೆಯಲ್ಲಿ ಇಂದು ವಿದ್ಯಾರ್ಥಿಗಳ ಪಾತ್ರ' ಎಂಬ ವಿಚಾರದಲ್ಲಿ ಒಂದು ವಿಚಾರಸಂಕಿರ್ಣವನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

8 ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಬೆಳೆಸುವುದು.

9 ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು.

10 ವ್ಯಕ್ತಿಯು ತನ್ನ ಶ್ರೇಷ್ಠತೆಯನ್ನು ಸಾಧಿಸಲು ಸತತ ಪ್ರಯತ್ನ ನಡೆಸುವುದು.

11 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಹೆತ್ತವರು ಅಥವಾ ಪೋಷಕರು ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡುವುದು.

ಪ್ರಜೆಯು ತನ್ನ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸದಿದ್ದರೆ ಸರ್ಕಾರವು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಆದರೂ ದೇಶದ ಎಲ್ಲ ಪ್ರಜೆಗಳು ಸ್ವಯಂಸ್ಫೂರ್ತಿಯಿಂದ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕು. ✤

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಮೂಲಭೂತ ಹಕ್ಕುಗಳು ಎಂದರೇನು?

2 ಮೂಲಭೂತ ಕರ್ತವ್ಯಗಳನ್ನು ಸ್ವಯಂಸ್ಫೂರ್ತಿಯಿಂದ ನಾವೇಕೆ ಮಾಡಬೇಕು?

3 ಸಮಾನತೆಯ ಹಕ್ಕು ಎಂದರೇನು?

4 ಸಾಮಾಜಿಕ ಮತ್ತು ಆರ್ಥಿಕ ಶೋಷಣೆ ಹೇಗೆ ನಡೆಯುತ್ತದೆ? ಉದಾಹರಣೆಗಳನ್ನು ಕೊಡಿ.

5 ಯಾವುದಾದರೂ ಮೂರು ಮೂಲಭೂತ ಕರ್ತವ್ಯಗಳನ್ನು ತಿಳಿಸಿ.

ಚರ್ಚಿಸಿ

1 ಮೂಲಭೂತ ಹಕ್ಕುಗಳ ಮಹತ್ವ.

2 ಶಾಲಾವಠಾರದಲ್ಲಿ ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳು.

3 ಮಾಹಿತಿ ಹಕ್ಕು.

ಚಟುವಟಿಕೆಗಳು

1 ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತು ವಿದ್ಯಾರ್ಥಿಗಳಿಂದ ಒಂದೆರಡು ನಿಮಿಷ ಭಾಷಣ ಮಾಡಿಸುವುದು.

2 ಪ್ರಜೆಗಳು ಮೂಲಭೂತ ಕರ್ತವ್ಯಗಳ ಪಾಲನೆ ಮಾಡದಿರುವ ಪ್ರಸಂಗಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. (ಉದಾ: ಊರಿನ ಸಾರ್ವಜನಿಕ ಕೆರೆಯಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆಯುವುದು; ಪ್ರಾಚೀನ ಕೋಟೆಯ ಕಲ್ಲುಗಳನ್ನು ಒಂದೊಂದಾಗಿ ಕದ್ದೊಯ್ಯುವುದು, ಮತದಾನ ಮಾಡದಿರುವುದು).

3 ನಮ್ಮ ಸಂಸ್ಕೃತಿಯಲ್ಲಿ ಹಕ್ಕುಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕರ್ತವ್ಯಗಳಿಗೆ ನೀಡಿದ್ದಾರೆ. ಇದನ್ನು ನೀವು ಒಪ್ಪುವಿರಾ? ಚರ್ಚಿಸಿ.

☆ ☆ ☆

ಪಾಠ 10

ನಮ್ಮ ರಕ್ಷಣಾ ಪಡೆಗಳು


ನಿಮಗೆ ತಿಳಿದಂತೆ, ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಮೇಲೆ ಅನೇಕ ದಾಳಿಗಳು ನಡೆದಿವೆ. ಆದರೆ ಸ್ವಾತಂತ್ರ್ಯದ ನಂತರ ಪರಿಸ್ಥಿತಿ ಬದಲಾಗಿದೆ. ಇದಕ್ಕೆ ಕಾರಣಗಳನ್ನು ತಿಳಿದಿದ್ದಿರಾ?

ಪಾಠದ ಪರಿಚಯ

ಈ ಪಾಠದಲ್ಲಿ ನಮ್ಮ ರಕ್ಷಣಾಪಡೆಗಳ ಕಾರ್ಯಗಳು, ವಿಭಾಗಗಳು, ತರಬೇತಿ ಕೇಂದ್ರಗಳು, ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಕೇಂದ್ರ ಕಚೇರಿ ಮುಂತಾದವುಗಳ ಪರಿಚಯವನ್ನು ನೀಡಲಾಗಿದೆ. ಜೊತೆಗೆ ಪೂರಕ ರಕ್ಷಣಾಪಡೆಗಳು, ಸಹಾಯಕ ರಕ್ಷಣಾಪಡೆಗಳು ಮತ್ತು ನಾಗರಿಕ ರಕ್ಷಣಾಪಡೆಗಳ ಬಗೆಗೆ ಈ ಪಾಠದಲ್ಲಿ ನಿರೂಪಣೆಯಿದೆ.

ಸಾಮರ್ಥ್ಯಗಳು

1 ನಮ್ಮ ರಕ್ಷಣಾಪಡೆಗಳ ಬಗೆಗೆ ತಿಳಿದುಕೊಳ್ಳುವುದು.
2 ಭೂಸೇನೆ, ನೌಕಾದಳ ಮತ್ತು ವಾಯುಪಡೆಗಳ ಬಗೆಗೆ ಅರ್ಥೈಸಿಕೊಳ್ಳುವುದು.
3 ರಕ್ಷಣಾಪಡೆಗಳ ಸಾಮರ್ಥ್ಯಗಳನ್ನು ಅರಿತುಕೊಳ್ಳುವುದು.
4 ಪೂರಕ ರಕ್ಷಣಾಪಡೆಗಳ ಸೇವೆಯನ್ನು ಅರಿತು ಹೆಮ್ಮೆಪಡುವುದು.
5 ಸಹಾಯಕ ಸೇನಾಪಡೆಗಳ ಸ್ವಯಂಸೇವೆಯನ್ನು ಕುರಿತಾಗಿ ಅಭಿಮಾನಪಡುವುದು.



ಚಿತ್ರ 10.1 – ಈ ಚಿತ್ರದಲ್ಲಿ ನೀವು ಏನನ್ನು ಕಾಣುವಿರಿ?

❋ ದೇಶವನ್ನು ಪರಕೀಯರ ಆಕ್ರಮಣಗಳಿಂದ ರಕ್ಷಿಸುವುದು ರಾಷ್ಟ್ರದ ಪ್ರಥಮ ಕರ್ತವ್ಯ. ಈ ಕಾರ್ಯವನ್ನು ರಕ್ಷಣಾಪಡೆಗಳಿಗೆ ನೀಡಲಾಗಿದೆ. ಆದುದರಿಂದ ರಕ್ಷಣಾಪಡೆಗಳ ಪಾತ್ರ ಮಹತ್ವದ್ದಾಗಿದೆ.

ಭಾರತವು ಶಿಸ್ತು, ಸಾಮರ್ಥ್ಯ ಹೊಂದಿದ ಹಾಗೂ ಪರಾಕ್ರಮಶಾಲಿಯಾದ ರಕ್ಷಣಾಪಡೆಯನ್ನು ಹೊಂದಿರುವುದು ಹೆಮ್ಮೆಯ ವಿಷಯ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಸಮಗ್ರತೆಗೆ ಸವಾಲುಗಳು ಎದುರಾದಾಗ ನಾವು ಅವನ್ನು ಸಮರ್ಥವಾಗಿ ಎದುರಿಸಿದ್ದೇವೆ. (ಚೀನ ಮತ್ತು ಪಾಕಿಸ್ತಾನದ ದಾಳಿಗಳು). ನಮ್ಮ ಸೇನಾಪಡೆಗಳು ತಾಯಿನಾಡಿಗಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧ ಎಂಬುದನ್ನು ಕಾರ್ಗಿಲ್ ಯುದ್ಧದಲ್ಲಿ ಪ್ರದರ್ಶಿಸಿದ್ದೇವೆ.

- ಭಾರತವು 15,200 ಕಿ.ಮೀ. ಭೂಗಡಿ ಪ್ರದೇಶವನ್ನು ಮತ್ತು 7516.5 ಕಿ.ಮೀ. ಜಲಗಡಿ ಪ್ರದೇಶವನ್ನು ಹೊಂದಿದೆ.
- ದೇಶದ ರಕ್ಷಣಾ ವ್ಯವಸ್ಥೆಗೆ ಆಯವ್ಯಯದ ಶೇ.25–30ರಷ್ಟು ಹಣಕಾಸನ್ನು ಮೀಸಲು ಇಡಲಾಗುತ್ತದೆ.


ರಕ್ಷಣಾಪಡೆಗಳ ಜವಾಬ್ದಾರಿಗಳು

- ದೇಶದ ಗಡಿಪ್ರದೇಶಗಳ ರಕ್ಷಣೆ.
- ದೇಶದ ಸಮಗ್ರತೆಯನ್ನು ಕಾಪಾಡುವುದು.
- ಕಳ್ಳಸಾಗಾಣಿಕೆ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು.

ಭಾರತದ ರಾಷ್ಟ್ರಪತಿಯವರಿಗೆ ನಮ್ಮ ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ನೀಡಲಾಗಿದೆ. ರಕ್ಷಣಾ ವ್ಯವಸ್ಥೆಯು ಮೂರು ವಿಭಾಗಗಳನ್ನು ಹೊಂದಿದೆ: ಭೂಸೇನೆ, ನೌಕಾದಳ ಮತ್ತು ವಾಯುಪಡೆ. ರಕ್ಷಣಾಪಡೆಗಳು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡು ತಮ್ಮ ಸೇನಾಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ.

ರಕ್ಷಣಾಪಡೆಗಳಲ್ಲಿ ತಮ್ಮ ಸಾಮರ್ಥ್ಯಗಳನ್ನು ಮೆರೆಯಲು ತರಬೇತಿ ಕೇಂದ್ರಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು: ರಾಷ್ಟ್ರೀಯ ರಕ್ಷಣಾ ಕಾಲೇಜು, ನವದೆಹಲಿ, ರಕ್ಷಣಾ ಸೇವಾ ಸಿಬ್ಬಂದಿ ತರಬೇತಿ ಕೇಂದ್ರ, ಉದಕಮಂಡಲ, ಭಾರತೀಯ ಮಿಲಿಟರಿ ಅಕಾಡೆಮಿ, ಡೆಹರಾಡೂನ್ ಮತ್ತು ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಖಡಕ್‌ವಾಸ್ಲಾ, ಪುಣೆ.

ಭಾರತೀಯ ಭೂಸೇನೆ


ಚಿತ್ರ 10.2 – ಭೂಸೇನೆಯ ಚಿಹ್ನೆ

ಭಾರತದ ಭೂಸೇನೆಯು ವಿಶ್ವದಲ್ಲಿಯೇ ಎರಡನೆಯ ಅತಿದೊಡ್ಡ ಭೂಸೇನಾಪಡೆಯಾಗಿದೆ. ಭೂಸೇನೆಯು ಪದಾತಿದಳ (ಸೈನಿಕ), ಅಶ್ವದಳ, ಫಿರಂಗಿದಳ, ಒಂಟೆದಳ ಮತ್ತು ಯುದ್ಧ ಟ್ಯಾಂಕರ್‌ಗಳನ್ನು ಹೊಂದಿದೆ.

ಭೂಸೇನೆಯಲ್ಲಿ ಒಟ್ಟು 11,00,000 ಯೋಧರಿದ್ದಾರೆ. 9,60,000ದಷ್ಟು ಕಾಯ್ದಿಟ್ಟ ಯೋಧರಿದ್ದಾರೆ.

ಭೂಸೇನೆಯ ಮುಖ್ಯಸ್ಥರನ್ನು **ದಂಡನಾಯಕ (ಜನರಲ್)** ಎಂದು ಕರೆಯುವರು. ಇವರು ಸೇನೆಯ ನಿಯಂತ್ರಣ, ತರಬೇತಿ, ಕಾರ್ಯಾಚರಣೆ ಮತ್ತು ಆಡಳಿತ ವ್ಯವಸ್ಥೆಯನ್ನು ಹೊಸದಿಲ್ಲಿಯಲ್ಲಿರುವ ಭೂಸೇನೆಯ ಪ್ರಧಾನ ಕಚೇರಿಯಿಂದ ನಿರ್ವಹಿಸುತ್ತಾರೆ.

ದೇಶದ ಗಡಿಗಳ ರಕ್ಷಣೆಯ ಜೊತೆಗೆ ನೈಸರ್ಗಿಕ ವಿಕೋಪಗಳಾದ ಭೂಕಂಪ, ಪ್ರವಾಹ, ಬರಗಾಲ, ಭೂಕುಸಿತ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಮಾನವೀಯ ಕಾರ್ಯಗಳನ್ನು ಭೂಸೇನೆ ನಿರ್ವಹಿಸುತ್ತದೆ. ಭೂಸೇನೆಯು ತಾಂತ್ರಿಕವಾಗಿ ಅತ್ಯಂತ ಮುಂದುವರಿದಿದೆಯಲ್ಲದೆ ಬೇಹುಗಾರಿಕೆ ವ್ಯವಸ್ಥೆಯನ್ನು ಹೊಂದಿದೆ.

ಭಾರತೀಯ ನೌಕಾದಳ



ಚಿತ್ರ 10.3 – ನೌಕಾದಳದ ಚಿಹ್ನೆ

ಕರಾವಳಿ ತೀರವನ್ನು ಹಾಗೂ ದ್ವೀಪಗಳನ್ನು ರಕ್ಷಿಸಲು ನೌಕಾದಳದ ಅಗತ್ಯವಿದೆ. ಭಾರತದ ನೌಕಾದಳವು ಜಗತ್ತಿನಲ್ಲಿ ಆರನೆಯ ಅತಿ ದೊಡ್ಡ ನೌಕಾದಳವಾಗಿದೆ. ಅದರ ಮುಖ್ಯಸ್ಥರನ್ನು **ಆಡ್ಮಿರಲ್** ಎಂದು ಕರೆಯುತ್ತಾರೆ. ನೌಕಾದಳದ ಮುಖ್ಯ ಕಚೇರಿ ಹೊಸದಿಲ್ಲಿಯಲ್ಲಿದೆ.

ನೌಕಾದಳವು ಆಧುನಿಕ ಮಾದರಿಯ ಕ್ಷಿಪಣಿ ಹಡಗುಗಳು ಮತ್ತು ಜಲಾಂತರ್ಗಾಮಿಗಳನ್ನು ಹೊಂದಿದೆ. ಅವುಗಳಲ್ಲಿ **ಐ.ಎನ್.ಎಸ್.ವಿಭೂತಿ** ಮತ್ತು **ಐ.ಎನ್.ಎಸ್.ಗೋದಾವರಿ,** ಪ್ರಮುಖವಾದವುಗಳು. ಅಲ್ಲದೆ **ಐ.ಎನ್.ಎಸ್.ವಿರಾಟ್** ಮತ್ತು **ಐ.ಎನ್.ಎಸ್. ವಿಕ್ರಮಾದಿತ್ಯ**ದಂತಹ ವಿಮಾನವಾಹಕಗಳನ್ನು ಹೊಂದಿರುವ ನೌಕಾದಳವು ಸುಸಜ್ಜಿತವಾಗಿದೆ. ಕರ್ನಾಟಕದ ಕಾರವಾರದಲ್ಲಿ 'ಸೀಬರ್ಡ್' ನೌಕಾನೆಲೆಯನ್ನು ಸ್ಥಾಪಿಸಲಾಗಿದೆ.



ಚಿತ್ರ 10.4 – ಐ.ಎನ್.ಎಸ್. ವಿಕ್ರಮಾದಿತ್ಯ

ಭಾರತೀಯ ವಾಯುಪಡೆ



ಚಿತ್ರ 10.5 – ವಾಯುಪಡೆಯ ಚಿಹ್ನೆ



ಚಿತ್ರ 10.6 – ಯುದ್ಧ ವಿಮಾನ

ಭಾರತವು ಪ್ರಪಂಚದಲ್ಲಿಯೇ ಐದನೆಯ ಅತಿ ದೊಡ್ಡ ವಾಯುಪಡೆಯನ್ನು ಹೊಂದಿದೆ. ಇದರ ಮುಖ್ಯಸ್ಥರನ್ನು **ಏರ್‌ಚೀಫ್ ಮಾರ್ಷಲ್** ಎನ್ನುವರು. ಇದರ ಕೇಂದ್ರ ಕಚೇರಿ ಹೊಸದಿಲ್ಲಿಯಲ್ಲಿದೆ. ಆಡಳಿತದ ಅನುಕೂಲಕ್ಕಾಗಿ ವಾಯುಪಡೆಯನ್ನು ಐದು ಕಮಾಂಡಗಳಾಗಿ ವಿಂಗಡಿಸಲಾಗಿದೆ.

ಬೆಂಗಳೂರು, ಹೈದರಾಬಾದ್ ಮತ್ತು ಡಿಂಡಿಗಲ್‌ನಲ್ಲಿ (ತಮಿಳುನಾಡು) ವಾಯುಪಡೆಗೆ ತರಬೇತಿ ನೀಡುವ ಪ್ರಮುಖ ಕೇಂದ್ರಗಳಿವೆ. ವಾಯುಪಡೆಯು ತಂತ್ರಜ್ಞಾನದ ಅಳವಡಿಕೆಯಿಂದ ಅನೇಕ ಹೊಸ ಯುದ್ಧ ವಿಮಾನಗಳನ್ನು ಹೊಂದಿ ಶಸ್ತ್ರಸನ್ನದ್ಧವಾಗಿದೆ.



ಚಿತ್ರ 10.7 – ಮಿಗ್ ಯುದ್ಧ ವಿಮಾನ

ನಮ್ಮ ವಾಯುಪಡೆಯು ಜಾಗ್ವಾರನಂತಹ ಆಧುನಿಕ ಯುದ್ಧ ವಿಮಾನಗಳನ್ನು ಹೊಂದಿದೆ. ಅದು ಒಟ್ಟು 1,00,000ರಷ್ಟು ಯೋಧರು ಮತ್ತು 1330ರಷ್ಟು ಯುದ್ಧ ವಿಮಾನಗಳನ್ನು ಹೊಂದಿದೆ. ವಾಯುಪಡೆಯು ಬಲಾಢ್ಯವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ.

ಪೂರಕ ರಕ್ಷಣಾಪಡೆಗಳು

ರಕ್ಷಣಾಪಡೆಗಳಲ್ಲದೆ ಅವುಗಳಿಗೆ ವಿಷಮ ಸಂದರ್ಭಗಳಲ್ಲಿ ನೆರವಾಗಲು ಪೂರಕ ರಕ್ಷಣಾ ಪಡೆಗಳು ಕಾರ್ಯನಿರ್ವಹಿಸುತ್ತಿವೆ.



ಚಿತ್ರ 10.8 – ಗಡಿಭದ್ರತಾ ದಳ

- **ಗಡಿಭದ್ರತಾ ದಳ** (Border Security Force): ಭಾರತದ ಗಡಿಪ್ರದೇಶಗಳನ್ನು ರಕ್ಷಿಸುವುದು ಗಡಿಭದ್ರತಾ ದಳದ ಪ್ರಮುಖ ಕಾರ್ಯವಾಗಿದೆ. ಕಾರ್ಗಿಲ್ ಯುದ್ಧದಲ್ಲಿ ಗಡಿಭದ್ರತಾ ದಳವು ಪರ್ವತದ ಎತ್ತರದವರೆಗೆ ಸೇನೆಯ ಜೊತೆಗೂಡಿ ಹೋರಾಟ ಮಾಡಿತು. ಸಾಯುವವರೆಗೆ ಕರ್ತವ್ಯ (Duty Until Death) ಎಂಬುದು ಇದರ ಧ್ಯೇಯ ವಾಕ್ಯವಾಗಿದೆ.

• **ಗಡಿರಸ್ತೆಗಳ ಸಂಘಟನೆ** (Border Roads Organisation): ಗಡಿರಸ್ತೆಗಳ ಸಂಘಟನೆಯು ಮುಚ್ಚಿರುವ ರಸ್ತೆಗಳನ್ನು ತೆರವು ಮಾಡಿ ಸೈನಿಕ ಕಾರ್ಯಾಚರಣೆಗಳಿಗೆ ತಕ್ಷಣದ ಸಹಾಯವನ್ನು ಮಾಡುತ್ತದೆ. ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ ಮತ್ತು ಒಳಚರಂಡಿ ನಿರ್ಮಾಣದಂತಹ ಕಾರ್ಯಗಳನ್ನು ಈ ಸಂಘಟನೆ ಮಾಡುತ್ತದೆ.

• **ಕರಾವಳಿ ಪಹರೆಯವರು** (Coast Guards): ಇದೊಂದು ಅರೆಮಿಲಿಟರಿ ಪಡೆಯಾಗಿದೆ. ಇದರ ಪ್ರಧಾನ ಕಚೇರಿ ಹೊಸದಿಲ್ಲಿಯಲ್ಲಿದೆ. ಕರಾವಳಿ ತೀರವನ್ನು ರಕ್ಷಿಸುವುದು ಇದರ ಜವಾಬ್ದಾರಿಯಾಗಿದೆ. ಬಿರುಗಾಳಿ, ಚಂಡಮಾರುತ, ಸುನಾಮಿಯಂತಹ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತದೆ. ಅಕ್ರಮ ಒಳನುಸುಳುವಿಕೆ, ಕಳ್ಳಸಾಗಣೆ ಮುಂತಾದವುಗಳನ್ನು ತಡೆಗಟ್ಟುವುದು ಇದರ ಪ್ರಮುಖ ಕಾರ್ಯವಾಗಿದೆ.



ಚಿತ್ರ 10.9 – ಕರಾವಳಿ ಪಹರೆಯವರು

ಕರಾವಳ ಪಹರೆಯು 84 ಅತ್ಯಾಧುನಿಕ ಹಡಗುಗಳು ಮತ್ತು 45 ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಹೊಂದಿದೆ. 5440 ಯೋಧರು ಕರಾವಳ ಪಹರೆಯಲ್ಲಿದ್ದಾರೆ.

• **ಕೇಂದ್ರ ಕೈಗಾರಿಕಾ ಭದ್ರತಾಪಡೆ:** ಇದು ವಿಶ್ವದ ಅತಿದೊಡ್ಡ ಕೈಗಾರಿಕಾ ಭದ್ರತಾಪಡೆ. 1,28,000 ಯೋಧರು ಇದರಲ್ಲಿದ್ದಾರೆ. ಇದು ದೇಶದಲ್ಲಿರುವ ಸುಮಾರು 300ಕ್ಕೂ ಹೆಚ್ಚು ಸರಕಾರಿ, ಖಾಸಗಿ ಕೈಗಾರಿಕಾ ಘಟಕಗಳು ಮತ್ತು ಪ್ರಯೋಗಾಲಯಗಳಿಗೆ ಭದ್ರತೆಯನ್ನು ಒದಗಿಸುತ್ತದೆ. ಇದಲ್ಲದೆ ವಿಮಾನ ನಿಲ್ದಾಣ, ಬಂದರುಗಳು, ರೈಲ್ವೆ ನಿಲ್ದಾಣಗಳು, ಐತಿಹಾಸಿಕ ಸಂರಕ್ಷಿತ ಸ್ಮಾರಕಗಳಿಗೂ ಮತ್ತು ಅಣುಶಕ್ತಿ ಕೇಂದ್ರಗಳಿಗೂ ಭದ್ರತೆಯನ್ನು ಒದಗಿಸುತ್ತದೆ.

ಸಹಾಯಕ ರಕ್ಷಣಾಪಡೆಗಳು

ದೇಶದಾದ್ಯಂತ ಯುವಕರಲ್ಲಿ ಸೇವೆ ಮತ್ತು ದೇಶಪ್ರೇಮವನ್ನು ಬೆಳೆಸಲು ಶಾಲಾ ಮತ್ತು ಕಾಲೇಜುಗಳಲ್ಲಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇವುಗಳಲ್ಲಿ ಎನ್.ಸಿ.ಸಿ. ಒಂದು ಪ್ರಮುಖ ಚಟುವಟಿಕೆ.

• **ಎನ್‌ಸಿಸಿ ನ್ಯಾಷನಲ್ ಕ್ಯಾಡೆಟ್ ಕೋರ್** (National Cadet Corps): ಸಾಮೂಹಿಕ ಜೀವನದ ಪ್ರಾಧಾನ್ಯತೆ, ನಾಯಕತ್ವ ಮುಂತಾದ ಗುಣಗಳನ್ನು ಎನ್‌ಸಿಸಿ ಕಲಿಸುತ್ತದೆ. ಈ ತರಬೇತಿ ಪಡೆದವರಿಗೆ ಸೇನೆಯನ್ನು ಸೇರಲು ವಿಶೇಷ ಆದ್ಯತೆಯನ್ನು ನೀಡಲಾಗುತ್ತದೆ. ಉನ್ನತ ವ್ಯಾಸಂಗಕ್ಕೂ ವಿದ್ಯಾರ್ಥಿಗಳಿಗೆ ಇದರಿಂದ ಮೀಸಲಾತಿ ದೊರೆಯುತ್ತದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಯುವಕರು ಮತ್ತು ಯುವತಿಯರು ಎನ್‌ಸಿಸಿಯನ್ನು ಸೇರಬಹುದು. ಒಟ್ಟಿನಲ್ಲಿ ರಾಷ್ಟ್ರ ರಕ್ಷಣೆಯ ಹೊಣೆಗಾರಿಕೆಯನ್ನು ಮೂಡಿಸುವುದು ಇದರ ಪ್ರಮುಖ ಗುರಿಯಾಗಿದೆ. 'ಶಿಸ್ತು ಮತ್ತು ಒಗ್ಗಟ್ಟು' ಇದರ ಧ್ಯೇಯ ವಾಕ್ಯವಾಗಿದೆ.



ಚಿತ್ರ 10.10 – ಎನ್‌ಸಿಸಿ ಕ್ಯಾಡೆಟ್‌ಗಳು

2012ರಲ್ಲಿ ಭಾರತದ 610 ಜಿಲ್ಲೆಗಳಲ್ಲಿರುವ 8770 ಶಾಲೆಗಳು ಮತ್ತು 5521 ಕಾಲೇಜುಗಳಲ್ಲಿ ಎನ್‌ಸಿಸಿ ಘಟಕಗಳಿವೆ. ಒಟ್ಟು 13,00,000 ಎನ್‌ಸಿಸಿ ಕ್ಯಾಡೆಟ್‌ಗಳಿದ್ದಾರೆ.

• **ಭಾರತೀಯ ರೆಡ್‌ಕ್ರಾಸ್ ಸಂಸ್ಥೆ** (Indian Red Cross Society): ರೆಡ್‌ಕ್ರಾಸ್ ಸಂಸ್ಥೆಯು ಭಾರತದಾದ್ಯಂತ 700 ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದಾರೆ. ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಧ್ಯೇಯವೆಂದರೆ 'ಮಾನವೀಯತೆ ಮತ್ತು ಸ್ವಯಂಸೇವೆ'.



ಚಿತ್ರ 10.11 – ರೆಡ್‌ಕ್ರಾಸ್ ಚಿಹ್ನೆ

• **ನಾಗರಿಕ ಪೊಲೀಸ್ ಪಡೆಗಳು:** ಪೊಲೀಸ್ ಪಡೆಗಳು ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿವೆ. ರಾಜ್ಯ ಪೊಲೀಸ್ ಪಡೆಯ ವ್ಯಾಪ್ತಿ ರಾಜ್ಯಕ್ಕೆ ಸೀಮಿತವಾಗಿದೆ. ಕೇಂದ್ರ ಸರಕಾರವು ತನ್ನದೇ ಪೊಲೀಸ್ ಪಡೆಗಳನ್ನು ಸ್ಥಾಪಿಸಿದೆ.

ರಾಷ್ಟ್ರೀಯ ರಕ್ಷಣಾ ದಳ: ರಾಷ್ಟ್ರೀಯ ರಕ್ಷಣಾ ದಳವು ಗಣ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಇದು ದೇಶದಲ್ಲಿಯ ಆಂತರಿಕ ಭದ್ರತೆಗೆ ಮತ್ತು ಭಯೋತ್ಪಾದನೆ ನಿಗ್ರಹಕ್ಕೆ ಹೆಚ್ಚು ಒತ್ತು ನೀಡುತ್ತದೆ. ಬಾಂಬ್ ನಿಷ್ಕ್ರೀಯ ದಳ ಇದಕ್ಕೆ ಪೂರಕವಾಗಿದೆ.

• **ಗೃಹರಕ್ಷಕ ದಳ** (Home Guards): ಇದು ಪೊಲೀಸ್ ಪಡೆಗೆ ಪೂರಕವಾಗಿ ಕೆಲಸ ಮಾಡುತ್ತದೆ. ಇದರ ಕಾರ್ಯಗಳು: ಆಂತರಿಕ ಭದ್ರತೆ ಒದಗಿಸುವಲ್ಲಿ ನೆರವಾಗುವುದು; ಮತ್ತು ತುರ್ತುಪರಿಸ್ಥಿತಿ, ಪ್ರಕೃತಿ ವಿಕೋಪ ಮುಂತಾದ ಸಮಯದಲ್ಲಿ ಸಹಾಯ ಮಾಡುವುದು.✤

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ಯಾರಿಗೆ ನೀಡಲಾಗಿದೆ?
2 ರಕ್ಷಣಾಪಡೆಯ ವಿಭಾಗಗಳಾವುವು?
3 ಭೂಸೇನೆಯ ಮುಖ್ಯಸ್ಥರನ್ನು ಏನೆಂದು ಕರೆಯುವರು?
4 ಭೂಸೇನೆಯ ಆಡಳಿತ ಕಚೇರಿ ಎಲ್ಲಿದೆ?
5 ನೌಕಾದಳದ ಮುಖ್ಯಸ್ಥರನ್ನು ಏನೆಂದು ಕರೆಯುತ್ತಾರೆ?
6 ಎನ್‌ಸಿಸಿಯ ಧ್ಯೇಯ ವಾಕ್ಯ ಯಾವುದು?
7 ಭೂಸೇನೆಯ ಪ್ರಮುಖ ಕಾರ್ಯಗಳಾವುವು?
8 ಗಡಿರಸ್ತೆಗಳ ಸಂಘಟನೆಯ ಕಾರ್ಯಗಳಾವುವು?
9 ರೆಡ್‌ಕ್ರಾಸ್ ಸಂಸ್ಥೆಯ ಧ್ಯೇಯ ಯಾವುದು?
10 ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಲು ನಿನಗೆ ಇಚ್ಛೆಯಿದೆಯೇ? ಕಾರಣ ಕೊಡು.

ಚರ್ಚಿಸಿ

ನಾವೇಕೆ ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಬೇಕು?

ಚಟುವಟಿಕೆಗಳು

1 ನಿಮ್ಮ ಗ್ರಾಮದ ಸೈನಿಕರನ್ನು ಭೇಟಿ ಮಾಡಿ ಶಾಲೆಗೆ ಆಹ್ವಾನಿಸಿ.
2 ರಕ್ಷಣಾಪಡೆಗಳ ವಿವಿಧ ಘಟಕಗಳ ಚಿಹ್ನೆಗಳನ್ನು ಸಂಗ್ರಹಿಸಿ.
3 ಸಮೀಪದ ಶಾಲೆ ಕಾಲೇಜುಗಳಲ್ಲಿರುವ ಎನ್‌ಸಿಸಿ ಘಟಕಕ್ಕೆ ಭೇಟಿ ನೀಡಿ.

ನಿಮಗೆ ತಿಳಿದಿರಲಿ:

ಭೂಸೇನೆಯ ಉನ್ನತ ಅಧಿಕಾರಿಗಳು: ಜನರಲ್, ಲೆಫ್ಟಿನೆಂಟ್ ಜನರಲ್, ಮೇಜರ್ ಜನರಲ್, ಬ್ರಿಗೇಡಿಯರ್, ಕರ್ನಲ್, ಲೆಫ್ಟಿನೆಂಟ್ ಕರ್ನಲ್, ಮೇಜರ್, ಕ್ಯಾಪ್ಟನ್ ಮತ್ತು ಲೆಫ್ಟಿನೆಂಟ್. ನೌಕಾದಳ ಮತ್ತು ವಾಯುಪಡೆಯಲ್ಲಿ ಕೂಡ ಅದರದೇ ಆದ ಉನ್ನತ ಅಧಿಕಾರಿಗಳ ರ್‍ಯಾಂಕ್‌ಗಳಿವೆ.

ಪಾಠ 11	ಏಷ್ಯ – ವೈಪರೀತ್ಯಗಳ ಖಂಡ

ಪಾಠದ ಪರಿಚಯ

ಏಷ್ಯ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ಪ್ರಾದೇಶಿಕ ವಿಭಾಗಗಳು, ಪ್ರಾಕೃತಿಕ ಲಕ್ಷಣಗಳು, ಪ್ರಮುಖ ನದಿಗಳು ಮತ್ತು ವ್ಯವಸಾಯ, ವಾಯುಗುಣ ಮತ್ತು ಸಸ್ಯವರ್ಗ, ಪ್ರಮುಖ ಖನಿಜಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಕುರಿತ ಪರಿಚಯ ಈ ಪಾಠದಲ್ಲಿದೆ.

ಸಾಮರ್ಥ್ಯಗಳು

1 ಏಷ್ಯಾ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ ಹಾಗೂ ವೈಪರೀತ್ಯಗಳ ಲಕ್ಷಣಗಳನ್ನು ತಿಳಿಯುವುದು.

2 ಪ್ರಾದೇಶಿಕ ವಿಭಾಗಗಳ ವಿಂಗಡಣೆ ಮತ್ತು ಅವುಗಳ ನಡುವಣ ಹೋಲಿಕೆ ಬಗ್ಗೆ ಅರಿಯುವುದು.

3 ಏಷ್ಯದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ಕುರಿತ ವಿವರಣೆ ಪಡೆಯುವುದು.

4 ನದಿಗಳ ವ್ಯವಸ್ಥೆ ಮತ್ತು ವ್ಯವಸಾಯಗಳ ನಡುವಣ ಸಂಬಂಧ ತಿಳಿದುಕೊಳ್ಳುವುದು.

5 ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳ ನಡುವಣ ಸಂಬಂಧ ಕುರಿತು ತಿಳಿಯುವುದು.

6 ಪ್ರಮುಖ ಖನಿಜಗಳು, ಅವುಗಳ ಹಂಚಿಕೆ. ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಜನಸಾಂದ್ರತೆ ಕುರಿತು ತಿಳಿದುಕೊಳ್ಳುವುದು.


1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

ಪರಿಚಯ : ಪ್ರಪಂಚದ ಭೂಖಂಡಗಳಲ್ಲಿ ಏಷ್ಯ ದೊಡ್ಡದು. ಹೀಗಾಗಿ ಅದು ಪ್ರಾಕೃತಿಕ ಲಕ್ಷಣ, ವಾಯುಗುಣ, ಸಸ್ಯವರ್ಗ, ವನ್ಯಜೀವಿ, ಮಣ್ಣಿನ ಪ್ರಕಾರ ಮೊದಲಾದವುಗಳಲ್ಲಿ ವೈವಿಧ್ಯ ಹೊಂದಿದೆ. ಈ ಖಂಡದಲ್ಲಿ ಅತ್ಯಂತ ಎತ್ತರವುಳ್ಳ ಪರ್ವತ, ಪ್ರಸ್ಥಭೂಮಿಗಳು, ಫಲವತ್ತಾದ ವಿಶಾಲ ಮೈದಾನ, ಮರುಭೂಮಿ, ನದಿ ವ್ಯವಸ್ಥೆ ಮತ್ತು ಸರೋವರಗಳು ಕಂಡುಬರುತ್ತವೆ. ಜೊತೆಗೆ ಭಾಷೆ, ಧರ್ಮ, ಜನಸಂಖ್ಯೆಯ ಹಂಚಿಕೆ ಮತ್ತು ಜನಸಾಂದ್ರತೆಗಳಲ್ಲಿಯೂ ನಾವು ವೈವಿಧ್ಯತೆಯನ್ನು ಕಾಣಬಹುದು. ಆದ್ದರಿಂದ ಏಷ್ಯವನ್ನು "ವೈಪರೀತ್ಯಗಳ ಖಂಡ" ಎಂದು ಕರೆಯುತ್ತಾರೆ.

ಚಟುವಟಿಕೆ: ಏಷ್ಯ ಖಂಡವನ್ನು ವೈಪರೀತ್ಯಗಳ ಖಂಡ ಎಂದು ಕರೆಯುವ ಕಾರಣಗಳೇನೆಂಬುದನ್ನು ಚರ್ಚಿಸಿ. ಏಷ್ಯದ ಭೂಪಟವನ್ನು ಮುಂದಿಟ್ಟುಕೊಂಡು ಚರ್ಚಿಸಿ.

ಸ್ಥಾನ: ಏಷ್ಯ ಖಂಡವು $1^{0}-16'$ ಉತ್ತರದಿಂದ $77^{0}-41'$ ಉತ್ತರ ಅಕ್ಷಾಂಶ ಹಾಗೂ $26^{0}-04'$ ಪೂರ್ವದಿಂದ $169^{0}-40'$ ಪಶ್ಚಿಮ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಲೇಷ್ಯದ ಸ್ವಲ್ಪ ದಕ್ಷಿಣದಲ್ಲಿ ಭೂಮಧ್ಯರೇಖೆ ಹಾಗೂ ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತ ಮತ್ತು ಅರೇಬಿಯಗಳ ಮೂಲಕ ಹಾಯ್ದು ಹೋಗಿವೆ.

ವಿಸ್ತೀರ್ಣ: ಏಷ್ಯಖಂಡದ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು 44 ಮಿಲಿಯನ್ ಚ.ಕಿ.ಮೀ.ಗಳು. ಇದು ಪ್ರಪಂಚದ ಮೇಲ್ಮೈ ವಿಸ್ತೀರ್ಣದಲ್ಲಿ ಶೇ.33 ಭಾಗದಷ್ಟಾಗಿದೆ. ಈ ಖಂಡವು ಪೂರ್ಣವಾಗಿ ಉತ್ತರಗೋಳಾರ್ಧದಲ್ಲಿದೆ.




ಭೂಪಟ 11.1 – ಪ್ರಪಂಚದಲ್ಲಿ ಏಷ್ಯದ ಸ್ಥಾನ

ಭೌಗೋಳಿಕ ಸನ್ನಿವೇಶ: ಏಷ್ಯಾ ಖಂಡವು ಮೂರು ಕಡೆ ಸಾಗರಗಳು ಮತ್ತು ಒಂದು ಕಡೆ ಭೂಭಾಗದಿಂದಾವರಿಸಿದೆ. ಸುತ್ತುವರಿದಿರುವ ಸಾಗರಗಳೆಂದರೆ: ಉತ್ತರದಲ್ಲಿ ಆರ್ಕ್ಟಿಕ್, ಪೂರ್ವಭಾಗದಲ್ಲಿ ಪೆಸಿಫಿಕ್ ಮತ್ತು ದಕ್ಷಿಣದಲ್ಲಿ ಹಿಂದೂಸಾಗರಗಳು. ಪಶ್ಚಿಮಕ್ಕೆ ಯೂರೋಪ್ ಖಂಡವಿದೆ.

ಏಷ್ಯ ಮತ್ತು ಯೂರೋಪ್ ಖಂಡಗಳ ಗಡಿಯು ಸಾಂಪ್ರದಾಯಕವಾದ ಕಾಲ್ಪನಿಕ ರೇಖೆಯಾಗಿದ್ದು, ಅದು ಅಂಕುಡೊಂಕಾಗಿದೆ ಮತ್ತು ಯೂರಲ್ ಪರ್ವತ, ಕ್ಯಾಸ್ಪಿಯನ್ ಸಮುದ್ರ, ಕಕಾಸಸ್ ಪರ್ವತ ಮತ್ತು ಕಪ್ಪು ಸಮುದ್ರಗಳ ಮುಖಾಂತರ ಹಾಯ್ದು ಹೋಗುತ್ತದೆ.

ಯೂರೋಪ್ ಮತ್ತು ಏಷ್ಯಗಳನ್ನು ಒಟ್ಟುಗೂಡಿಸಿ 'ಯೂರೇಷ್ಯ' ಎನ್ನುವರು



ಭೂಪಟ 11.2 – ಏಷ್ಯದ ಸ್ಥಾನ ಮತ್ತು ಭೌಗೋಳಿಕ ಸನ್ನಿವೇಶ

ಏಷ್ಯ ಮತ್ತು ಆಫ್ರಿಕ ಖಂಡಗಳ ಗಡಿಯು ಸಾಮಾನ್ಯವಾಗಿ ಸೂಯೇಜ್ ಕಾಲುವೆಯ ಮುಖಾಂತರ ಹಾಗೂ ಏಷ್ಯ ಮತ್ತು ಆಸ್ಟ್ರೇಲಿಯಗಳ ಗಡಿ ರೇಖೆಯು ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳ ನಡುವೆ ಹಾಯ್ದು ಹೋಗುತ್ತದೆ.


2. ಏಷ್ಯದ ಪ್ರಾದೇಶಿಕ ವಿಭಾಗಗಳು

ಇಂದು ಏಷ್ಯದಲ್ಲಿ 48 ದೇಶಗಳಿವೆ. ಅವುಗಳನ್ನು ಕೆಳಕಂಡಂತೆ ಐದು ಪ್ರಾದೇಶಿಕ ಗುಂಪುಗಳಾಗಿ ವಿಂಗಡಿಸಲಾಗಿದೆ.

1. ಪೂರ್ವ ಏಷ್ಯ: ಇದರಲ್ಲಿ ಚೀನ, ಉತ್ತರ ಮತ್ತು ದಕ್ಷಿಣ ಕೊರಿಯ, ಜಪಾನ್, ಹಾಂಕ್‌ಕಾಂಗ್, ತೈವಾನ್ ಮತ್ತು ಮಂಗೋಲಿಯ ದೇಶಗಳು ಸೇರಿವೆ. ಇದು ಉತ್ತರದಲ್ಲಿ ವಿಶಾಲವಾದ ರಷ್ಯ, ದಕ್ಷಿಣದಲ್ಲಿ ದಕ್ಷಿಣ ಏಷ್ಯ ಮತ್ತು ಆಗ್ನೇಯ ಏಷ್ಯಗಳ ನಡುವೆ ವಿಸ್ತರಿಸಿದೆ.

2. ಆಗ್ನೇಯ ಏಷ್ಯ: ಇದು ಮಯನ್ಮಾರ್, ಲಾವೋಸ್, ವಿಯೆಟ್ನಾಂ, ಥೈಲೆಂಡ್, ಕಾಂಬೋಡಿಯಾ, ಮಲೇಷ್ಯ, ಇಂಡೋನೇಷ್ಯ, ಸಿಂಗಾಪುರ, ಬ್ರುನ್ವೆ ಮತ್ತು ಫಿಲಿಪ್ಪೈನ್ಸ್ ದೇಶಗಳನ್ನೊಳಗೊಂಡಿದೆ. ಇದೊಂದು ಪರ್ಯಾಯ ದ್ವೀಪ. ದ್ವೀಪ ಸಮೂಹಗಳ ಪ್ರದೇಶ.

ಉದಾ: ಸುಮಾತ್ರ, ಜಾವ, ಸುಲಾವೇಶಿ, ಬೋರ್ನಿಯೊ, ಪಾಪುವ ಇತ್ಯಾದಿ. ಇದರ ಪಶ್ಚಿಮಕ್ಕೆ ಹಿಂದೂಸಾಗರ ಮತ್ತು ಪೂರ್ವಕ್ಕೆ ಪೆಸಿಫಿಕ್ ಸಾಗರಗಳಿವೆ.



ಭೂಪಟ 11.3 – ಏಷ್ಯದ ಪ್ರಾದೇಶಿಕ ವಿಭಾಗಗಳು

3. ದಕ್ಷಿಣ ಏಷ್ಯ: ಇದು ಭಾರತ, ಬಾಂಗ್ಲಾದೇಶ, ಭೂತಾನ, ನೇಪಾಲ, ಪಾಕಿಸ್ತಾನ, ಶ್ರೀಲಂಕ ಮತ್ತು ಮಾಲ್ಡೀವ್ಸ್‌ಗಳನ್ನು ಒಳಗೊಂಡಿದೆ. ಇವುಗಳಲ್ಲಿ ಭಾರತ ಅತಿ ದೊಡ್ಡದು. ಇದನ್ನು ದಕ್ಷಿಣದಲ್ಲಿ ಹಿಂದೂಸಾಗರ ಮತ್ತು ಅದರ ಉಪಭಾಗಗಳಾದ ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳು ಸುತ್ತುವರಿದಿವೆ. ಉತ್ತರದಲ್ಲಿ ಹಿಮಾಲಯ ಪರ್ವತ ಸರಣಿ, ಪೂರ್ವಕ್ಕೆ ಮಯನ್ಮಾರ್ ಮತ್ತು ಪಶ್ಚಿಮಕ್ಕೆ ಅಫ್‌ಘಾನಿಸ್ತಾನಗಳಿವೆ.

4. ನೈಋತ್ಯ ಏಷ್ಯ: ಅಫ್‌ಘಾನಿಸ್ತಾನ, ಬಹ್ರೇನ್, ಸೈಪ್ರಸ್, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಕುವೈತ್, ಲೆಬನಾನ್, ಓಮನ್, ಕಟಾರ್, ಸಿರಿಯ, ಪ್ಯಾಲೆಸ್ತೈನ್, ಸೌದಿಅರೇಬಿಯ, ಅರಬ್ ಎಮಿರೇಟ್ಸ್, ಯೆಮನ್ ಮತ್ತು ಟರ್ಕಿ ದೇಶಗಳು ಈ ವಿಭಾಗದಲ್ಲಿ ಸೇರುತ್ತವೆ. ಈ ವಿಭಾಗವು ಕಪ್ಪುಸಮುದ್ರದ ದಕ್ಷಿಣ ಭಾಗದಲ್ಲಿದ್ದು, ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರ ಮತ್ತು ಪೂರ್ವಕ್ಕೆ ಭಾರತಗಳ ನಡುವೆ ವಿಸ್ತರಿಸುತ್ತದೆ. ಇದು ಬಹಳವಾಗಿ ಮರುಭೂಮಿ ಮತ್ತು ಅರೆಮರುಭೂಮಿಗಳಿಂದ ಆವರಿಸಿದ್ದರೂ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳಿಂದ ಸಮೃದ್ಧವಾಗಿದೆ.

5. ಮಧ್ಯ ಏಷ್ಯ: ಇದು ಕ್ಯಾಸ್ಪಿಯನ್ ಸಮುದ್ರದಿಂದ ಚೀನದವರೆಗೆ ಹಾಗೂ ಕಜಕಿಸ್ತಾನದಿಂದ ಇರಾನ್–ಅಫ್‌ಘಾನಿಸ್ತಾನಗಳವರೆಗೆ ವಿಸ್ತರಿಸಿದೆ. ಈ ಭಾಗದ ಪ್ರಮುಖ ದೇಶಗಳೆಂದರೆ: ಕಜಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನ ಹಾಗೂ ಸೈಬೀರಿಯ(ರಷ್ಯ)ಗಳು.

3. ಪ್ರಾಕೃತಿಕ ಲಕ್ಷಣಗಳು

ಏಷ್ಯದ ಪ್ರಾಕೃತಿಕ ಲಕ್ಷಣಗಳಲ್ಲಿ ಎತ್ತರವಾದ ಪರ್ವತ ಸರಣಿಗಳು ಪ್ರಮುಖ ಭೂಸ್ವರೂಪಗಳಾಗಿವೆ. ಜೊತೆಗೆ ವಿವಿಧ ಪ್ರಸ್ಥಭೂಮಿ, ಮೆಕ್ಕಲು ಮಣ್ಣುಳ್ಳ ಮೈದಾನ ಮತ್ತು ದ್ವೀಪ ಸಮೂಹಗಳನ್ನೂ ಹೊಂದಿದೆ.

ಪ್ರಮುಖ ಪ್ರಾಕೃತಿಕ ವಿಭಾಗಗಳು: ಭೂರಚನೆ ಮತ್ತು ಮೇಲ್ಮೈ ಲಕ್ಷಣಗಳನ್ನಾಧರಿಸಿ ಏಷ್ಯಖಂಡವನ್ನು ಐದು ಪ್ರಮುಖ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಬಹುದು:

1. ವಾಯವ್ಯ ತಗ್ಗು ಮೈದಾನಗಳು
2. ಕೇಂದ್ರದ ಎತ್ತರ ಭಾಗಗಳು
3. ದಕ್ಷಿಣ ಪ್ರಸ್ಥಭೂಮಿಗಳು
4. ನದಿಗಳ ಮಹಾ ಮೈದಾನಗಳು
5. ದ್ವೀಪ ಸಮೂಹಗಳು

1. ವಾಯವ್ಯ ತಗ್ಗು ಮೈದಾನಗಳು: ಈ ವಿಭಾಗವು ಏಷ್ಯದ ಪ್ರಾಕೃತಿಕ ಲಕ್ಷಣಗಳಲ್ಲಿ ಹೆಚ್ಚು ಮಹತ್ವವುಳ್ಳದ್ದು. ಬೇರಿಂಗ್ ಜಲಸಂಧಿಯಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವಿಸ್ತರಿಸಿದೆ. ಕೇಂದ್ರದ ಎತ್ತರ ಭಾಗಗಳು ಮತ್ತು ಆರ್ಕ್ಟಿಕ್ ಸಾಗರದ ನಡುವೆ ಕಂಡುಬರುತ್ತದೆ. ತ್ರಿಕೋನ ಆಕಾರವುಳ್ಳ ಈ ವಿಶಾಲವಾದ ತಗ್ಗು ಮೈದಾನವನ್ನು 'ಸೈಬೀರಿಯ ಮೈದಾನ' ಎಂದು ಕರೆಯುತ್ತಾರೆ. ಉತ್ತರದ ಕಡೆಗೆ ಸಾಧಾರಣ ಇಳಿಜಾರುಳ್ಳದ್ದು. ಈ ಮೈದಾನದ ಮೂಲಕ ಕೆಲವು ನದಿಗಳು ಹರಿಯುತ್ತವೆ. ಉದಾ: ಲೀನ, ಓಬ್ ಮತ್ತು ಯೆನ್ಸಿ. ಇವು ಉತ್ತರದ ಕಡೆಗೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.


2. ಕೇಂದ್ರದ ಎತ್ತರ ಭಾಗಗಳು: ಇದು ಏಷ್ಯದ ಎರಡನೆ ಅತಿ ಪ್ರಮುಖ ಪ್ರಾಕೃತಿಕ ವಿಭಾಗ. ವಾಯವ್ಯ ತಗ್ಗು ಮೈದಾನಗಳ ದಕ್ಷಿಣ ಭಾಗದಲ್ಲಿವೆ. ಮಧ್ಯ ಏಷ್ಯದಲ್ಲಿರುವ ಪರ್ವತ ಸರಣಿಗಳನ್ನು 'ಕೇಂದ್ರದ ಎತ್ತರ ಭಾಗಗಳು' ಎನ್ನುವರು. ಇದು ಏಷ್ಯ ಮೈನರ್‌ನಿಂದ ಬೇರಿಂಗ್ ಜಲಸಂಧಿವರೆಗೂ ವಿಸ್ತರಿಸಿದೆ. ಇಲ್ಲಿ ಅನೇಕ ಪರ್ವತ ಸರಣಿಗಳು ಪಾಮಿರ್ ಗ್ರಂಥಿಯಿಂದ ಎಲ್ಲೆಡೆಗೂ ಹಬ್ಬಿವೆ. ಪೂರ್ವದಿಕ್ಕಿನ ಸರಣಿಗಳಲ್ಲಿ ಹಿಮಾಲಯ, ಕುನ್‌ಲುನ್, ಕಾರಾಕೋರಂ, ಟಿಯೆನ್‌ಶಾನ್, ಆಲ್ಟಾಯ್, ಸಯಾನ್, ಯಬ್ಲೋನಿ, ಕಿಂಗಾನ್ ಮತ್ತು ಸ್ಟಾನ್‌ವಾಯ್ ಪರ್ವತಗಳು ಮುಖ್ಯವಾದವು. ಪಶ್ಚಿಮದ ಸರಣಿಗಳಲ್ಲಿ ಹಿಂದುಕುಶ್, ಕಿರ್ತಾರ್, ಸುಲೈಮಾನ್, ಎಲ್ಬರ್ಜ್, ಜಾಗ್ರೋಸ್, ಕಕಾಸಸ್, ಪೊಂಟಿನ್ ಮತ್ತು ತಾರಸ್ ಪರ್ವತಗಳು ಸೇರಿವೆ.

ಮಡಿಕೆ ಪರ್ವತಗಳಾದ ಹಿಮಾಲಯದ ಸರಣಿಯು ಪಾಮಿರ್ ಗ್ರಂಥಿಯಿಂದ ಆಗ್ನೇಯಕ್ಕೆ ಹಬ್ಬಿವೆ. ಅವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳು. ಇಲ್ಲಿನ ಮೌಂಟ್ ಎವರೆಸ್ಟ್ ಪ್ರಪಂಚದಲ್ಲೇ ಎತ್ತರವಾದ ಶಿಖರ.



ಚಿತ್ರ 11.1 – ಮೌಂಟ್ ಎವರೆಸ್ಟ್

ಪರ್ವತ ಸರಣಿಗಳ ನಡುವೆ ಅನೇಕ ಪ್ರಸ್ಥಭೂಮಿಗಳಿವೆ. ಉದಾ: ಟಿಬೆಟ್, ಮಂಗೋಲಿಯ, ಇರಾನ್, ಅನಟೋಲಿಯ ಪ್ರಸ್ಥಭೂಮಿ ಇತ್ಯಾದಿ. ಏಷ್ಯ ಖಂಡದ ಅನೇಕ ನದಿಗಳು ಈ ಎತ್ತರದ ಭಾಗಗಳಲ್ಲಿ ಉಗಮವಾಗುತ್ತವೆ.



ಭೂಪಟ 11.4 – ಪ್ರಾಕೃತಿಕ ವಿಭಾಗಗಳು

3. ದಕ್ಷಿಣ ಪ್ರಸ್ಥಭೂಮಿಗಳು: ಇವು ಕಠಿಣ ಮತ್ತು ಸ್ಪಟಿಕ ಶಿಲೆಗಳಿಂದ ರಚನೆಗೊಂಡ ಪುರಾತನ ಪ್ರಸ್ಥಭೂಮಿಗಳು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಅರೇಬಿಯ, ದಖನ್ (ಭಾರತ), ಯುನ್ನಾನ್ (ಚೀನ) ಮತ್ತು ಶಾನ್ (ಮಯನ್ಮಾರ್) ಪ್ರಸ್ಥಭೂಮಿ.

ಅರೇಬಿಯ ಪ್ರಸ್ಥಭೂಮಿಯು ಒಂದು ಪರ್ಯಾಯ ದ್ವೀಪ ಮತ್ತು ಇದೊಂದು ಶುಷ್ಕ ಪ್ರದೇಶ.

ದಖನ್ ಪ್ರಸ್ಥಭೂಮಿಯು ಭಾರತದ ಪರ್ಯಾಯ ದ್ವೀಪದ ಹೆಚ್ಚು ಭಾಗವನ್ನಾವರಿಸಿದೆ. ಮಧ್ಯಭಾರತದ ಬೆಟ್ಟದ ಸಾಲುಗಳು, ಪಶ್ಚಿಮ ಘಟ್ಟ ಹಾಗೂ ಪೂರ್ವ ಘಟ್ಟಗಳ ನಡುವೆ ಇದೆ. ಇದು ಪೂರ್ವ ದಿಕ್ಕಿಗೆ ಇಳಿಜಾರಾಗಿದ್ದು, ಆ ಮೂಲಕ ಅನೇಕ ನದಿಗಳು ಹರಿಯುವವು.

ಚೀನದ ನೈಋತ್ಯಕ್ಕೆ ಯುನ್ನಾನ್ ಪ್ರಸ್ಥಭೂಮಿಯಿದೆ. ಇದೊಂದು ಉನ್ನತ ಸುಣ್ಣಕಲ್ಲು ಪ್ರದೇಶ. ಇದರ ಮುಂದುವರಿದ ಭಾಗವೇ ಶಾನ್ ಪ್ರಸ್ಥಭೂಮಿ.

4. ನದಿಗಳ ಮಹಾ ಮೈದಾನಗಳು: ಹಿಂದೂ ಸಾಗರ ಅಥವಾ ಪೆಸಿಫಿಕ್ ಸಾಗರಗಳಿಗೆ ಸೇರುವ ಏಷ್ಯದ ನದಿಗಳ ಮೈದಾನಗಳನ್ನೊಳಗೊಂಡಿದೆ. ಇಲ್ಲಿ ಹರಿಯುವ ನದಿಗಳು ಮೆಕ್ಕಲು ಮಣ್ಣನ್ನು ಸಂಚಯ ಮಾಡುವುದರೊಂದಿಗೆ ಫಲವತ್ತಾದ ಮೈದಾನಗಳನ್ನು ನಿರ್ಮಿಸಿವೆ. ಈ ವಿಭಾಗದ ಪ್ರಮುಖ ಮೈದಾನಗಳೆಂದರೆ: ಸಿರಿಯ ಮತ್ತು ಇರಾಕ್‌ನ ಟೈಗ್ರಿಸ್–ಯುಫ್ರಟೀಸ್, ಭಾರತ–ಪಾಕಿಸ್ತಾನಗಳ ಸಿಂಧೂ–ಗಂಗ ಮೈದಾನಗಳು, ಮಯನ್ಮಾರಿನ ಇರವಾಡಿ, ಇಂಡೋಚೀನದ ಮೀನಾಮ್ ಮತ್ತು ಮೀಕಾಂಗ್, ಚೀನದ ಚಿಯಾಂಗ್–ಜಿಯಾಂಗ್ (ಯಾಂಗ್‌ಟ್ಸೆ), ಸಿಕಿಯಾಂಗ್ ಮತ್ತು ಹ್ವಾಂಗ್‌ಹೊ ನದಿ ಮೈದಾನಗಳು. ಇವು ಹೆಚ್ಚು ಜನಭರಿತವಾಗಿವೆ.

5. ದ್ವೀಪ ಸಮೂಹ: ಏಷ್ಯಖಂಡದ ಆಗ್ನೇಯ ಮತ್ತು ಪೆಸಿಫಿಕ್ ತೀರಗಳಲ್ಲಿ ಅನೇಕ ದ್ವೀಪಗಳಿವೆ. ಅವು ಉತ್ತರದಲ್ಲಿ ಕಮಚಟ್ಕದಿಂದ ದಕ್ಷಿಣದಲ್ಲಿ ಫಿಲಿಪ್ಪೈನ್ಸ್ ಮತ್ತು ಬೋರ್ನಿಯೊವರೆಗೆ ಮಾಲೆಯಂತೆ ಹಬ್ಬಿವೆ. ಅವು ಐದು ಸಮುದ್ರಗಳಿಂದ ಆವರಿಸಿವೆ. ಉದಾ: ಓಖೋಟಸ್ಕ ಸಮುದ್ರ, ಜಪಾನ್ ಸಮುದ್ರ, ಹಳದಿ ಸಮುದ್ರ, ಪೂರ್ವ ಚೀನ ಸಮುದ್ರ ಮತ್ತು ದಕ್ಷಿಣ ಚೀನ ಸಮುದ್ರ.

ಪ್ರಮುಖ ದ್ವೀಪ ಸಮೂಹಗಳೆಂದರೆ: ಕ್ಯೂರೈಲ್, ಜಪಾನ್, ಲಾಚು, ಫಿಲಿಪ್ಪೈನ್ಸ್ ಮತ್ತು ಬೋರ್ನಿಯೊ. ಇವುಗಳಲ್ಲಿ ಬಹಳಷ್ಟು ಜ್ವಾಲಾಮುಖಿ ಜನಿತವಾದವು. ಜೊತೆಗೆ ಫಲವತ್ತಾದ ಮಣ್ಣು, ಆಳವಾದ ಕಣಿವೆ ಮತ್ತು ಶಂಕಾಕೃತಿ ಪರ್ವತಗಳನ್ನು ಹೊಂದಿವೆ.

4. ಪ್ರಮುಖ ನದಿಗಳು ಮತ್ತು ವ್ಯವಸಾಯ

ಏಷ್ಯದ ನದಿಗಳು: ಏಷ್ಯದ ನದಿ ಜಾಲಗಳಲ್ಲಿ ವೈವಿಧ್ಯವಿದೆ. ಈ ಖಂಡದ ನದಿವ್ಯವಸ್ಥೆಯ ಮೇಲೆ ಪ್ರಾಕೃತಿಕ ಲಕ್ಷಣ ಮತ್ತು ಸುತ್ತಲಿನ ಜಲರಾಶಿಗಳು ಪ್ರಭಾವ ಬೀರುತ್ತವೆ. ಆರ್ಕ್ಟಿಕ್, ಪೆಸಿಫಿಕ್ ಮತ್ತು ಹಿಂದೂ ಸಾಗರಗಳು ಏಷ್ಯವನ್ನು ಸುತ್ತುವರಿದಿವೆ. ಈ ಖಂಡದಲ್ಲಿ ಹರಿಯುವ

ಹೆಚ್ಚಿನ ಸಂಖ್ಯೆಯ ನದಿಗಳು ಈ ಸಾಗರಗಳಿಗೆ ಸೇರುವವು. ಹೀಗಾಗಿ ಸಾಗರಗಳಿಗೆ ನದಿಗಳು ಸೇರುವುದನ್ನಾಧರಿಸಿ ಏಷ್ಯದ ನದಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

1. ಹಿಂದೂ ಸಾಗರ ಸೇರುವ ನದಿಗಳು: ಈ ಗುಂಪಿಗೆ ಸೇರಿದ ಮುಖ್ಯ ನದಿಗಳೆಂದರೆ: ಸಿರಿಯ ಹಾಗೂ ಇರಾಕ್ ದೇಶಗಳ ಟೈಗ್ರಿಸ್ ಮತ್ತು ಯುಪ್ರಟೀಸ್ ನದಿಗಳು ಪರ್ಷಿಯ ಖಾರಿಯನ್ನೂ, ಪಾಕಿಸ್ತಾನ ಮತ್ತು ಭಾರತದ ಸಿಂಧೂ, ಗಂಗ ಮತ್ತು ಬ್ರಹ್ಮಪುತ್ರ ನದಿಗಳು ಹಿಮಾಲಯದಲ್ಲಿ ಉಗಮಿಸಿ ದಕ್ಷಿಣಕ್ಕೆ ಹರಿದು ಹಿಂದೂ ಸಾಗರವನ್ನು ಸೇರುತ್ತವೆ. ಮಯನ್ಮಾರಿನ ಸಿಟ್ಯಾಂಗ್, ಸಾಲ್ವೀನ್ ಮತ್ತು ಇರವಾಡಿ ನದಿಗಳು ಬಂಗಾಳ ಕೊಲ್ಲಿಗೆ ಸೇರುವವು.

2. ಪೆಸಿಫಿಕ್ ಸಾಗರ ಸೇರುವ ನದಿಗಳು: ಈ ಗುಂಪಿನಲ್ಲಿ ರಷ್ಯದ ಅಮುರ್, ಚೀನದ ಹ್ವಾಂಗ್ ಹೊ, ಚಿಯಾಂಗ್ ಜಿಯಾಂಗ್ (ಯಾಂಗ್‌ಟ್ಸೆ) ಮತ್ತು ಸಿಕಿಯಾಂಗ್ ನದಿಗಳು ಪೂರ್ವದ ಕಡೆಗೆ ಹರಿಯುತ್ತಾ ಕ್ರಮವಾಗಿ ಓಖೋಟಸ್ಕ, ಹಳದಿ ಸಮುದ್ರ ಮತ್ತು ಚೀನ ಸಮುದ್ರಗಳನ್ನು ಸೇರುತ್ತವೆ. ಇಂಡೋಚೀನದ ಮೀನಾಮ್ ಮತ್ತು ಮೀಕಾಂಗ್ ನದಿಗಳು ದಕ್ಷಿಣ ಚೀನ ಸಮುದ್ರವನ್ನು ಸೇರುತ್ತವೆ.



ಭೂಪಟ 11.5 – ಏಷ್ಯದ ನದಿ ವ್ಯವಸ್ಥೆ

3. ಆರ್ಕ್ಟಿಕ್ ಸಾಗರ ಸೇರುವ ನದಿಗಳು: ಓಬ್, ಯೆನ್ನಿ ಮತ್ತು ಲೀನ ಎಂಬುವವು ಈ ಗುಂಪಿನ ಪ್ರಮುಖ ನದಿಗಳು. ಇವು ಕೇಂದ್ರದ ಉನ್ನತ ಭಾಗಗಳಲ್ಲಿ ಉಗಮಹೊಂದಿ ಉತ್ತರಕ್ಕೆ ಹರಿದು ಆರ್ಕ್ಟಿಕ್ ಸಾಗರವನ್ನು ಸೇರುತ್ತವೆ.

4. ಒಳನಾಡಿನ ನದಿಗಳು: ಈ ಗುಂಪಿಗೆ ಸೇರಿದ ನದಿಗಳು ಒಳನಾಡಿನ ಸಮುದ್ರಗಳಿಗೆ ಸೇರುವವು. ಉದಾ: ವೋಲ್ಗ ಮತ್ತು ಯೂರಲ್ ನದಿ ಕ್ಯಾಸ್ಪಿಯನ್ ಸಮುದ್ರವನ್ನು ಮತ್ತು ಅಮುದರಿಯ ಮತ್ತು ಸಿರ್‌ದರಿಯಾ ನದಿಗಳು ಅರಲ್ ಸಮುದ್ರವನ್ನೂ ಸೇರುತ್ತವೆ.

ಏಷ್ಯದ ವ್ಯವಸಾಯ

ವ್ಯವಸಾಯವು ಏಷ್ಯದ ಪ್ರಮುಖ ವೃತ್ತಿ. ಸುಮಾರು ನಾಲ್ಕನೇ ಮೂರು ಭಾಗದಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಏಷ್ಯದಿಂದ ರಫ್ತಾಗುವ ಸರಕುಗಳಲ್ಲಿ ಬಹುಭಾಗ ಕೃಷಿ ಉತ್ಪನ್ನಗಳಾಗಿರುತ್ತವೆ

ಏಷ್ಯದ ವ್ಯವಸಾಯ ಮತ್ತು ನದಿ ವ್ಯವಸ್ಥೆಗಳ ನಡುವೆ ನಿಕಟವಾದ ಸಂಬಂಧವಿದೆ. ಸೈಬೀರಿಯಾವನ್ನು ಹೊರತುಪಡಿಸಿ, ಉಳಿದ ಹೆಚ್ಚಿನ ಭಾಗಗಳಲ್ಲಿ ವ್ಯವಸಾಯವು ನದಿಬಯಲುಗಳಲ್ಲಿ ರೂಢಿಯಲ್ಲಿದೆ. ಇದಕ್ಕೆ ಇಲ್ಲಿನ ಫಲವತ್ತಾದ ಮಣ್ಣು ಮತ್ತು ನೀರಾವರಿ ಮೂಲಕ ನೀರು ಪೂರೈಕೆ ಮುಖ್ಯ ಕಾರಣಗಳು.

ಏಷ್ಯದ ಅನೇಕ ದೇಶಗಳಲ್ಲಿ ರೈತರು ಸಾಗುವಳಿ ಕಾರ್ಯಗಳಿಗೆ ಕೈಯಿಂದ ಮಾಡಿದ ಉಪಕರಣ ಮತ್ತು ಪ್ರಾಣಿಗಳನ್ನು ಉಪಯೋಗಿಸುವರು. ಅವರು ಸಾಂದ್ರಬೇಸಾಯ ಪದ್ಧತಿಯನ್ನು ಅನುಸರಿಸುವರು. ರೂಢಿಯಲ್ಲಿರುವ ಇತರೆ ಬೇಸಾಯ ಕ್ರಮಗಳೆಂದರೆ; ನೀರಾವರಿ ಬೇಸಾಯ, ಒಣ ಬೇಸಾಯ, ನೆಡುತೋಟ ಬೇಸಾಯ, ಮಿಶ್ರ ಬೇಸಾಯ, ಸ್ಥಳಾಂತರ ಬೇಸಾಯ ಇತ್ಯಾದಿ. ಇತ್ತೀಚೆಗೆ ಆಧುನಿಕ ವ್ಯವಸಾಯ ಉಪಕರಣ, ರಾಸಾಯನಿಕ ಗೊಬ್ಬರ, ಅಧಿಕ ಇಳುವರಿ ನೀಡುವ ತಳಿಗಳ ಬಳಕೆ ಇತ್ಯಾದಿಗಳು ಏಷ್ಯದ ಕೆಲವು ದೇಶಗಳಲ್ಲಿ ಹೆಚ್ಚು ರೂಢಿಗೆ ಬಂದಿವೆ. ಆದಾಗ್ಯೂ ಇನ್ನೂ ಅನೇಕ ದೇಶಗಳಲ್ಲಿ ಹಲವು ಕಾರಣಗಳಿಂದ ಇಳುವರಿ ಕಡಿಮೆ ಇದೆ.

ಬೆಳೆಗಳು

ಏಷ್ಯದಲ್ಲಿ ಅನೇಕ ವಿಧದ ಬೆಳೆಗಳ ಸಾಗುವಳಿ ಕಂಡುಬರುತ್ತದೆ. ಭತ್ತ ಮತ್ತು ಗೋಧಿಗಳು ಪ್ರಮುಖ ಆಹಾರ ಬೆಳೆಗಳು. ಚೀನ ಮತ್ತು ಭಾರತಗಳು ಪ್ರಮುಖ ಭತ್ತ ಉತ್ಪಾದಿಸುವ ದೇಶಗಳಾಗಿದ್ದು, ಪ್ರಪಂಚದ ಭತ್ತದ ಒಟ್ಟು ಉತ್ಪಾದನೆಯಲ್ಲಿ ಶೇ.90 ಭಾಗವನ್ನು ಪೂರೈಸುತ್ತವೆ. ಜಪಾನ್, ಬಾಂಗ್ಲಾದೇಶ, ಥೈಲೆಂಡ್ ಹಾಗೂ ಆಗ್ನೇಯ ಏಷ್ಯ ದೇಶಗಳು ಇತರ ಪ್ರಮುಖ ಭತ್ತ ಉತ್ಪಾದಿಸುವ ದೇಶಗಳು. ಚೀನ, ಭಾರತ, ಪಾಕಿಸ್ತಾನ ಮತ್ತು ಏಷ್ಯದ ರಷ್ಯಾ ಭಾಗಗಳು ಪ್ರಮುಖ ಗೋಧಿ ಉತ್ಪಾದಿಸುವ ದೇಶಗಳು.



ಚಿತ್ರ 11.2 – ಭತ್ತದ ಬೆಳೆ

ಪ್ರಪಂಚದ ಸ್ವಾಭಾವಿಕ ರಬ್ಬರ್ ಮತ್ತು ಚಹ ಉತ್ಪಾದನೆಯಲ್ಲಿ ಏಷ್ಯ ಮುಂದಿದೆ. ಇಂಡೋನೇಷ್ಯ, ಮಲೇಷ್ಯ, ಮತ್ತು ಥೈಲೆಂಡ್‌ಗಳು ಪ್ರಮುಖ ಸ್ವಾಭಾವಿಕ ರಬ್ಬರ್ ಉತ್ಪಾದಕರು. ಪ್ರಮುಖ ಚಹ ಉತ್ಪಾದಕರೆಂದರೆ: ಚೀನ, ಇಂಡೊನೇಷ್ಯ, ಮಲೇಷ್ಯ, ಭಾರತ ಮತ್ತು ಥೈಲೆಂಡ್ ದೇಶಗಳು.



ಚಿತ್ರ 11.3 – ಚಹ ತೋಟ




ಚಿತ್ರ 11.4 – ಕಾಫಿ ತೋಟ

ಏಷ್ಯದಲ್ಲಿ ಬೆಳೆಯುವ ಇತರ ಪ್ರಮುಖ ಬೆಳೆಗಳೆಂದರೆ: ಹತ್ತಿ, ಸೆಣಬು (ನಾರುಬೆಳೆ) ಮತ್ತು ಕಬ್ಬು. ಚೀನ, ಭಾರತ, ಪಾಕಿಸ್ತಾನ, ಟರ್ಕಿ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನಗಳು ಪ್ರಮುಖ ಹತ್ತಿ ಉತ್ಪಾದಿಸುವ ದೇಶಗಳು. ಬಂಗ್ಲಾದೇಶ, ಚೀನ ಮತ್ತು ಭಾರತಗಳಿಂದ ಸೆಣಬು ಉತ್ಪಾದನೆಯಾಗುತ್ತದೆ. ಕಬ್ಬು ಬೆಳೆಯುವ ಪ್ರದೇಶಗಳು ಹೆಚ್ಚಾಗಿ ಭಾರತ, ಇಂಡೊನೇಷ್ಯ, ಫಿಲಿಪ್ಪೈನ್ಸ್ ಮತ್ತು ಬಂಗ್ಲಾದೇಶಗಳಲ್ಲಿ ಕಂಡುಬರುತ್ತವೆ. ಭಾರತವು ಪ್ರಪಂಚದ ಎರಡನೆಯ ಪ್ರಮುಖ ಕಬ್ಬು ಉತ್ಪಾದಿಸುವ ದೇಶ.

ಕಾಫಿ, ಕೋಕೊ, ವಿವಿಧ ತೃಣಧಾನ್ಯ (ನವಣೆ, ಸಜ್ಜೆ, ಸಾವೆ), ದ್ವಿದಳಧಾನ್ಯ, ಎಣ್ಣೆಕಾಳು ಸಾಂಬಾರು ಪದಾರ್ಥಗಳು ಮೊದಲಾದವುಗಳ ಉತ್ಪಾದನೆಗೂ ಏಷ್ಯ ಪ್ರಸಿದ್ಧವಾದುದು.

5. ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ


ವಾಯುಗುಣ: ಈಗಾಗಲೇ ತಿಳಿಸಿದಂತೆ, ಏಷ್ಯ ವಿಶಾಲವಾದ ಭೂಖಂಡ. ಅದು ದಕ್ಷಿಣದಲ್ಲಿ ಭೂಮಧ್ಯ ರೇಖೆಯಿಂದ ಧ್ರುವೀಯ ಪ್ರದೇಶದವರೆಗೂ ವಿಸ್ತರಿಸಿದೆ. ಪರಿಣಾಮವಾಗಿ ಈ ಖಂಡದ ವಿವಿಧ ಪ್ರದೇಶಗಳಲ್ಲಿ ವಿವಿಧ ವಾಯುಗುಣದ ಪರಿಸ್ಥಿತಿಯಿದೆ. ಏಷ್ಯದಲ್ಲಿ ಕೆಲವು ಭಾಗಗಳು ಪ್ರಪಂಚದಲ್ಲೇ ಅತ್ಯಂತ ಶೀತ(ಧ್ರುವೀಯ)ವಾದ ಪರಿಸ್ಥಿತಿಯನ್ನು ಹೊಂದಿದ್ದರೆ ಮತ್ತೆ ಕೆಲವು ಭಾಗಗಳು ಅತಿ ಉಷ್ಣತೆಯುಳ್ಳವು (ಕೇಂದ್ರ ಮತ್ತು ನೈಋತ್ಯ). ಹಾಗೆಯೇ ಅತಿಶುಷ್ಕ ಮತ್ತು ಅಧಿಕ ಮಳೆ ಬೀಳುವ ಸ್ಥಳಗಳೂ ಸಹ ಇಲ್ಲಿ ಕಂಡುಬರುತ್ತವೆ. ಏಷ್ಯದ ವಿವಿಧ ವಾಯುಗುಣದ ಸ್ಥಿತಿಗೆ ಹಲವು ಅಂಶಗಳು ಕಾರಣವಾಗಿವೆ. ಉದಾ: ವಿಸ್ತೀರ್ಣ, ಅಕ್ಷಾಂಶಗಳ ವಿಸ್ತರಣೆ, ಪ್ರಾಕೃತಿಕ ಲಕ್ಷಣ, ಮಾನ್ಸೂನ್ ಮಾರುತ ಇತ್ಯಾದಿ.



ಭೂಪಟ 11.6 – ವಾರ್ಷಿಕ ಉಷ್ಣಾಂಶದ ಹಂಚಿಕೆ

ಉಷ್ಣಾಂಶ: ಇದು ಸಹಜವಾಗಿ ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವುದು. ಜನವರಿ ತಿಂಗಳಲ್ಲಿ ಏಷ್ಯದ ದಕ್ಷಿಣ ದೇಶಗಳಿಗಿಂತ ಉತ್ತರದ ದೇಶಗಳಲ್ಲಿ ಶೀತವು ಹೆಚ್ಚಾಗಿರುತ್ತದೆ. ಸೈಬೀರಿಯಾದಲ್ಲಿರುವ ವರ್ಕೋಯಾನ್ಸ್ಕ್ ಅತ್ಯಂತ ಶೀತವಾದ ಸ್ಥಳ. ಜುಲೈ ತಿಂಗಳಲ್ಲಿ ಸೈಬೀರಿಯಾದ ಉತ್ತರ ಭಾಗ ಹಾಗೂ ಮಧ್ಯ ಏಷ್ಯದ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿ ಭಾಗಗಳನ್ನು ಹೊರತುಪಡಿಸಿ, ಏಷ್ಯದ ಬಹಳಷ್ಟು ಭಾಗಗಳಲ್ಲಿ ಶಾಖವು ಹೆಚ್ಚು. ಕೆಲವು ಭಾಗಗಳಲ್ಲಿ ಉಷ್ಣಾಂಶವು 40^0 ಸೆಲ್ಸಿಯಸ್‌ಗಿಂತ ಹೆಚ್ಚಾಗಿರುತ್ತದೆ.

ಮಳೆಯ ಹಂಚಿಕೆ: ಏಷ್ಯ ಖಂಡದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳಿಂದ ಬೇಸಿಗೆಯಲ್ಲಿ ಹೆಚ್ಚು ಮಳೆಯಾಗುತ್ತದೆ. ಆದರೆ ಮಾನ್ಸೂನ್ ಮಾರುತಗಳು ಮಧ್ಯ ಏಷ್ಯವನ್ನು ತಲುಪುವುದಿಲ್ಲ. ಆ ಭಾಗವು ವರ್ಷವೆಲ್ಲ ಶುಷ್ಕ ಸ್ಥಿತಿಯನ್ನು ಹೊಂದಿರುತ್ತದೆ. ಪಶ್ಚಿಮ ಏಷ್ಯದ ದೇಶಗಳು, ಚಳಿಗಾಲದ ಪಶ್ಚಿಮ ಮಾರುತ(ಪ್ರತಿವಾಣಿಜ್ಯ)ಗಳಿಂದಲೂ ಹಾಗೂ ಚೀನದ ಪೂರ್ವಭಾಗ ಮತ್ತು ಫಿಲಿಪ್ಪೈನ್ಸ್, ಮಲೇಷ್ಯ ಮೊದಲಾದವು ಉಷ್ಣವಲಯದ ಆವರ್ತ ಮಾರುತಗಳಿಂದ ಮಳೆ ಪಡೆಯುತ್ತವೆ.



ಭೂಪಟ 11.7 – ವಾರ್ಷಿಕ ಮಳೆಹಂಚಿಕೆ

ಚಳಿಗಾಲ: ಏಷ್ಯದ ಹೆಚ್ಚಿನ ಭಾಗಗಳಲ್ಲಿ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಚಳಿಗಾಲವಾಗಿರುತ್ತದೆ. ಏಷ್ಯದ ಬಹುಭಾಗವು ಉತ್ತರಾರ್ಧ ಗೋಳದಲ್ಲಿದೆ. ಈ ಅವಧಿಯಲ್ಲಿ ಉತ್ತರಾರ್ಧಗೋಳಕ್ಕೆ ಓರೆಯಾದ ಸೂರ್ಯನ ಕಿರಣಗಳು ಪ್ರಸರಿಸುವವು. ಹೀಗಾಗಿ ಏಷ್ಯದ ಹೆಚ್ಚಿನ ಭಾಗಗಳಲ್ಲಿ ಬಹಳ ಕಡಿಮೆ ಉಷ್ಣಾಂಶವಿದ್ದು, ಅತಿ ಶೀತವಾದ ವಾಯುಗುಣವಿರುತ್ತದೆ.

ಮಧ್ಯ ಏಷ್ಯದಲ್ಲಿ ವಾಯುವಿನ ಒತ್ತಡ ಅಧಿಕ ಮತ್ತು ಹಿಂದೂ ಸಾಗರದಲ್ಲಿ ಒತ್ತಡ ಕಡಿಮೆ ಇರುತ್ತದೆ. ಹೀಗಾಗಿ ಮಾರುತಗಳು ಭೂಭಾಗದಿಂದ ಸಮುದ್ರದ ಕಡೆಗೆ ಬೀಸುತ್ತವೆ. ಅವು ಒಣಗಾಳಿಗಳು, ಮಳೆ ತರಲಾರವು. ಚಳಿಗಾಲದಲ್ಲಿ ಮಳೆ ವಿರಳ.


ಬೇಸಿಗೆ ಕಾಲ: ಚಳಿಗಾಲಕ್ಕೆ ವಿರುದ್ಧ ಪರಿಸ್ಥಿತಿ ಇರುತ್ತದೆ. ಇದು ಏಪ್ರಿಲ್‌ನಲ್ಲಿ ಆರಂಭ ಮತ್ತು ಸೆಪ್ಟಂಬರ್‌ನಲ್ಲಿ ಅಂತ್ಯಗೊಳ್ಳುತ್ತದೆ. ಉತ್ತರಾರ್ಧಗೋಳದಲ್ಲಿ ಸೂರ್ಯ ನೇರವಾಗಿ ಪ್ರಕಾಶಿಸುವುದು. ಆದ್ದರಿಂದ ಏಷ್ಯದ ಬಹುಭಾಗಗಳಲ್ಲಿ ಉಷ್ಣಾಂಶ ಹೆಚ್ಚು ಮತ್ತು ಮಧ್ಯ ಏಷ್ಯದಲ್ಲಿ ಒತ್ತಡ ಕಡಿಮೆ. ಮಾರುತಗಳು ಸಮುದ್ರಗಳಿಂದ ಭೂಭಾಗಗಳಿಗೆ ಬೀಸುತ್ತವೆ. ಅವು ಹೆಚ್ಚು ಕಡಿಮೆ ಖಂಡದ ಎಲ್ಲೆಡೆಗೂ ಮಳೆಯನ್ನು ಸುರಿಸುತ್ತವೆ.

● ಜನವರಿಯಲ್ಲಿ ಸೈಬೀರಿಯಾದ ವರ್ಕೋಯಾನಸ್ಕ್ – 51° ಸೆ ಮತ್ತು ಓಮಿಯಾಕ್ನಿ – 71° ಸೆ. ಕನಿಷ್ಠ ಉಷ್ಣಾಂಶವನ್ನು ದಾಖಲಿಸುತ್ತವೆ.

● ಭಾರತದ ಮೇಘಾಲಯ ರಾಜ್ಯದ ಮಾಸಿನ್‌ರಾಮ್ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಪಡೆಯುತ್ತದೆ. (1187 ಸೆಂ.ಮೀ)

ಸ್ವಾಭಾವಿಕ ಸಸ್ಯವರ್ಗ

ಏಷ್ಯದ ಸ್ವಾಭಾವಿಕ ಸಸ್ಯವರ್ಗ ಮತ್ತು ವಾಯುಗುಣಗಳ ನಡುವೆ ಪರಸ್ಪರ ಸಂಬಂಧವಿದೆ. ಭೂಸ್ವರೂಪ, ಮಣ್ಣು ಮತ್ತು ಮಾನವನ ಪ್ರವೇಶಗಳೂ ಸಹ ಸಸ್ಯವರ್ಗದ ವಿಧ ಮತ್ತು ಹಂಚಿಕೆಯ ಮೇಲೆ ಪ್ರಭಾವ ಬೀರುವವು. ಏಷ್ಯದ ಸಸ್ಯವರ್ಗದಲ್ಲಿ ವೈವಿಧ್ಯತೆ ಇದೆ. ಅವುಗಳನ್ನು ಏಳು ವಿಧಗಳಾಗಿ ವಿಂಗಡಿಸಬಹುದು.



ಭೂಪಟ 11.8 – ಸ್ವಾಭಾವಿಕ ಸಸ್ಯವರ್ಗ

1. ಟಂಡ್ರ ಸಸ್ಯವರ್ಗ: ಈ ಸಸ್ಯವರ್ಗವು ಆರ್ಕ್ಟಿಕ್ ಕರಾವಳಿಯ ಉದ್ದಕ್ಕೂ ಕಿರಿದಾದ ಭಾಗದಲ್ಲಿ ಕಂಡುಬರುತ್ತದೆ. ಇದು ಬಹುವಾಗಿ ನೀರ್ಗಲ್ಲು ಮತ್ತು ಹಿಮದಿಂದಾವರಿಸಿರುತ್ತದೆ. ಹೀಗಾಗಿ ಸಸ್ಯ ಬೆಳವಣಿಗೆ ಪಾಚಿ ಮತ್ತು ಶಿಲಾವಲ್ಕಗಳಿಗೆ ಸೀಮಿತಗೊಂಡಿದೆ.

2. ಶಂಕುವಿನಾಕಾರದ ಮರಗಳ (ಕೊನಿಫೆರಸ್) ಅರಣ್ಯಗಳು: ಟಂಡ್ರ ಪ್ರದೇಶದಲ್ಲಿ ಹಂಚಿಕೆಯಾಗಿವೆ. ಅವುಗಳನ್ನು 'ತೈಗ ಅರಣ್ಯ' ಎಂತಲೂ ಕರೆಯಲಾಗಿದೆ. ಫರ್, ಸ್ಪ್ರೂಸ್, ಲಾರ್ಚ್ ಮತ್ತು ಪೈನ್ ಎಂಬುವವು ಇಲ್ಲಿ ಬೆಳೆಯುವ ಮುಖ್ಯ ಮರಗಳು. ಅವು ಮೃದು ಮರದ ತಿರುಳಿನ ಮರಗಳಾಗಿರುತ್ತವೆ.



ಚಿತ್ರ 11.5 – ತೈಗ ಅರಣ್ಯ

3. ಸಮಶೀತೋಷ್ಣವಲಯದ ಹುಲ್ಲುಗಾವಲು (ಸ್ಟೆಪ್ಪಿ): ಮಧ್ಯ ಏಷ್ಯ ಮತ್ತು ಮರುಭೂಮಿ ಮತ್ತು ಅರೆಮರುಭೂಮಿಗಳ ಅಂಚುಗಳಲ್ಲಿ ಕಂಡುಬರುತ್ತದೆ. ಕಡಿಮೆ ಮಳೆಯಿಂದಾಗಿ ಇಲ್ಲಿ ಕಡಿಮೆ ಎತ್ತರವುಳ್ಳ ಹುಲ್ಲು ಬೆಳೆಯುತ್ತದೆ.

4. ಮರುಭೂಮಿ ಸಸ್ಯವರ್ಗ: ಇದು ಏಷ್ಯದ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳ ಮರುಭೂಮಿಗಳಲ್ಲಿ ಕಂಡುಬರುತ್ತದೆ. ಉದಾ: ಅರೇಬಿಯ, ಇರಾನ್, ಥಾರ್ ಮರುಭೂಮಿ ಇತ್ಯಾದಿ. ಇಲ್ಲಿ ಮುಳ್ಳಿನ ಗಿಡಗಂಟಿ, ಕುರುಚಲು ಸಸ್ಯ ಮತ್ತು ಹುಲ್ಲುಗಳು ಮಾತ್ರ ಬೆಳೆಯುವವು. ಓಯಾಸಿಸ್‌ಗಳ ಬಳಿ ಖರ್ಜೂರ ಮತ್ತು ತಾಳೆ ಜಾತಿ ಮರಗಳು ಕಂಡುಬರುವವು.



ಚಿತ್ರ 11.6 – ಮಾನ್ಸೂನ್ ಅರಣ್ಯ

5. ಮಾನ್ಸೂನ್ ಅರಣ್ಯಗಳು: ದಕ್ಷಿಣ, ನೈಋತ್ಯ ಮತ್ತು ಪೂರ್ವ ಏಷ್ಯ ಭಾಗಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಚ್ಚು ಶಾಖ ಮತ್ತು ಮಳೆ ಬೀಳುವುದರಿಂದ ಕಾಡುಗಳಿರುತ್ತವೆ. ತೇಗ, ಸಲೆ, ಆಲ, ಬಿದಿರು, ಶ್ರೀಗಂಧ ಹಾಗೂ ಇನ್ನೂ ಹಲವು ಗಟ್ಟಿ ಮರಗಳು ಇಲ್ಲಿ ಬೆಳೆಯುತ್ತವೆ. ಅವು ಶರತ್ಕಾಲದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ.

6. ಸಮಭಾಜಕ ವೃತ್ತ ಪ್ರದೇಶದ ಅರಣ್ಯಗಳು: ಹೆಚ್ಚಾಗಿ ಪೂರ್ವ ಇಂಡೀಸ್ ಮತ್ತು ಅಧಿಕ ಮಳೆ ಬೀಳುವ ಮಾನ್ಸೂನ್ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅವು ಸದಾ ಹಸಿರು ಮತ್ತು ಎತ್ತರಕ್ಕೆ ಬೆಳೆಯುವ ಮರಗಳಿಂದ ಕೂಡಿರುತ್ತವೆ. ಮಹೊಗನಿ, ಎಬೋನಿ, ರಬ್ಬರ್, ಬಿದಿರು, ಬೀಟೆ ಇಲ್ಲಿ ಬೆಳೆಯುವ ಪ್ರಮುಖ ಮರಗಳು.




ಚಿತ್ರ 11.7 – ಸಮಭಾಜಕ ವೃತ್ತ ಪ್ರದೇಶದ ಅರಣ್ಯ

7. ಮೆಡಿಟರೇನಿಯನ್ ಸಸ್ಯವರ್ಗವು ಏಷ್ಯದ ನೈಋತ್ಯ ಭಾಗಗಳಲ್ಲಿ ಕಂಡುಬರುವುದು. ಇಲ್ಲಿ ಆಲಿವ್, ಫಿಗ್, ಓಕ್ ಮರಗಳು ಮತ್ತು ಕುರುಚಲು ಸಸ್ಯ ಬೆಳೆಯುತ್ತವೆ. ಮರಗಳು ಕಡಿಮೆ ಎತ್ತರಕ್ಕೆ ಬೆಳೆಯುತ್ತವೆ.

6. ಪ್ರಮುಖ ಖನಿಜಗಳು

ಕಬ್ಬಿಣದ ಅದಿರು: ಇದು ಕಬ್ಬಿಣ ಮತ್ತು ಉಕ್ಕು ತಯಾರಿಕೆಗೆ ಅಗತ್ಯವಾದ ಕಚ್ಚಾವಸ್ತು. ಏಷ್ಯ ಅಪಾರ ಕಬ್ಬಿಣದ ಅದಿರು ಹೊಂದಿದೆ ಮತ್ತು ಪ್ರಪಂಚದ ಶೇ.30 ಭಾಗದಷ್ಟು ಕಬ್ಬಿಣದ ಅದಿರು ನಿಕ್ಷೇಪ ಈ ಖಂಡದಲ್ಲಿದೆ. ಚೀನ ಅಧಿಕ ಕಬ್ಬಿಣದ ಅದಿರು ಉತ್ಪಾದಿಸುವ ದೇಶ. ಭಾರತ, ಟರ್ಕಿ, ಫಿಲಿಪ್ಪೈನ್ಸ್, ಮಲೇಷ್ಯ, ಥೈಲೆಂಡ್, ಇಂಡೋನೇಷ್ಯ, ಮಯನ್ಮಾರ್, ವಿಯೆಟ್ನಾಂ, ಕಜಕಿಸ್ತಾನ ಮತ್ತು ಪಾಕಿಸ್ತಾನ ಇತರೆ ಪ್ರಮುಖ ಉತ್ಪಾದಕರು. ಕೊರಿಯ, ತೈವಾನ್, ಶ್ರೀಲಂಕ, ಜಪಾನ್ ಮತ್ತು ನೈಋತ್ಯ ಏಷ್ಯದ ರಾಷ್ಟ್ರಗಳಲ್ಲಿ ಅಲ್ಪ ಪ್ರಮಾಣದ ಕಬ್ಬಿಣದ ಅದಿರು ದೊರೆಯುತ್ತದೆ.



ಭೂಪಟ 11.9 – ಪ್ರಮುಖ ಖನಿಜಗಳು

ಮ್ಯಾಂಗನೀಸ್: ಪ್ರಮುಖ ಮಿಶ್ರಲೋಹ ಖನಿಜ. ಉತ್ತಮ ಉಕ್ಕು ತಯಾರಿಕೆಗೆ ಇದು ಅತ್ಯಾವಶ್ಯಕ. ಏಷ್ಯ ಖಂಡವು ಅಧಿಕ ಪ್ರಮಾಣದ ಮ್ಯಾಂಗನೀಸ್ ನಿಕ್ಷೇಪವನ್ನು ಹೊಂದಿದೆ. ಅದು ಟ್ರಾನ್ಸ್ ಕಕಾಸಸ್, ಮಧ್ಯ ಏಷ್ಯ, ಸೈಬೀರಿಯ, ಚೀನ ಮತ್ತು ಭಾರತಗಳಲ್ಲಿ ಹೆಚ್ಚು ಹಂಚಿಕೆಯಾಗಿದೆ. ಉತ್ಪಾದನೆಯಲ್ಲಿ ಚೀನ ಮುಂದಿದೆ.

ಬಾಕ್ಸೈಟ್: ಇದು ಕಬ್ಬಿಣೇತರ ಲೋಹ. ಖನಿಜ ಮತ್ತು ಅಲ್ಯೂಮಿನಿಯಂ ತಯಾರಿಸುವುದಕ್ಕೆ ಅಗತ್ಯವಾದುದು. ಏಷ್ಯ ಅಪಾರವಾದ ಬಾಕ್ಸೈಟ್ ನಿಕ್ಷೇಪವುಳ್ಳ ಖಂಡ. ಅದು ಹೆಚ್ಚಾಗಿ ಕಜಕ್‌ಸ್ತಾನ ಮತ್ತು ದಕ್ಷಿಣ ಕೇಂದ್ರ ಸೈಬೀರಿಯಾಗಳಲ್ಲಿ ದೊರೆಯುತ್ತದೆ. ಅಲ್ಲದೆ ಭಾರತ ಇಂಡೊನೇಷ್ಯ, ಟರ್ಕಿ, ಮಲೇಷ್ಯ ಹಾಗೂ ಚೀನ ದೇಶಗಳಲ್ಲಿಯೂ ಸಾಕಷ್ಟು ಬಾಕ್ಸೈಟ್ ದೊರೆಯುತ್ತದೆ.

ಕಲ್ಲಿದ್ದಲು: ಇದು ಪಳಯುಳಿಕೆ ಇಂಧನ ಖನಿಜ. ಒಂದು ಪ್ರಮುಖ ಶಕ್ತಿಯ ಮೂಲ. ಏಷ್ಯದಲ್ಲಿ ಅಪಾರವಾದ ಕಲ್ಲಿದ್ದಲು ದೊರೆಯುತ್ತದೆ. ಆದರೆ ಅದರ ಹಂಚಿಕೆಯಲ್ಲಿ ಅಸಮಾನತೆಯಿದೆ. ಅತ್ಯಧಿಕ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಚೀನ, ಭಾರತ, ಇಂಡೊನೇಷ್ಯ, ಸೈಬೀರಿಯ ಮತ್ತು ಮಧ್ಯ ಏಷ್ಯ ದೇಶಗಳಲ್ಲಿ ಕಂಡುಬರುತ್ತದೆ.

ಪ್ರಪಂಚದಲ್ಲಿ ಅತಿ ಹೆಚ್ಚು ಕಲ್ಲಿದ್ದಲು ನಿಕ್ಷೇಪ ಮತ್ತು ಉತ್ಪಾದನೆ ಎರಡರಲ್ಲೂ ಚೀನ ದೇಶ ಮೊದಲನೆಯದು. ಚೀನದ ಎಲ್ಲಾ ಪ್ರಾಂತ್ಯಗಳಲ್ಲೂ ಕಲ್ಲಿದ್ದಲು ಲಭ್ಯವಿದೆ. ಭಾರತವು ಏಷ್ಯದ ಎರಡನೆಯ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ದೇಶ. ಇತ್ತೀಚೆಗೆ ಮಧ್ಯ ಸೈಬೀರಿಯಾದಲ್ಲಿರುವ ಕುಜೆನೆಟ್ಜ್ ಬಯಲು ಹೆಚ್ಚು ಕಲ್ಲಿದ್ದಲು ಉತ್ಪಾದಿಸುವ ಭಾಗವಾಗಿದೆ. ಅಲ್ಪ ಪ್ರಮಾಣದ ಕಲ್ಲಿದ್ದಲು ನಿಕ್ಷೇಪವು ಉಜ್ಬೇಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಪಾಕಿಸ್ತಾನ ಮತ್ತು ಜಪಾನ್ ದೇಶಗಳಲ್ಲಿ ದೊರೆಯುತ್ತದೆ.

ಪೆಟ್ರೋಲಿಯಂ: ಇದೊಂದು ತೈಲ ಇಂಧನ. ಸ್ವಯಂಚಾಲಿತ ವಾಹನಗಳು, ರೈಲು, ಹಡಗು ಮತ್ತು ವಿಮಾನಗಳಿಗೆ ಬೇಕಾಗುವ ಶಕ್ತಿಸಾಧನವಾಗಿದೆ. ನೈಋತ್ಯ ಏಷ್ಯಾದಲ್ಲಿ ಅಪಾರವಾದ ಪೆಟ್ರೋಲಿಯಂ ನಿಕ್ಷೇಪವಿದೆ. ಅದು ಹೆಚ್ಚಾಗಿ ಸೌದಿ ಅರೇಬಿಯ, ಇರಾನ್, ಇರಾಕ್, ಕುವೈತ್, ಬಹ್ರೇನ್, ಕಟಾರ್ ಮತ್ತು ಸಂಯುಕ್ತ ಅರಬ್ ಎಮಿರೇಟೀಸ್ (UAE) ಗಳಲ್ಲಿ ಕಂಡುಬರುವುದು. ಇವು ಪ್ರಪಂಚದ ಒಟ್ಟು ಪೆಟ್ರೋಲ್ ನಿಕ್ಷೇಪದಲ್ಲಿ ಅರ್ಧಭಾಗವನ್ನು ಹೊಂದಿವೆ ಮತ್ತು ಪ್ರಪಂಚದ ಶೇ.25 ಭಾಗದಷ್ಟು ಪೆಟ್ರೋಲನ್ನು ಉತ್ಪಾದಿಸುತ್ತವೆ.

ಪೂರ್ವ ಮತ್ತು ಆಗ್ನೇಯ ಏಷ್ಯದ ಕೆಲವು ದೇಶಗಳಲ್ಲಿಯೂ ಪೆಟ್ರೋಲಿಯಂ ನಿಕ್ಷೇಪ ದೊರೆಯತ್ತದೆ. ಉದಾ: ಇಂಡೊನೇಷ್ಯ, ಮಲೇಷ್ಯ, ಚೀನ, ತೈವಾನ್, ಮಯನ್ಮಾರ್, ಸಾರ್ವಾಕ್, ಭಾರತ, ವಿಯೆಟ್ನಾಂ ಇತ್ಯಾದಿ.

ಇತ್ತೀಚೆಗೆ ಸೈಬೀರಿಯ ಭಾಗದಲ್ಲಿ ಪೆಟ್ರೋಲಿಯಂ ಉತ್ಪಾದನೆ ಹೆಚ್ಚಾಗಿದೆ.

- ಪೆಟ್ರೋಲಿಯಂ ಶಬ್ದ (Petroleum)ವು 'Petra' ಎಂದರೆ 'ಕಲ್ಲು' ಮತ್ತು 'Oleum' ಎಂದರೆ 'ತೈಲ' ಎಂಬ ಎರಡು ಲ್ಯಾಟಿನ್ ಬಾಷಾ ಪದಗಳಿಂದ ಸಂಯೋಜಿತವಾದದ್ದು.
- ಸೌದಿ ಅರೇಬಿಯ ಪ್ರಪಂಚದಲ್ಲೇ ಅತಿ ಹೆಚ್ಚು ಪೆಟ್ರೋಲಿಯಂ ಉತ್ಪಾದಿಸುವ ದೇಶ.

ಮಧ್ಯ ಏಷ್ಯದ ಟರ್ಕ್ಮೇನಿಸ್ತಾನ, ಉಜ್ಬೇಕಿಸ್ತಾನ, ಕಜಕಿಸ್ತಾನ ಮೊದಲಾದ ಭಾಗಗಳಲ್ಲಿಯೂ ಸಾಕಷ್ಟು ಪೆಟ್ರೋಲ್ ಲಭ್ಯವಿದೆ.

ಪ್ರಮುಖ ಕೈಗಾರಿಕಾ ಪ್ರದೇಶಗಳು

ಏಷ್ಯಾ ಖಂಡವು ವಿಶಾಲ ಪ್ರದೇಶ. ಸಮೃದ್ಧ ಖನಿಜ ಮತ್ತು ವ್ಯವಸಾಯೋತ್ಪನ್ನಗಳನ್ನು ಹೊಂದಿದ್ದರೂ ಯೂರೋಪ್ ಖಂಡದಷ್ಟು ಕೈಗಾರಿಕೀಕರಣ ಸಾಧಿಸಿಲ್ಲ. ಇದಕ್ಕೆ ಮುಖ್ಯ ಕಾರಣಗಳೆಂದರೆ ತಂತ್ರಜ್ಞಾನ, ಬಂಡವಾಳಗಳ ಕೊರತೆ, ಸಾಂಪ್ರದಾಯದ ಸ್ವಭಾವ ಮತ್ತು ಹೆಚ್ಚು ಜನರು ವ್ಯವಸಾಯದಲ್ಲಿ ತೊಡಗಿರುವುದು.

ಪ್ರಮುಖ ಕೈಗಾರಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನುಳ್ಳ ಪ್ರದೇಶಕ್ಕೆ 'ಕೈಗಾರಿಕಾ ಪ್ರದೇಶ' ಎನ್ನುವರು. ಇವು ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲಕರವಾದ ಕೆಲವೇ ಭಾಗಗಳಲ್ಲಿ ಕಂಡುಬರುತ್ತವೆ.

ಏಷ್ಯದ ಪ್ರಮುಖ ಕೈಗಾರಿಕಾ ಪ್ರದೇಶಗಳು ಈ ಕೆಳಕಂಡಂತಿವೆ.

ಜಪಾನ್: ಈ ದೇಶದಲ್ಲಿ ನಾಲ್ಕು ಪ್ರಮುಖ ಕೈಗಾರಿಕಾ ಪ್ರದೇಶಗಳಿವೆ.

1 **ಕಿಹೀನ್ ಪ್ರದೇಶ**ವು ಟೋಕಿಯೊ, ಕವಾಸಾಕಿ ಮತ್ತು ಯೋಕೊಹಾಮ ನಗರಗಳನ್ನೊಳಗೊಂಡ ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ ಜವಳಿ, ಎಂಜಿನಿಯರಿಂಗ್, ಹಡಗುಕಟ್ಟುವುದು, ಕಾಗದ ಮತ್ತು ಸಿಮೆಂಟ್ ಕೈಗಾರಿಕೆಗಳು ಪ್ರಮುಖ.

2 **ಹಾನ್ಶಿನ್ ಪ್ರದೇಶ**ದಲ್ಲಿ ಒಸಾಕ, ಕೋಬೆ ಮತ್ತು ಕಿಯೂಟೊ ಮಹಾನಗರಗಳಿವೆ. ಇಲ್ಲಿ ಜವಳಿ (ಬಟ್ಟೆ) ಕೈಗಾರಿಕೆ ಪ್ರಮುಖ.

3 **ಐಸೆ ಕೊಲ್ಲಿ ಪ್ರದೇಶ**ವು ನಗೋಯ ನಗರದ ಸುತ್ತಮುತ್ತ ವಿಸ್ತರಿಸಿದೆ. ಇಲ್ಲಿ ಜವಳಿ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳು ಪ್ರಮುಖವಾಗಿವೆ.

4 **ಕಿಟ ಕಿಯೂಶು ಪ್ರದೇಶ**ವು ಯವಾಟ, ಮೋಜಿ ಮತ್ತು ಕೊಕುರ ನಗರಗಳಿಂದ ಕೂಡಿದ್ದು ಉಕ್ಕು, ಹಡಗು, ಯಂತ್ರೋಪಕರಣ ಮತ್ತು ಜವಳಿ ಉದ್ಯಮಕ್ಕೆ ಪ್ರಸಿದ್ಧ.

ಚೀನ: ವ್ಯವಸಾಯ ಪ್ರಧಾನ ದೇಶವಾಗಿದ್ದು, ಕೈಗಾರಿಕಾಭಿವೃದ್ಧಿ ಕಡಿಮೆ. ಕಮ್ಯುನಿಷ್ಟ್ ಸರ್ಕಾರ ಬಂದ ಮೇಲೆ ಕೈಗಾರಿಕೀಕರಣದ ಕಡೆಗೆ ಆದ್ಯತೆ ನೀಡಲಾಗಿದೆ. ಈ ದೇಶದ ಪ್ರಮುಖ ಕೈಗಾರಿಕಾ ಪ್ರದೇಶಗಳೆಂದರೆ;

1 **ಮಂಚೂರಿಯ ಪ್ರದೇಶ:** ಇಲ್ಲಿ ಉಕ್ಕು, ಎಂಜಿನಿಯರಿಂಗ್ ಮತ್ತು ರಾಸಾಯನಿಕ ಕೈಗಾರಿಕೆಗಳು ಮುಖ್ಯವಾದವು.

2 **ಬೀಜಿಂಗ್ ಪ್ರದೇಶ:** ಎಂಜಿನಿಯರಿಂಗ್, ಹಡಗು ನಿರ್ಮಾಣ, ಜವಳಿ ಮತ್ತು ರಸಾಯನಿಕ ಕೈಗಾರಿಕೆಗಳು ಮುಖ್ಯವಾದವು.

3 **ಶಾನ್ಸಿ–ಬಾವಟೋವ್:** ಕಬ್ಬಿಣ ಮತ್ತು ಉಕ್ಕು ಹಾಗೂ ಕೃಷಿ ಉಪಕರಣಗಳು.

4 **ಚಾಂಗ್ ಜಿಯಾಂಗ್:** ಪ್ರದೇಶದಲ್ಲಿ ಜವಳಿ ಉದ್ಯಮ, ಹಡಗು ನಿರ್ಮಾಣ ಮತ್ತು ಉಕ್ಕು ತಯಾರಿಕೆ ಕಂಡುಬರುತ್ತವೆ.

5 **ವುಹಾನ್ ಪ್ರದೇಶ:** ಲೋಹ ತಯಾರಿಕೆ ಮತ್ತು ಬೃಹತ್ ಕೈಗಾರಿಕಾ ಸರಕು ತಯಾರಿಕೆ.

ಭಾರತ – ಪ್ರಮುಖ ಕೈಗಾರಿಕಾ ಪ್ರದೇಶಗಳು : 1. ಹೂಗ್ಲಿ–ಕೋಲ್ಕೊತ ಪ್ರದೇಶ, 2. ಮುಂಬಯಿ –ಪುಣೆ ಪ್ರದೇಶ, 3. ಅಹ್ಮದಾಬಾದ್ –ವಡೋದರ ಪ್ರದೇಶ, 4. ಮದುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ, 5. ಛೋಟನಾಗಪುರ ಪ್ರದೇಶ 6. ದೆಹಲಿ–ಮೀರತ್, 7. ವಿಶಾಖಪಟ್ಟಣ, ಹಾಗೂ 8. ಕೊಲ್ಲಮ್–ತಿರುವನಂತಪುರ ಪ್ರದೇಶ.

ದಕ್ಷಿಣ ಕೊರಿಯ, ಹಾಂಕಾಂಗ್, ಸಿಂಗಾಪುರ ಮತ್ತು ಮಲೇಷ್ಯಗಳಲ್ಲಿ ಏಷ್ಯದ ಇತರ ಕೈಗಾರಿಕಾ ಪ್ರದೇಶಗಳಿವೆ.


7. ಏಷ್ಯದ ಜನಸಂಖ್ಯೆ

ಬೆಳವಣಿಗೆ: ಏಷ್ಯಖಂಡದಲ್ಲಿ ಸುಮಾರು 4.2 ಬಿಲಿಯನ್ ಜನಸಂಖ್ಯೆಯಿದೆ. ಇದು ಪ್ರಪಂಚದ ಜನಸಂಖ್ಯೆಯ ಶೇ.60 ಭಾಗದಷ್ಟಾಯಿತು. ಇಂದಿನ ಜನಸಂಖ್ಯೆ ಕಳೆದ ಮೂರು ಶತಮಾನಗಳಿಗಿಂತ ಐದು ಪಟ್ಟು ಹೆಚ್ಚಾಗಿದೆ. 1950 ರಲ್ಲಿ ಏಷ್ಯದ ಜನಸಂಖ್ಯೆ 1.4 ಬಿಲಿಯನ್ ಮಾತ್ರ. ಇತ್ತೀಚಿನವರೆಗೂ ಜನಸಂಖ್ಯಾ ಬೆಳವಣಿಗೆಯ ದರವು ಹೆಚ್ಚಾಗಿತ್ತು. ಆದರೆ ಈಗ ಅದು ಕಡಿಮೆಯಾಗುತ್ತಿದೆ.

ಹಂಚಿಕೆ ಮತ್ತು ಸಾಂದ್ರತೆ: ಏಷ್ಯಖಂಡದ ಜನಸಂಖ್ಯಾ ಹಂಚಿಕೆಯಲ್ಲಿ ಹೆಚ್ಚು ಅಸಮಾನತೆಯಿದೆ. ಭೂಪಟ 11.10ನ್ನು ಗಮನಿಸಿ. ಏಷ್ಯದ ಹೆಚ್ಚಿನ ಭಾಗಗಳಲ್ಲಿ ವಿರಳ ಜನಸಂಖ್ಯೆ ಮತ್ತು ಕಡಿಮೆ ಭಾಗಗಳಲ್ಲಿ ಅಧಿಕ ಜನಸಂಖ್ಯೆಯಿರುವುದನ್ನು ನೀವು ಕಾಣುವಿರಿ.

ಏಷ್ಯ ಖಂಡದ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 96 ಜನರು. ಅತ್ಯಂತ ಶೀತವಾದ ಉತ್ತರ ಮತ್ತು ಪೂರ್ವ ಸೈಬೀರಿಯ, ಮರುಭೂಮಿಗಳನ್ನುಳ್ಳ ಅರೇಬಿಯ, ಇರಾನ್ ಮತ್ತು ಥಾರ್ (ಭಾರತ) ಪ್ರದೇಶಗಳು ಹಾಗೂ ಅತ್ಯಂತ ಎತ್ತರವುಳ್ಳ ಮಧ್ಯ ಏಷ್ಯ ಭಾಗಗಳು ಏಷ್ಯಾದ ಅತಿ ವಿರಳ ಜನಸಂಖ್ಯಾ ಭಾಗಗಳು.

ಏಷ್ಯದ ಜನಭರಿತ ಭಾಗಗಳಲ್ಲಿ ಭಾರತದ ಮಹಾಮೈದಾನಗಳು, ಬಾಂಗ್ಲಾದೇಶ, ಚೀನ, ಜಪಾನ್, ಕೊರಿಯ ಹಾಗೂ ಜಾವದ್ವೀಪ(ಇಂಡೊನೇಷ್ಯ)ಗಳು ಪ್ರಮುಖವಾದವು. ಇವುಗಳಲ್ಲಿ ಹೆಚ್ಚಿನ ಭಾಗಗಳು ಫಲವತ್ತಾದ, ಸಮತಟ್ಟಾದ ಮೈದಾನ ಅಥವಾ ನದಿ ಬಯಲುಗಳನ್ನುಳ್ಳವು. ಮಯನ್ಮಾರ್, ಥೈಲೆಂಡ್, ಫಿಲಿಪ್ಪೈನ್ಸ್, ಇರಾಕ್, ಶ್ರೀಲಂಕ, ವಿಯೆಟ್ನಾಂ, ಮಲೇಷ್ಯ ಮತ್ತು ಕಾಂಬೋಡಿಯಗಳಲ್ಲಿಯೂ ಜನಸಾಂದ್ರತೆಯು ಹೆಚ್ಚಾಗಿದೆ.



ಭೂಪಟ 11.10 – ಏಷ್ಯದ ಜನಸಾಂದ್ರತೆ

ಏಷ್ಯ ಖಂಡದಲ್ಲಿ ವಿವಿಧ ಜನಾಂಗದವರು ವಾಸಿಸುತ್ತಿದ್ದಾರೆ. ಪೂರ್ವ ಮತ್ತು ಆಗ್ನೇಯ ಏಷ್ಯಗಳಲ್ಲಿ ಹಳದಿ ವರ್ಣದ ಜನ(ಮಂಗೋಲರು)ರಿದ್ದಾರೆ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ

ಮತ್ತು ದಕ್ಷಿಣ ಏಷ್ಯದ ಇತರ ಭಾಗಗಳಲ್ಲಿ ಕಂದು ವರ್ಣದ ಜನರಿದ್ದಾರೆ. ನೈಋತ್ಯ ಏಷ್ಯದ ಭಾಗಗಳಲ್ಲಿ ಅರಬ್ಬರು, ಟರ್ಕರು, ಪರ್ಷಿಯನ್ನರು, ಆಫ್‌ಘನರು ಮೊದಲಾದವರು ವಾಸಿಸುವರು. ಮಧ್ಯ ಏಷ್ಯ ಭಾಗಗಳಲ್ಲಿ ಕಜಕ್ ಮತ್ತು ಕಿರ್ಘಿಜರಿದ್ದಾರೆ. ಇದೇ ರೀತಿ ವಿವಿಧ ಧರ್ಮಿಯರೂ ಸಹ ಏಷ್ಯದಲ್ಲಿದ್ದಾರೆ. ✤

ಹೊಸ ಪದಗಳು

ಶರತ್ಕಾಲ, ಬಿಲಿಯನ್, ಶಂಕುವಿನಾಕಾರದ ಮರಗಳ ಅರಣ್ಯ (ಶಂಕುಧಾರಿಕಾಡು), ಪಳೆಯುಳಿಕೆ ಇಂಧನ, ಮಡಿಕೆ ಪರ್ವತಗಳು, ಗ್ರಂಥಿ, ಸುಣ್ಣಕಲ್ಲು, ಪಾಚಿ, ಶಿಲಾವಲ್ಕ, ಓಯಾಸಿಸ್, ಕಚ್ಚಾವಸ್ತು, ತೈಗ, ಟಂಡ್ರ.

ಇದು ನಿಮಗೆ ತಿಳಿದಿರಲಿ

- ಏಷ್ಯ ಖಂಡದ ಅತ್ಯಂತ ಎತ್ತರವಾದ ಬಿಂದು ಮೌಂಟ್ ಎವರೆಸ್ಟ್ (8848 ಮೀ.)
- ಏಷ್ಯದ ಅತ್ಯಂತ ಕೆಳಮಟ್ಟದ ಬಿಂದು ಮೃತ ಸಮುದ್ರ.
- ಪ್ರಪಂಚದಲ್ಲೇ ಹೆಚ್ಚಿನ ಸಂಖ್ಯೆಯ ಹಿಮನದಿಗಳು ಕಾರಾಕೊರಂ ಪರ್ವತ ಸರಣಿಗಳಲ್ಲಿವೆ.
- ಟಿಬೆಟ್ ಪ್ರಪಂಚದ ಅತಿ ಎತ್ತರವಾದ ಪ್ರಸ್ಥಭೂಮಿ. ಇದನ್ನು ಪ್ರಪಂಚದ ಮೇಲ್ಛಾವಣಿ ಎಂದು ಕರೆಯಲಾಗಿದೆ.
- ಕ್ಯಾಸ್ಪಿಯನ್ ಸಮುದ್ರವು ಪ್ರಪಂಚದ ಅತ್ಯಂತ ವಿಶಾಲವಾದ ಒಳನಾಡಿನ ಜಲರಾಶಿಯಾಗಿದೆ.
- ದಕ್ಷಿಣ ಸೈಬೀರಿಯಾದಲ್ಲಿರುವ ಬೈಕಲ್ ಸರೋವರವು ಪ್ರಪಂಚದಲ್ಲೇ ಆಳವುಳ್ಳದ್ದು.
- ಕ್ಷೇತ್ರ ಮತ್ತು ಜನಸಂಖ್ಯೆ ಎರಡರಲ್ಲೂ ಏಷ್ಯದ ಚಿಕ್ಕದೇಶ ಮಾಲ್ಡೀವ್ಸ್.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ

1 'ಏಷ್ಯ ವೈಪರೀತ್ಯಗಳ ಖಂಡ' ಎಂದು ಕರೆಯುವರು. ಏಕೆ?
2 ಏಷ್ಯ ಖಂಡದ ಭೌಗೋಳಿಕ ಸನ್ನಿವೇಶ ತಿಳಿಸಿ.
3 ಏಷ್ಯದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?
4 ಏಷ್ಯದ ಅತಿ ಎತ್ತರವುಳ್ಳ ಪರ್ವತ ಮತ್ತು ಪ್ರಸ್ಥಭೂಮಿಗಳಾವುವು?
5 ಏಷ್ಯದಲ್ಲಿ ಯಾವ ಋತುವಿನಲ್ಲಿ ಹೆಚ್ಚು ಮಳೆಯಾಗುವುದು?
6 ಏಷ್ಯದ ಪ್ರಮುಖ ಆಹಾರ ಬೆಳೆಗಳು ಯಾವುವು?
7 ಏಷ್ಯದ ಪ್ರಮುಖ ಪಳೆಯುಳಿಕೆ ಇಂಧನಗಳನ್ನು ಹೆಸರಿಸಿ?
8 ಏಷ್ಯ ಖಂಡದ ಯಾವ ಭಾಗಗಳಲ್ಲಿ ವಿರಳ ಜನಸಂಖ್ಯೆ ಇದೆ? ಏಕೆ?
9 ಕೈಗಾರಿಕಾ ಪ್ರದೇಶಗಳೆಂದರೇನು?

ಚಟುವಟಿಕೆಗಳು

1 ನಿಮ್ಮ ಅಟ್ಲಾಸ್ ಪುಸ್ತಕದ ಸಹಾಯದಿಂದ ಏಷ್ಯ ಭೂಪಟವನ್ನು ಅಧ್ಯಯನ ಮಾಡಿ, ಪರ್ವತ, ಪ್ರಸ್ಥಭೂಮಿ, ಮೈದಾನಗಳು ಮತ್ತು ನದಿಗಳನ್ನು ಗುರುತಿಸಿ ಮತ್ತು ಪಟ್ಟಿ ಮಾಡುವುದು. ಅವುಗಳನ್ನು ಭೂಪಟದಲ್ಲಿ ಗುರುತಿಸಿ.

2 ಏಷ್ಯ ಖಂಡದ ಪ್ರಮುಖ ನದಿಗಳು ಮತ್ತು ಅವುಗಳ ಉಪನದಿಗಳ ವಿವರಗಳಾದ–ಉಗಮಸ್ಥಾನ, ಉದ್ದ, ಉಪನದಿಗಳು, ಮುಖಜಭೂಮಿ, ಅಣೆಕಟ್ಟುಗಳ ಮಾಹಿತಿ ಮತ್ತು ಚಿತ್ರಗಳನ್ನು ಸಂಗ್ರಹಿಸುವುದು.

3 ನೀವು ವಾಸಮಾಡುತ್ತಿರುವ ನೆರೆಹೊರೆಯನ್ನು ವೀಕ್ಷಿಸಿ, ಅಲ್ಲಿನ ಬೆಳೆ, ಸಸ್ಯವರ್ಗ ಮತ್ತು ಜಲರಾಶಿಗಳ ಬಗ್ಗೆ ಪಟ್ಟಿ ಮಾಡುವುದು.

☆ ☆ ☆

ನಿಮ್ಮಲ್ಲಿ ನಿಮಗೆ ಶ್ರದ್ಧೆಯಿರಲಿ. ಮಹತ್ತರ ಶ್ರದ್ಧೆಯೇ ಮಹಾಕಾರ್ಯಗಳ ಉಗಮಸ್ಥಾನ!

–ಸ್ವಾಮಿ ವಿವೇಕಾನಂದ